
# ಕರ್ನಾಟಕ ವಿಕಾಸ
# Karnataka Vikas

ಏಪ್ರಿಲ್ April 2017



## ಮೋಹನ್ ದಾಸ್ ಗಾಂಧಿ ಅವರನ್ನು ಮಹಾತ್ಮರನ್ನಾಗಿ ಪರಿವರ್ತಿಸಿದ ಆಧ್ಯಾತ್ಮಿಕ ಸಂಬಂಧದ ರೂಪಕ ಪ್ರಧಾನ ಪ್ರದರ್ಶನ



## ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರದ ಪ್ರಥಮ ಆದ್ಯತೆ

# ಮೋಹನದಾಸ ಗಾಂಧಿ ಅವರನ್ನು ಮಹಾತ್ಮರನ್ನಾಗಿಸಿದ.....







"ಮೋಹನದಾಸ ಗಾಂಧಿ ಅವರನ್ನು ಮಹಾತ್ಮರನ್ನಾಗಿ ಪರಿವರ್ತಿಸಿದ ಆಧ್ಯಾತ್ಮಿಕ ಸಂಬಂಧದ ಅತ್ಯುತ್ತಮ ರೂಪಕವನ್ನು ನಾನು ಈ ಹಿಂದೆ ಎಂದೂ ನೋಡಿಲ್ಲವೆಂದು ಹೇಳಬಲ್ಲೆ. ಎಂದಾದರೂ ಹೀಗೆ, ಪುಳಕಿತರಾಗುವಂತೆ, ಸಂತುಷ್ಟರಾಗುವಂತೆ ಮಾಡಬಲ್ಲ ಮೈಮರೆಸುವ ದೃಶ್ಯಗಳನ್ನು ನೋಡಿದಾಗ ವೈಚಾರಿಕತೆಯನ್ನು ಕುದುರಿಸಿ ರಾಷ್ಟ್ರಪ್ರೇಮ ಉದ್ದೀಪನಗೊಳಿಸುತ್ತದೆ. ಈ ರೂಪಕವನ್ನು ನೋಡಿದ ನನಗೆ ಒಂದು ಹಂಡೆಯಷ್ಟು ಹಾಲನ್ನು ಕುಡಿದಷ್ಟು ಸಂತೋಷವಾಗಿದೆ. ನಮ್ಮ ಇಂದಿನ ಯುವಜನಾಂಗ ಇಂಥ ರೂಪಕ ನೋಡಲಿ ಮತ್ತು ಇದರಿಂದ ರಾಷ್ಟ್ರವನ್ನು ಕಟ್ಟುವ ಪ್ರೇರೇಪಣೆ, ಆದರ್ಶಗಳನ್ನು ಮೈಗೂಡಿಸಿಕೊಳ್ಳಲಿ ಎಂದು ಆಶಿಸುವೆ"

– ಎಚ್.ಕೆ.ಪಾಟೀಲ

**ಗಾಂಧೀಜಿಯವರ 150ನೇ ಜನ್ಮ ಶತಾಬ್ಧಿ ಅಂಗವಾಗಿ ಮೋಹನ್ ದಾಸ್ ಗಾಂಧಿ ಅವರನ್ನು ಮಹಾತ್ಮರನ್ನಾಗಿ ಪರಿವರ್ತಿಸಿದ ಆಧ್ಯಾತ್ಮಿಕ ಸಂಬಂಧದ ರೂಪಕ ಪ್ರಧಾನ ಪ್ರದರ್ಶನ ಸನ್ಮಾನ್ಯ ಸಚಿವರ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಉದ್ಘಾಟನೆಗೊಂಡು ರಾಜ್ಯಾದ್ಯಂತ ಅವರ ಆಶಯದಂತೆ ಪ್ರದರ್ಶನಗೊಳ್ಳುತ್ತಿದೆ.**

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಏಪ್ರಿಲ್ 2017 | ಸಂಪುಟ : 58 | Volume : 58

April 2017 | ಸಂಚಿಕೆ : 05 | Issue : 05


## ಈ ಸಂಚಿಕೆಯೊಳಗೆ


| | | |
|---|---|---|
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 5 |
| ವರದಿ | – ಶ್ರೀಧರ್ ಆರ್ ಇನಾಮದಾರ | 7 |
| | – ದೇವರಾಜ ಪತ್ತಾರ | 9 |
| | – ಗಂಗಾಧರ ಸ್ವಾಮಿ ಎಸ್ | 13 |
| | – ನವೀನ್ | 15 |
| | – ಶ್ರೀನಿವಾಸ ಚಿತ್ರಗಾರ | 18 |
| ಲೇಖನ | – ನಿಂಗೇಗೌಡ | 21 |
| | – ಪಿ. ಶಿವಶಂಕರ್ | 25 |
| ಸಾಧನೆ | – ಕೆ.ಎನ್.ಮಹಾಂತೇಶ್ | 27 |
| ಯಶೋಗಾಥೆ | – ಶ್ರೀಮತಿ ಬಸಮ್ಮ ಹುಡೇದ | 30 |
| | – ವಿವೇಕ್ ಅಮೀನ್ | 33 |
| | – ಚಂದ್ರಶೇಖರ ಯಲಿಗಾರ | 36 |
| ಕವಿಯ(ಕ್ಷ) ಪ್ರಶ್ನೆ | – ಅರುಣ್ ಕುಮಾರ್ ಎಲ್. | 38 |
| ಕಾವ್ಯ ವಿಕಾಸ | – ಮರಿದೇವರ ಸಿದ್ದಪ್ಪ | 39 |
| ಸುತ್ತೋಲೆ | | 40 |






ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಡಾ॥ ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಆಗ್ನೇಸ್ ಮೇರಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–

ಸಂಸ್ಥೆಗಳಿಗೆ ರೂ. 120/–

ಬಿಡಿ ಪ್ರತಿ ರೂ. 10/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



### ಕಚೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ನಂ.309, 3ನೇ ಮಹಡಿ, ಗೇಟ್ ನಂ.1,

ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವಿಧಿ,

ಬೆಂಗಳೂರು – 560 001.

ದೂರವಾಣಿ: 080–22353857

www.rdpr.kar.nic.in

Email: kvrdpr@gmail.com



### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಮಾರ್ಚ್ 2017ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟವು ಆಕರ್ಷಕವಾಗಿದ್ದು ವರ್ಣರಂಜಿತವಾಗಿ ಮೂಡಿಬಂದಿದೆ. ಮಾನ್ಯ ಸಚಿವರಾದ ಎಚ್.ಕೆ.ಪಾಟೀಲ ರವರು ಪರಿಣಾಮಕಾರಿ ಅಭಿವೃದ್ಧಿಗಾಗಿ ಯೋಜನೆಗಳ ಮಾಹಿತಿ ಮತ್ತು ಅರಿವು ಜನಪ್ರತಿನಿಧಿಗಳಿಗೆ ಅತ್ಯಾವಶ್ಯಕ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಜನತಾಂತ್ರಿಕ ಸಂಸ್ಥೆಗಳ ಸದಸ್ಯರೊಂದಿಗೆ ಕೆಲಸ ನಿರ್ವಹಿಸುವಾಗ ಅಧಿಕಾರಿಗಳಿಗೆ ಸಮನ್ವಯದ ಮನೋಭಾವ ಅತ್ಯಗತ್ಯ ಎಂಬ ನುಡಿಯು ನಮ್ಮ ಅಧಿಕಾರಿಗಳಿಗೆ ಒಳ್ಳೆಯ ಮಾಹಿತಿಯಾಗಿದೆ. ಇಲಾಖೆಯ ವಿವಿಧ ಯೋಜನೆಗಳ ಕುರಿತು ಕಾರ್ಯಗಾರ, ಸಭೆ/ ಸಮಾರಂಭಗಳನ್ನು ನಡೆಸುತ್ತಿರುವುದು ಒಳ್ಳೆಯ ಉದ್ದೇಶವಾಗಿದ್ದಾದರೂ ಅದು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಪಾತ್ರ ಹಿರಿಯದ್ದಾಗಿದೆ.

**ಶ್ರೀಮತಿ ಯಶಸ್ವಿನಿ**
ಪ್ರಾಂಶುಪಾಲರು, ವಾಗ್ದೇವಿ ಪದವಿ ಪೂರ್ವ ಮತ್ತು ಪದವಿ ಕಾಲೇಜು,
ಚಿಕ್ಕಬಾಣಾವರ, ಬೆಂಗಳೂರು 560090.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿನ ಉದ್ದೇಶಗಳು, ಕಾರ್ಯಕ್ರಮಗಳು, ಕಾರ್ಯವೈಖರಿಯನ್ನು ಕರ್ನಾಟಕ ವಿಕಾಸ ಪತ್ರಿಕೆಯ ಮೂಲಕ ಗ್ರಾಮೀಣ ಜನರಿಗೆ ತಲುಪಿಸುತ್ತಿರುವುದು ಉತ್ತಮ ಕಾರ್ಯವಾಗಿದೆ. ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಸಚಿವಾಲಯ ಸಂದೇಶದಲ್ಲಿ ಕುಡಿಯುವ ನೀರು ಪೂರೈಕೆಗೆ ಕ್ರಮಗೊಂಡಿರುವುದು, ಅನುದಾನದ ಸದ್ಬಳಕೆ ಹಾಗೂ ಗುಣಾತ್ಮಕ ಕಾಮಗಾರಿಗಳಿಗೆ ಆದ್ಯತೆ ಹಾಗೂ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಬಳಕೆ ಬಗ್ಗೆ ಟಿಪ್ಪಣಿಯ ರೂಪದಲ್ಲಿ ತಿಳಿಸಿರುವುದು ಬಹಳ ಅನುಕೂಲಕವಾಗಿದೆ. ಅದರಂತೆ ಮಾರ್ಚ್ 2017ರ ಸಂಚಿಕೆಯಲ್ಲಿನ ಲೇಖನಗಳು, ವರದಿ, ಯಶೋಗಾಥೆಗಳು, ಕವಿಯ(ಕ್ಷ) ಪ್ರಶ್ನೆ? ಕಾವ್ಯ ವಿಕಾಸ, ಸುತ್ತೋಲೆ, ಸರ್ಕಾರದ ನಡವಳಿಗಳು ಉಪಯುಕ್ತವಾಗಿದೆ. ಬರ ನಿರ್ವಹಣೆಗಾಗಿ ಸರ್ಕಾರ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಬಹಳ ಸಂತೋಷದ ವಿಷಯವಾಗಿದೆ.

**ಶ್ರೀ ಕ್ರಿಸ್ಟೋಫರ್ ಸ್ಟೀಫನ್** ಚಂದಾಪುರ

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮಾರ್ಚ್ 2017ರ ಸಂಚಿಕೆಯು ಬಹಳ ಆಕರ್ಷಕವಾಗಿದೆ. ಸಂಚಿಕೆಯಲ್ಲಿನ ರಘುನಾಥ್ ರವರ ಒಡಿಎಫ್ ಗ್ರಾಮದತ್ತ ಕಡೆಕಾರು ಗ್ರಾಮ ಪಂಚಾಯತ್ ಚಿತ್ತ ವರದಿಯು ಇತರ ಗ್ರಾಮಗಳಿಗೆ ಮಾದರಿಯಾಗುವಲ್ಲಿ ಸಹಕಾರಿಯಾಗಿದೆ. ಶರತ ಕುಮಾರ ಅಭಿಮಾನ ರವರ ಸ್ವಚ್ಛಭಾರತದ ಪುಟ್ಟ ರಾಯಭಾರಿ "ಯುಕ್ತಿ ಅರಳಿ" ಲೇಖನವು ಜನತೆ ಒಳ್ಳೆಯ ಮಾಹಿತಿಯನ್ನು ತಲುಪಿಸುವುದಲ್ಲದೇ, ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎಂಬ ನಾಣ್ನುಡಿಯನ್ನು ತಲುಪಿಸುವಲ್ಲಿ ಈ ಪುಟ್ಟ ಮಗುವಿನ ಪಾತ್ರ ದೊಡ್ಡದಾಗಿದೆ. ನಿಂಗೇಗೌಡ ರವರು ಪಂಚಾಯತ್ ರಾಜ್ ತಿದ್ದುಪಡಿ ಅಧಿನಿಯಮದ ಬಗ್ಗೆ ಮಾಹಿತಿ ನೀಡುತ್ತಿರುವುದು ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯ ಅಧ್ಯಯನ ಮಾಡುವುದಕ್ಕೆ ಸಹಕಾರಿಯಾಗಿದೆ.

**ಶ್ರೀ ಸುದರ್ಶನ್** ವಿಜಯನಗರ

# ಸಚಿವಾಲಯದಿಂದ ಸಂದೇಶ




**ಡಾ|| ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**


ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

ರಾಜ್ಯದಲ್ಲಿ ಬರದ ಪರಿಸ್ಥಿತಿ ತಲೆದೋರಿರುವ ಹಿನ್ನಲೆಯಲ್ಲಿ ಯಾವ ಕೆರೆ-ಕಟ್ಟೆಗಳು, ಜಲಾಶಯಗಳೂ ಸಹ ಪೂರ್ಣ ಪ್ರಮಾಣದಲ್ಲಿ ನೀರನ್ನು ಹೊಂದಿಲ್ಲ ಹಾಗೂ ಕೆಲವು ನೀರಿಲ್ಲದೆ ಬತ್ತಿಹೋಗಿವೆ. ಕಳೆದ ವರ್ಷದ ಮುಂಗಾರು ಕಡಿಮೆಯಿಂದ ರೈತನ ಬೆಳೆಯೂ ನಷ್ಟವಾಗಿದ್ದಲ್ಲದೆ ಮೇವಿಗೂ ಸಹ ಕೊರತೆಯಾಗಿದ್ದು ಕುಡಿಯಲು ನೀರಿಗೂ ಪರಿತಪಿಸುವ ಸ್ಥಿತಿ ಉಂಟಾಗಿದೆ.

ಬರ ಪರಿಸ್ಥಿತಿಯಲ್ಲಿ ಕೆರೆಗಳ ಹೂಳೆತ್ತುವ ಕೆರೆ ಸಂಜೀವಿನಿ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಮಳೆ ಆರಂಭವಾಗುವ ಮುನ್ನವೇ ರೈತರು ಹೂಳನ್ನು ಕೊಂಡೊಯುವಂತಹ ಕೆರೆಗಳಲ್ಲಿ ಹೂಳನ್ನು ತೆಗೆದು ಅಂತರ್ಜಲ ಮರುಪೂರಣ ಮಾಡುವ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಳ್ಳುವುದು. ಇದಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆಮಾಡಿ ಮೊದಲ ಕಂತಿನಲ್ಲಿ ರೂ.10.00 ಕೋಟಿಗಳನ್ನು ಸಹ ಬಿಡುಗಡೆ ಮಾಡಲಾಗಿದೆ. ಆದ್ದರಿಂದ, ಸದರಿ ಕೆರೆಗಳನ್ನು ಹೂಳೆತ್ತುವ ಮೂಲಕ ಅನುದಾನವನ್ನು ಕಾಲಮಿತಿಯಲ್ಲಿ ಉಪಯೋಗಿಸುವುದು ಮತ್ತು ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿ ಮುಂದಿನ ಕಂತಿನ ಅನುದಾನವನ್ನು ಪಡೆಯಲು ಕ್ರಮಕೈಗೊಳ್ಳುವುದು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮೀಣ ಕುಟುಂಬದವರು ಗುಳೆ ಹೋಗುವ ಪರಿಸ್ಥಿತಿಯನ್ನು ತಪ್ಪಿಸಲು ಉದ್ಯೋಗದ ಬೇಡಿಕೆ ಸಲ್ಲಿಸುವ ಅರ್ಹ ಕುಟುಂಬದವರಿಗೆ ಕೂಡಲೇ ಉದ್ಯೋಗಾವಕಾಶಗಳನ್ನು ಒದಗಿಸುವುದು. ತನ್ಮೂಲಕ ಗ್ರಾಮೀಣ ಜನರಿಗೆ ಅತ್ಯಗತ್ಯವಾದ ರೈತರ ಕಣ, ಸ್ಮಶಾನ

ಅಭಿವೃದ್ಧಿ, ಗ್ರಾಮೀಣ ಆಟದ ಮೈದಾನ, ಕುರಿ ದೊಡ್ಡಿ/ದನದ ದೊಡ್ಡಿ ಕಾಮಗಾರಿಗಳನ್ನು ಹಮ್ಮಿಕೊಳ್ಳುವುದು. ಅಲ್ಲದೆ, ಅಂತರ್ಜಲ ಮರುಪೂರಣ ಮಾಡುವಂತಹ ಮತ್ತು ವೈಯಕ್ತಿಕ ಫಲಾನುಭವಿ ಆಧಾರಿತ ಕಾಮಗಾರಿಗಳನ್ನು ಸಹ ತೆಗೆದುಕೊಳ್ಳುವುದು.

ಉದ್ಯೋಗ ಪಡೆದಂತಹ ಕೂಲಿ ಕಾರ್ಮಿಕರಿಗೆ ಸಕಾಲದಲ್ಲಿ ಹಣ ಪಾವತಿಗೆ ಕ್ರಮ ವಹಿಸುವುದು. ಹಣ ಪಾವತಿಸುವಾಗ ಕಾರ್ಮಿಕರ ಬ್ಯಾಂಕ್ ಖಾತೆಗೆ ಹೊಂದಾಣಿಕೆ ಮಾಡುವುದು. ಯಾವುದೇ ಕಾರಣಕ್ಕೂ ಕೂಲಿ ಕಾರ್ಮಿಕರ ಹೆಸರಿನಲ್ಲಿ ಗುತ್ತಿಗೆದಾರರು ಕೆಲಸ ನಿರ್ವಹಿಸುವುದಕ್ಕೆ ಅವಕಾಶ ಮಾಡಬಾರದು. ಕೂಲಿ ಕಾರ್ಮಿಕರ ಹೆಸರಿನಲ್ಲಿ ಗುತ್ತಿಗೆ ಮಾಡುವಂತಹ ಘಟನೆಗಳೇನಾದರೂ ಸಂಭವಿಸಿರುವುದು ದೃಢಪಟ್ಟಲ್ಲಿ ಅಂತಹ ಅಧಿಕಾರಿ/ನೌಕರರ ಮೇಲೆ ಶಿಸ್ತಿನ ಕ್ರಮ ಜರುಗಿಸುವುದು.

ಗ್ರಾಮೀಣರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮ ನಿರ್ವಹಿಸುವುದು. ನೀರು ಸರಬರಾಜು ಮೂಲಗಳಿಂದ ಪೂರೈಕೆ ಮಾಡಲು ಸಾಧ್ಯವಿಲ್ಲದಿರುವ ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮುಖಾಂತರ ನೀರು ಸರಬರಾಜು ಮಾಡುವುದು. ಬರದ ತೀವ್ರತೆ ಹೆಚ್ಚಿರುವ ಈ ಸಂದರ್ಭದಲ್ಲಿ ರೈತರು ವಾಣಿಜ್ಯ ಬೆಳೆಗಳನ್ನು ಬೆಳೆಯದೆ ಕಡಿಮೆ ನೀರು ಬಳಸುವ ಹನಿ/ತುಂತುರು ನೀರಾವರಿ ಅಳವಡಿಸಿಕೊಳ್ಳುವುದು ಮತ್ತು ನೀರಿನ ನಿಯಮಿತ ಬಳಕೆಯ ಬಗ್ಗೆ ಗೃಹಿಣಿಯರು, ಶಾಲಾ ಮಕ್ಕಳು ಹಾಗೂ ರೈತರಲ್ಲಿ ವಿವಿಧ ಮಾಧ್ಯಮಗಳ ಮುಖಾಂತರ ಅರಿವು ಮೂಡಿಸುವ ಜವಾಬ್ದಾರಿಯನ್ನು ನಮ್ಮೆಲ್ಲ ಅಧಿಕಾರಿ/ಸಿಬ್ಬಂದಿಗಳು ವಹಿಸಬೇಕು.

ಬರ ಪರಿಹಾರದ ಕ್ರಮಗಳು ಹಾಗೂ ಅವುಗಳ ಫಲಶೃತಿ ಗ್ರಾಮೀಣರಿಗೆ ತಲುಪಿಸುವಲ್ಲಿ ಯಾವುದೇ ರೀತಿಯ ವಿಳಂಬ ಮಾಡುವುದಾಗಲಿ, ಹಣದ ದುರುಪಯೋಗ ಪಡಿಸಿಕೊಳ್ಳುವುದಾಗಲಿ ಮತ್ತು ಕಳಪೆ ಕಾಮಗಾರಿಗಳನ್ನು ಮಾಡದೆ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವುದು.

ಗ್ರಾಮೀಣ ಜನ ಮತ್ತು ಜನತಾಣಗಳ ಹಿತದೃಷ್ಟಿಯಿಂದ ಮೂರು ಸ್ಥರದ ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಸಿಬ್ಬಂದಿ ಅಧಿಕಾರಿಗಳು–ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿಗಳನ್ನು ಅರಿತು ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಿ ಜನಮನ್ನಣೆಗೆ ಪಾತ್ರರಾಗುತ್ತೀರಿ ಎಂದು ಆಶಿಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

ವರದಿ



ಶ್ರೀಧರ್ ಆರ್
ಇನಾಮದಾರ

ಮಾಧ್ಯಮ & ಸಾಮಾಜಿಕ
ಜಾಲತಾಣ ನಿರ್ವಾಹಕರು
ಗ್ರಾಅ&ಪಂ ರಾಜ್ ಸಚಿವರ
ಕಾರ್ಯಾಲಯ

# ಗ್ರಾಮೀಣಾಭಿವೃದ್ಧಿ ಸಚಿವರಿಂದ ಬರ ನಿರ್ವಹಣೆಗೆ ತುರ್ತುಕ್ರಮ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮುಂಬರುವ ಬೇಸಿಗೆಯನ್ನು ಗಮನದಲ್ಲಿಟ್ಟುಕೊಂಡು ಬರ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರು ಕುಡಿಯುವ ನೀರು, ಉದ್ಯೋಗ ಖಾತ್ರಿ, ಮುಂತಾದ ವಿಷಯಗಳಲ್ಲಿ ಯಾವುದೇ ರೀತಿಯ ಗಾಬರಿಗೊಳಗಾಗದಂತೆ ಇರಲು ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಸನ್ಮಾನ್ಯ ಶ್ರೀ ಎಚ್ ಕೆ ಪಾಟೀಲ್‌ರವರು ಬರ ನಿರ್ವಹಣೆಯ ಬಗ್ಗೆ ತೆಗದುಕೊಂಡ ತುರ್ತು ಕ್ರಮಗಳ ಬಗ್ಗೆ ಮಾದ್ಯಮದವರಿಗೆ ವಿವರಿಸುತ್ತಿರುವುದು

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2016–17 ಮತ್ತು 2017–18ನೇ ಸಾಲಿನ ಆರ್ಥಿಕ ವರ್ಷಕ್ಕೆ ಕಾಮಗಾರಿಗಳಿಗೆ ನಿಗಧಿ ಪಡಿಸಿದ ಕೂಲಿದರ ಪಟ್ಟಿಯಂತೆ ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ಬೇಸಿಗೆ ಕಾಲದ ಅವಧಿಗಳಿಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅನ್ವಯಿಸುವಂತೆ ಕೆಲಸ ನಿರ್ವಹಿಸುವ ಕರಕುಶಲ ಕಾರ್ಮಿಕರಿಗೆ ಈ ಕೆಳಕಂಡ ಪ್ರಮಾಣದಲ್ಲಿ ರಿಯಾಯಿತಿಯನ್ನು ನೀಡಲಾಗಿದೆ.



| ಕ್ರ. ಸಂ. | ಬೇಸಿಗೆ ಕಾಲದ ಅವಧಿ | ಕಾಮಗಾರಿಯ ಕೆಲಸದ ಪ್ರಮಾಣದಲ್ಲಿ ನೀಡುವ ಶೇಕಡಾ ರಿಯಾಯಿತಿ |
|---|---|---|
| 1 | ಮಾರ್ಚ್ 2017 | ಶೇಕಡಾ 25ರಷ್ಟು |
| 2 | ಏಪ್ರಿಲ್ 2017 | ಶೇಕಡಾ 30ರಷ್ಟು |
| 3 | ಮೇ 2017 | ಶೇಕಡಾ 30ರಷ್ಟು |
| 4 | ಜೂನ್ 2017 | ಶೇಕಡಾ 20ರಷ್ಟು |

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 7 ಕೋಟಿ 64 ಲಕ್ಷ ಮಾನವ ದಿನಗಳನ್ನು ಸೃಜನೆಯಾಗಿದ್ದು, 2016-17ನೇ ಸಾಲಿನ ಲೇಬರ್ ಬಜೆಟ್‌ನ ಶೇ.76.44% ಸಾಧನೆ ಮಾಡಿದಂತಾಗಿರುತ್ತದೆ ಹಾಗೂ 10 ಕೋಟಿ ಮಾನವ ದಿನಗಳಿಗೆ ಪರಿಷ್ಕರಿಸಿ ಅನುಮೋದನೆ ಪಡೆಯಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 2716.41 ಕೋಟಿ ಅನುದಾನವನ್ನು ವೆಚ್ಚ ಮಾಡಲಾಗಿದ್ದು, ಇದರಲ್ಲಿ ರೂ.1840.17 ಕೋಟಿ ಕೂಲಿಗಾಗಿ ಹಾಗೂ ರೂ.790.67 ಕೋಟಿಗಳನ್ನು ಸಾಮಗ್ರಿಗಳಿಗಾಗಿ ವೆಚ್ಚ ಮಾಡಲಾಗಿರುತ್ತದೆ.

ದಿನಾಂಕ: 07.03.2017ರಂದು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಕರ್ನಾಟಕದಲ್ಲಿ ಕೂಲಿ ಹಣ ರೂ.224 ರಿಂದ ರೂ.236ಕ್ಕೆ ಹೆಚ್ಚಿಸಲು ಅನುಮೋದನೆ ನೀಡಿರುತ್ತದೆ. ಫೆಬ್ರವರಿ ಮಾಹೆಯಿಂದ ರಾಜ್ಯವು ಶೇ. 100ರಷ್ಟು ಕೂಲಿ ಮೊತ್ತವನ್ನು ನಿಗದಿತ 15 ದಿನಗಳೊಳಗೆ ಸಂದಾಯ ಮಾಡಲಾಗುತ್ತಿದೆ.

## ಕುಡಿಯುವ ನೀರು

ಜಿಲ್ಲೆಗಳಿಗೆ ಗ್ರಾಮೀಣ ಕುಡಿಯುವ ನೀರು (NRDWP) ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲಿನಡಿ ಲಭ್ಯವಿದ್ದ ಒಟ್ಟು ರೂ.2937.15 ಕೋಟಿ ಅನುದಾನದಲ್ಲಿ ರೂ.1930.58 ಕೋಟಿ ವೆಚ್ಚ ಮಾಡಲಾಗಿದೆ ಪ್ರಸ್ತುತ ಜಿಲ್ಲೆಗಳಲ್ಲಿ ಒಟ್ಟು ರೂ. 1006.56 ಕೋಟಿ ಅನುದಾನ ಲಭ್ಯವಿದೆ.

ಟಾಸ್ಕ್‌ಫೋರ್ಸ್‌ನಡಿ ದಿನಾಂಕ: 07.05.2016 ಹಾಗೂ ದಿನಾಂಕ: 22.11.2016 ಒಟ್ಟು ರೂ.200.90 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ದಿನಾಂಕ: 22.02.2017ರಂದು ಶಾಸಕರುಗಳಿಗೆ ಕನ್‌ಟೆಂಜೆನ್ಸಿ ಕ್ರಿಯಾ ಯೋಜನೆಯಡಿ ರೂ.74.90 ಕೋಟಿಗಳನ್ನು ಹಾಗೂ ಜಿಲ್ಲಾ ಪಂಚಾಯತಿ ಅಧ್ಯಕ್ಷರ ವಿವೇಚನಾ ನಿಧಿ ಟಾಸ್ಕ್‌ಫೋರ್ಸ್‌ನಡಿ ರೂ. 15.00 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. ಒಟ್ಟು ರೂ.290.80 ಕೋಟಿ ಅನುದಾನದಲ್ಲಿ ರೂ.101.38 ಕೋಟಿ ವೆಚ್ಚವಾಗಿದ್ದು, ಪ್ರಸ್ತುತ ಜಿಲ್ಲೆಗಳಲ್ಲಿ ರೂ.189.41 ಕೋಟಿ ಅನುದಾನ ಲಭ್ಯವಿದೆ.

ರಾಜ್ಯದಲ್ಲಿ ಬರ ಸ್ಥಿತಿ ಹಿನ್ನೆಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗಾಗಿ ಈ ಕೆಳಕಂಡ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸಮಿತಿಗಳು ಪ್ರತಿ ಶನಿವಾರ ಸಭೆ ಸೇರಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮೇವಿನ ಪೂರೈಕೆ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದು. ಗ್ರಾಮೀಣ ಭಾಗದಲ್ಲಿ ಟ್ಯಾಂಕರ್ ಮೂಲಕ ಪ್ರಸ್ತುತ 884 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ತುರ್ತು ಇರುವ ಎಲ್ಲಾ ಕಡೆ ಕುಡಿಯಲು ನೀರು ಸರಬರಾಜು ಮಾಡಲಾಗುವುದು. ■



# ಕವಲೂರಿನಲ್ಲಿ ಕೂಲಿಗಿನ್ನು ಬರವೇ ಇಲ್ಲ

ವರದಿ



ದೇವರಾಜ ಪತ್ತಾರ

ಐಇಸಿ ಸಂಯೋಜಕರು
ತಾಲ್ಲೂಕು ಪಂಚಾಯತಿ ಕೊಪ್ಪಳ

ಸಕಾಲದಲ್ಲಿ ಮಳೆ ಬರದೇ ಇರುವುದು ಕೂಲಿಕಾರರು ಯಾವುದೇ ಕಾರಣಕ್ಕೂ ಉದ್ಯೋಗ ಅರಸಿ ನಗರಗಳ ಕಡೆ ಗುಳೆ ಹೋಗುವುದನ್ನು ತಪ್ಪಿಸಲು ಕವಲೂರು ಗ್ರಾಮ ಪಂಚಾಯತಿ ದಿಟ್ಟ ಹೆಜ್ಜೆ ಇಟ್ಟಿರುವುದು ನಿಜಕ್ಕೂ ಶ್ಲಾಘನೀಯ. ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮ ಪಂಚಾಯತಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2016–17ನೇ ಸಾಲಿನಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಕೂಲಿಕಾರರಿಗೆ ಸಕಾಲದಲ್ಲಿ ಕೂಲಿ ಕೆಲಸ ಒದಗಿಸಿ ಇಲ್ಲಿಯವರೆಗೆ 75,123 ಮಾನವ ದಿನಗಳನ್ನು ಸೃಜಿಸಿ ರೂ.1.44 ಕೋಟಿ ರೂ ಹಣ ವ್ಯಯಮಾಡಿರುವುದು ನಿಜಕ್ಕೂ ಅಭಿವೃದ್ಧಿಗೆ ಪೂರಕವಾಗಿದೆ.

ಜನಪ್ರತಿನಿಧಿಗಳು ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿಗಳು ದಕ್ಷವಾದ ಆಡಳಿತ ನೀಡಲು ಕಾಲಕಾಲಕ್ಕೆ ಜನವಸತಿ ಸಭೆ, ವಾರ್ಡ್ ಸಭೆ, ಗ್ರಾಮಸಭೆ ಜರುಗಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವುದರೊಂದಿಗೆ ಇಲ್ಲಿ ಅಧಿಕಾರ ವಿಕೇಂದ್ರಿಕರಣವು ಸಾಮಾಜಿಕ ಸೇವೆಯನ್ನು ಸಾರ್ವಜನಿಕರು ಪಡೆಯಲು ಸದಾವಕಾಶವನ್ನು ಪೂರಕವಾಗಿ ಒದಗಿಸಲಾಗಿದೆ.

## ಕೂಲಿ ಒದಗಿಸುವಲ್ಲಿ ಐಇಸಿ ಕಾರ್ಯಕ್ರಮಗಳ ಮಹತ್ವದ ಪಾತ್ರ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮಾರ್ಗಸೂಚಿಯ ಪ್ರಕಾರ ಗ್ರಾಮ ಪಂಚಾಯತಿಯಲ್ಲಿ ವಾರ್ಡ್ ಸಭೆ, ಗ್ರಾಮ



ಕವಲೂರು ಗ್ರಾಮದ ಊರ ಮುಂದಿನ ಫಕೀರನ ಕೆರೆ ಹೂಳೆತ್ತುವ ನೋಟ

ಸಭೆಗಳ ಮೂಲಕ ಹಾಗೂ ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ ಕುರಿತು ಪ್ರಾರಂಭದಲ್ಲಿ ಕರಪತ್ರಗಳ ಹಂಚಿಕೆ ಮತ್ತು ರೋಜಗಾರ್ ದಿನಾಚರಣೆಯ ಮೂಲಕ ಜಾಗೃತಿ ಮೂಡಿಸಲಾಯಿತು. ಇದರಿಂದ ಕೂಲಿಕಾರರು ಕೆರೆ ಹೂಳೆತ್ತುವ, ಚೆಕ್ ಡ್ಯಾಂ ಹೂಳೆತ್ತುವ ಕಾಮಗಾರಿಯಲ್ಲಿ ಕೂಲಿ ಕೆಲಸ ಪಡೆಯಲು ನಮೂನೆ–6ರಲ್ಲಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದರು.


## ಕಾಮಗಾರಿಗಳ ಅನುಷ್ಠಾನದ ಮೇಲ್ವಿಚಾರಣೆಯಲ್ಲಿ ತಾಲ್ಲೂಕು ಪಂಚಾಯತಿಯ ಪಾತ್ರ:

ಗ್ರಾಮ ಪಂಚಾಯತಿ ವ್ಯಾಪ್ತಿಯ ಗುಡಗೇರಿ ಗ್ರಾಮದಲ್ಲಿ ಜರುಗಿದ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಜರುಗಿದ ಸಂದರ್ಭದಲ್ಲಿ ಕೂಲಿಕಾರರಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಕೆಲಸ ನೀಡಬೇಕು ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೂಲಿ ಆಧಾರಿತ ಕಾಮಗಾರಿಗಳನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ತಾಲ್ಲೂಕು ಪಂಚಾಯತಿ ಮುಖಾಂತರ ಜಿಲ್ಲಾ ಪಂಚಾಯತಿಗೆ ಸಲ್ಲಿಸಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಿದಾಗ 1200 ಜನ ಕೂಲಿಕಾರರು ಕೆಲಸಕ್ಕೆ ಹಾಜರಾಗುತ್ತಿದ್ದರು. ಸದರಿ ಅವಧಿಯಲ್ಲಿ ಎಲ್ಲರ ಮೇಲ್ವಿಚಾರಣೆ ಮಾಡಲು 20 ರಿಂದ 25 ಜನಕ್ಕೆ ಒಬ್ಬರಂತೆ ಕಾಯಕ ಬಂಧುಗಳನ್ನು ನೇಮಿಸಿ ಅವರಿಗೆ ತಾಲ್ಲೂಕು ಪಂಚಾಯತಿಯಿಂದ ಕಾರ್ಯನಿರ್ವಾಹಕ ಅಧಿಕಾರಿಗಳ ಸಹಿಯೊಂದಿಗೆ ಹಳದಿ ಬಣ್ಣದ ಗುರುತಿನ ಚೀಟಿ ನೀಡಲಾಗಿರುತ್ತದೆ.

## ಕಾಮಗಾರಿ ವೇಳೆ ಜನಪ್ರತಿನಿಧಿಗಳು ಅಧಿಕಾರಿಗಳ ನೇರ ಭೇಟಿ ಮತ್ತು ಸಲಹೆ:

ಸದರಿ ಕಾಮಗಾರಿ ನಡೆದ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀಮತಿ.ರತ್ನಮ್ಮ ಭರಮಪ್ಪ ಶ್ರೀ.ಗೂಳಪ್ಪ ಹಲಗೇರಿ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ.ಟಿ.ಕೃಷ್ಣಮೂರ್ತಿ, ಎಂಐಎಸ್ ಸಂಯೋಜಕರಾದ ಮಂಜುನಾಥ ಜವಳಿ, ತಾಂತ್ರಿಕ ಸಹಾಯಕರಾದ ಸಂತೋಷ ನಂದಾಪುರ ಮುಂತಾದವರು ಕಾಮಗಾರಿಯಲ್ಲಿ ಕೂಲಿ ಕೆಲಸ ನಿರ್ವಹಿಸುವುದನ್ನು ಖುದ್ದಾಗಿ ವೀಕ್ಷಣೆ ಮಾಡಿ ಕಾಮಗಾರಿಯಲ್ಲಿ ಎಲ್ಲಾ ಕೂಲಿಕಾರರು ಕೆಲಸ ನಿರ್ವಹಿಸಿ ಕೂಲಿ ಹಣ ಪಡೆದು ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬೇಕೆಂದು ಕರೆ ನೀಡಿದರು. ಕೆರೆ ಹೂಳೆತ್ತಿದ ನಂತರ ಜಿಲ್ಲಾ ಪಂಚಾಯತಿ ಸದಸ್ಯರ ಅನುದಾನದಲ್ಲಿ ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಇದರಿಂದ ಜಾನುವಾರುಗಳಿಗೆ ಕುಡಿಯಲು ನೀರು ದೊರೆಯಿತು. ಈ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಿಂದ ಕೂಲಿಕಾರರಿಗೆ ಕೆಲಸ ಸ್ಥಳೀಯವಾಗಿ ದೊರಕಿತಲ್ಲದೆ ಗ್ರಾಮದಲ್ಲಿ ರಸ್ತೆ ನಿರ್ಮಾಣ, ಕೆರೆ ಅಭಿವೃದ್ಧಿಪಡಿಸಲು ಸಾಧ್ಯವಾಯಿತೆಂದು ಕವಲೂರಿನ ಜನರು ನೆನೆಯುತ್ತಾರೆ.





**ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಾದ ಶ್ರೀ ಎಚ್.ಕೆ ಪಾಟೀಲ್, ಕೊಪ್ಪಳ ಸಂಸದರಾದ ಶ್ರೀ ಕರಡಿ ಸಂಗಣ್ಣ, ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ ಮತ್ತಿತರ ಗಣ್ಯರು ಕವಲೂರಿನ ನರೇಗಾ ಕಾಮಗಾರಿ ವರದಿ ವೀಕ್ಷಿಸುತ್ತಿರುವುದು.**

## ಹೆಚ್ಚು ಮಾನವ ದಿನಗಳ ಸೃಜಿಸುವ ಪಂಚಾಯಿತಿಗೆ ವಿಶೇಷ ಅನುದಾನ

ಅತೀ ಹೆಚ್ಚಿನ ಪ್ರಮಾಣದಲ್ಲಿ ಕೂಲಿಕಾರರಿಗೆ ಕೂಲಿ ಕೆಲಸ ನೀಡಿರುವುದರಿಂದ ಮಾನವ ದಿನಗಳ ಸೃಜನೆಯು ಹೆಚ್ಚಿನ ರೀತಿಯಲ್ಲಿ ಆಗಿರುವ ಪ್ರಯುಕ್ತ ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಬೆಂಗಳೂರು ಇವರ ನಿರ್ದೇಶನದಂತೆ ಅತೀ ಹೆಚ್ಚಿನ ಪ್ರಮಾಣದಲ್ಲಿ ಮಾನವ ದಿನಗಳ ಸೃಜಿಸಿದ ಗ್ರಾಮ ಪಂಚಾಯತಿಗಳ ಕಾಮಗಾರಿಗಳನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಲು ಶ್ರೀ. ಸುಲ್ತಾನ ಶರೀಫ್, ರಾಜ್ಯ ಗುಣ ನಿಯಂತ್ರಣ ಅಧಿಕಾರಿಗಳು, ಬೆಂಗಳೂರು ಇವರು ಕವಲೂರು ಗ್ರಾಮ ಪಂಚಾಯತಿ ಚೆಕ್ ಡ್ಯಾಂ ಹೂಳೆತ್ತುವ, ಕೆರೆ ಹೂಳೆತ್ತುವ ಕಾಮಗಾರಿ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಕಾಮಗಾರಿಗಳ ಕಡತಗಳನ್ನು, ಎಂ.ಬಿ. ದಾಖಲಾತಿ ಹಾಗೂ ಭೌತಿಕವಾಗಿ ಕೂಲಿಕಾರರು ಕೆಲಸ ನಿರ್ವಹಿಸಿರುವುದನ್ನು ಅಳತೆ ಪಡೆದಿರುತ್ತಾರೆ. ಕವಲೂರು ಗ್ರಾಮ ಪಂಚಾಯತಿಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಕೂಲಿಕಾರರಿಗೆ ಕೂಲಿ ಕೆಲಸ ಒದಗಿಸಿರುವ ಕುರಿತು ಅನುಸರಿಸಿದ ಕ್ರಮಗಳ ಕುರಿತು ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಬಸವರಾಜ ಕಿಳ್ಳಿಕ್ಯಾತರ ಅವರೊಂದಿಗೆ ಚರ್ಚಿಸಿ ವರದಿ ಪಡೆದಿದ್ದಾರೆ.

## ಗ್ರಾಮೀಣಾಭಿವೃದ್ಧಿ ಸಚಿವರು, ಸಂಸದರು, ಶಾಸಕರ ಭೇಟಿ ಮತ್ತು ಪ್ರಶಂಸೆ

ಕೆರೆ ಹೂಳೆತ್ತಿದ ನಂತರ ಕೆರೆಗೆ ಕೊಪ್ಪಳದ ಶಾಸಕರಾದ ಶ್ರೀ.ಕೆ.ರಾಘವೇಂದ್ರ ಹಿಟ್ನಾಳ ಹಾಗೂ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಶ್ರೀ.ಶೇಖರಪ್ಪ ಬಿ ನಾಗರಳ್ಳಿ ಇವರು ಕೆರೆಗೆ ಬಾಗಿನ ಅರ್ಪಿಸಿದರು. ನಂತರ ಡಿಸೆಂಬರ್–24, 2016ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ್

ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಮತ್ತು ಉನ್ನತ ಶಿಕ್ಷಣ ಸಚಿವರಾದ ಶ್ರೀ.ಬಸವರಾಜ್ ರಾಯರೆಡ್ಡಿ, ಸಂಸದರಾದ ಸಂಗಣ್ಣ ಕರಡಿ, ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಇವರು ಸಹ ಸಚಿವರೊಂದಿಗೆ ಕೆರೆ ಹೂಳೆತ್ತಿರುವ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಈ ಕಾಮಗಾರಿಗಳ ಕುರಿತು ಮತ್ತು ನರೇಗಾ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬರಗಾಲವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದ ಗ್ರಾಮ ಪಂಚಾಯತಿ ಕವಲೂರು ಆಗಿದೆ. ನಿರೀಕ್ಷಿದಷ್ಟು ಮಳೆ ಬಾರದೇ ಇರುವುದರಿಂದ ರೈತರ ಜಮೀನಿನಲ್ಲಿ ಬೆಳೆಗಳು ಅಷ್ಟೊಂದು ಪ್ರಮಾಣದಲ್ಲಿ ಬರಲಿಲ್ಲ. ಈ ದಿಸೆಯಲ್ಲಿ ಕೂಲಿಕಾರರನ್ನು ಹೆಚ್ಚಿನ ಪ್ರಮಾಣದಲ್ಲಿ ಕವಲೂರು ಗ್ರಾಮ ಪಂಚಾಯತಿ ಹೊಂದಿರುವದರಿಂದ ಇಲ್ಲಿ ಹತ್ತಿರದ ಯಾವುದೇ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಇಲ್ಲದಿರುವುದರಿಂದ ಕೂಲಿಕಾರರು ಅನಿವಾರ್ಯವಾಗಿ ಕೂಲಿ ಕೆಲಸವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅವಲಂಬಿಸಿದ್ದಾರೆ.

ಕಾಯಕ ಬಂಧು ಮಂಜುನಾಥ ಜಾಲಿಹಾಳ ಇವರು ಕೊಪ್ಪಳ ತಾಲೂಕಿನಲ್ಲಿ ಜರುಗಿದ ಕಾಯಕ ಬಂಧುಗಳ ಕಾರ್ಯಾಗಾರದಲ್ಲಿ ಹೇಳುವಂತೆ "ಎಲ್ಲ ಕೂಲಿಕಾರರಿಗೂ ಕೆಲಸ ದೊರೆಯಲು 20 ರಿಂದ 25 ಜನಕ್ಕೆ ಒಬ್ಬರಂತೆ ಕಾಯಕ ಬಂಧುಗಳನ್ನು ತಮ್ಮಲ್ಲಿ ನೇಮಿಸಿಕೊಂಡು ಅವರಿಗೆ ಜವಾಬ್ದಾರಿಗಳು ಹಾಗೂ ಕಾರ್ಯನಿರ್ವಹಣೆ ಕುರಿತು ಮನವರಿಕೆಯಾಗಿರುವುದರಿಂದ ಕೊಪ್ಪಳ ಜಿಲ್ಲೆಯಲ್ಲಿ ಇಷ್ಟೊಂದು ಕಾಮಗಾರಿಗಳನ್ನು ಅನುಷ್ಠಾನ ಮಾಡಿ ಕೊಪ್ಪಳ ಜಿಲ್ಲೆಯಲ್ಲಿ ಅತೀ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಗ್ರಾಮ ಪಂಚಾಯತಿ ಎಂದರೆ ಕವಲೂರು ಗ್ರಾಮ ಪಂಚಾಯತಿ" ಎಂದು ಹೇಳುತ್ತಾರೆ.

ಗ್ರಾಮೀಣ ಭಾಗದಲ್ಲಿ ಕೂಲಿಕಾರರಿಗೆ ಕೂಲಿ ಕೆಲಸ ಒದಗಿಸಿ ಅವರಿಗೆ ಕನಿಷ್ಠ ಕೂಲಿ ಮೊತ್ತ ನೀಡಿ ಅವರ ಆರ್ಥಿಕ ಜೀವನಮಟ್ಟ ಸುಧಾರಿಸಲು ಈ ಯೋಜನೆ ಜಾರಿಗೆ ತಂದಿರುವದು ನಿಜಕ್ಕೂ ಶ್ಲಾಘನೀಯ. ಯಾವುದೇ ಯೋಜನೆಗಳು ಸಂಪೂರ್ಣವಾಗಿ ಜನರಿಗೆ ತಲುಪಲು ಮೇಲಿನ ಹಂತದಿಂದ ಕೆಳಹಂತದವರೆಗೆ ಎಲ್ಲರೂ ಸರಿಸಮಾನವಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿದ್ದೆ ಆದಲ್ಲಿ ಸಾರ್ಥಕವಾಗುತ್ತದೆ. ಇದಕ್ಕೆ ಕೊಪ್ಪಳ ತಾಲೂಕಿನ ಕವಲೂರು ಗ್ರಾಮ ಪಂಚಾಯತಿ ಉತ್ತಮ ಉದಾಹರಣೆ. ಹೀಗೊಂದು ಸರ್ಕಾರದ ಯೋಜನೆಯನ್ನು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಸಮರ್ಪಕವಾಗಿ ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಿದ್ದು ಒಂದು ಸಾಧನೆಯಲ್ಲವೇ..... ■



ಕವಲೂರು ಗ್ರಾಮದ
ದಂಡಪ್ಪನ ಕೆರೆ ಹೂಳೆತ್ತುವ
ಕಾಮಗಾರಿಯ ಒಂದು ನೋಟ

ವರದಿ

ಗಂಗಾಧರ ಸ್ವಾಮಿ ಎಸ್

ಜಂಟಿ ನಿರ್ದೇಶಕರು(ತೋಟಗಾರಿಕೆ)

## ರಾಜ್ಯ ಬಜೆಟ್ ಘೋಷಣೆ

# ಮಹಾತ್ಮಗಾಂಧಿ ನರೇಗಾದಡಿ 12 ಕೋಟಿ ಮಾನವ ದಿನ ಸೃಜನೆ ಗುರಿ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯರವರು ರಾಜ್ಯ ಬಜೆಟ್‌ನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 12 ಕೋಟಿ ಮಾನವ ದಿನಗಳ ಸೃಜನೆಯ ಗುರಿ ಹಾಗೂ ಹೊಸ ಕಾರ್ಯಕ್ರಮಗಳನ್ನು ಘೋಷಿಸುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಿದ್ದಾರೆ.

ಕಳೆದ ಮೂರು ವರ್ಷದ ಸಾಧನೆಯನ್ನು ಮೀರಿ ಈ ಸಾಲಿನಲ್ಲಿ ದಾಖಲೆ ಮಾನವ ದಿನಗಳನ್ನು ಸೃಜಿಸಿರುವುದು ಹೊಸ ಮೈಲಿಗಲ್ಲು ಸಾಧಿಸಿದಂತಾಗಿದೆ. ಈ ಯೋಜನೆಯಲ್ಲಿ ಹೆಚ್ಚು ಹೆಚ್ಚು ಕೂಲಿ ಕಾರ್ಮಿಕರು ಪಾಲ್ಗೊಂಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಬಹುಬಾಳಿಕೆಯ ಆಸ್ತಿಗಳ ಸೃಜನೆ ಹಾಗೂ ನವೀನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.



**ಯೋಜನೆಯಲ್ಲಿ ಹೆಚ್ಚು ಹೆಚ್ಚು ಕೂಲಿ ಕಾರ್ಮಿಕರು ಪಾಲ್ಗೊಂಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಬಹುಬಾಳಿಕೆಯ ಆಸ್ತಿಗಳ ಸೃಜನೆ ಹಾಗೂ ನವೀನ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗಿದೆ.**

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 30 ಜಿಲ್ಲೆಗಳಲ್ಲಿ ಈವರೆಗೆ 52.73 ಲಕ್ಷ ಕುಟುಂಬಗಳು ಉದ್ಯೋಗ ಚೀಟಿಗಳನ್ನು ನೊಂದಾಯಿಸಿಕೊಂಡಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ 24.84 ಕೋಟಿ ಮಾನವ ದಿನಗಳನ್ನು ಸೃಜಿಸಿ 11.89 ಲಕ್ಷ ಆಸ್ತಿಗಳನ್ನು ಪೂರ್ಣಗೊಳಿಸಲಾಗಿದ್ದು, ಇದಕ್ಕಾಗಿ ರೂ.7,056 ಕೋಟಿಗಳನ್ನು ವ್ಯಯಿಸಲಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯ ನಮ್ಮ ಹೊಲ ನಮ್ಮ ದಾರಿ ಕಾರ್ಯಕ್ರಮದಡಿ 5000 ಕಿ.ಮೀ ಉದ್ದದ ಮಣ್ಣಿನ ರಸ್ತೆ ನಿರ್ಮಾಣ ಮಾಡಲಾಗಿದೆ. ಅಲ್ಲದೆ ಈ ಸಾಲಿನಲ್ಲಿ 6.07 ಕೋಟಿ ಮಾನವ ದಿನಗಳ ಗುರಿಯನ್ನು ನವೆಂಬರ್ ಮಾಹೆಯಲ್ಲಿಯೇ ಶೇಕಡಾ 100 ರಷ್ಟು ಗುರಿ ಸಾಧಿಸಿದ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಮುಂದಿನ ಆರ್ಥಿಕ ವರ್ಷದಲ್ಲಿ ಇನ್ನೂ ಹೆಚ್ಚು ಮಾನವ ದಿನ ಸೃಜನೆ

ಗುರಿ ಹಾಗೂ ಹೊಸ ಕಾರ್ಯಕ್ರಮ ಅನುಷ್ಠಾನ ಘೋಷಿಸಿದ್ದಾರೆ.

**ಘೋಷಣೆಗಳು:**

- ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಈ ಸಾಲಿನಲ್ಲಿ ಸಾಧಿಸಲಾದ ಮಾನವ ದಿನ ಸೃಜನೆಯನ್ನು ಪರಿಗಣಿಸಿ ಮುಂದಿನ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ 12 ಕೋಟಿ ಮಾನವ ದಿನ ಸೃಜಿಸಲು ಗುರಿ.
- ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸಹಯೋಗದೊಂದಿಗೆ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳನ್ನು ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಕೈಗೊಳ್ಳಲು ಅನುಕೂಲವಾಗುವಂತೆ ಕಾಮನ್ ವರ್ಕ್ ಶೆಡ್‌ಗಳ ನಿರ್ಮಾಣ.
- ಸ್ಥಳಾವಕಾಶ ಕೊರತೆಯಿರುವ ಕುಟುಂಬಗಳ ಪಶು/ಜಾನುವಾರುಗಳಿಗೆ ಅನುಕೂಲವಾಗುವಂತೆ ಗ್ರಾಮಗಳಲ್ಲಿ ಸಮುದಾಯ ದನದ ಕೊಟ್ಟಿಗೆ ನಿರ್ಮಾಣಕ್ಕೆ ಅವಕಾಶ.
- ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಪ್ರತಿ ತಾಲ್ಲೂಕಿಗೆ ಕನಿಷ್ಠ 200 ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ.

ಬಜೆಟ್‌ನ ಘೋಷಣೆಯಂತೆ ಹೊಸ ಕಾರ್ಯಕ್ರಮಗಳ ಅನುಷ್ಠಾನವನ್ನು ಜಿಲ್ಲಾ ಮಟ್ಟದಲ್ಲಿ ಕ್ರಮವಹಿಸಲು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಜಿಲ್ಲಾವಾರು ಗುರಿ ನಿಗಧಿಪಡಿಸಿ ಸರ್ಕಾರಿ ಆದೇಶ ಹೊರಡಿಸಲಾಗುತ್ತಿದೆ. ಸದರಿ ಕಾಮಗಾರಿ ಮಾದರಿ ಅಂದಾಜು ಪತ್ರಿಕೆಗಳನ್ನು ಸಿದ್ಧಪಡಿಸಿ ಒಗ್ಗೂಡಿಸುವಿಕೆಯ ಮೂಲಕ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲು ಅಗತ್ಯ ಸೂಚನೆಗಳನ್ನು ನೀಡಲಾಗುವುದು. ■







ವರದಿ



ನವೀನ್

ಐಇಸಿ ಸಂಯೋಜಕರು
ಮಹಾತ್ಮಗಾಂಧಿ ಉದ್ಯೋಗಖಾತ್ರಿ ಯೋಜನೆ
ಜಿಲ್ಲಾ ಪಂಚಾಯತಿ, ಹಾವೇರಿ.
ಮೊಬೈಲ್ : 9482055243

# ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯಲ್ಲಿ ನರೇಗಾ ಪಾತ್ರ

ಬರದ ಛಾಯೆ ಅಂತರ್ಜಲ ಬಳಕೆ ಮೇಲೆ ಹೆಚ್ಚಿನ ಪ್ರಭಾವ ಬೀರಿದೆ. ಕುಡಿಯುವ ನೀರು ಒದಗಿಸಲು ಬೋರ್‌ವೆಲ್‌ಗಳನ್ನು ಲೆಕ್ಕವಿಲ್ಲದಷ್ಟು ತೋಡಿ ಅಂತರ್ಜಲವನ್ನು ಬಗೆಯಲಾಗುತ್ತಿದೆ. ಇದು ದಿನೇ ದಿನೇ ವ್ಯಾಪಕವಾಗುತ್ತಿದೆ ಇದನ್ನು ನಿರ್ವಹಿಸದೆ ಹೋದಲ್ಲಿ ಮುಂದೆ ಏನು ಮಾಡಬಹುದು? ಎಂಬುದರತ್ತ ಯಾರು ಚಿಂತಿಸುತ್ತಿಲ್ಲ. ಇದನ್ನು ಮನಗಂಡಿರುವ ಕೇಂದ್ರ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ವಿನಾಶವನ್ನು ತಡೆಯಲು ಅತಿ ಬಳಕೆ ತಾಲ್ಲೂಕುಗಳೆಂದು ಗುರುತಿಸಿ ಅಂತಹ ಬ್ಲಾಕ್‌ಗಳಲ್ಲಿ ಪಿಎಮ್‌ಜಿಎಸ್‌ವೈ, ಜಲಾನಯನ ಮತ್ತು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗಾಗಿ ಜಿಲ್ಲಾ ಜಲ ಸಂರಕ್ಷಣ ಯೋಜನೆ(ಡಿಪ್) ತಯಾರಿಸಲಾಗುತ್ತಿದೆ.

ಜಿಲ್ಲಾ ಜಲ ಸಂರಕ್ಷಣಾ ಯೋಜನೆ ತಯಾರಿ ಮುನ್ನ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ವಾರ್ಷಿಕ ಕಾರ್ಮಿಕ ಆಯವ್ಯಯದಲ್ಲಿ ಶೇಕಡಾ 60ರಷ್ಟು ಕಾಮಗಾರಿಗಳನ್ನು ನೈಸರ್ಗಿಕ ಸಂಪನ್ಮೂಲಗಳಿಗೆ ಮೀಸಲಿಡಲಾಗಿದೆ. ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿರುವ ರಾಜ್ಯ ಸರ್ಕಾರ 2013–14ನೇ ಸಾಲಿನಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡುವುದು ಮತ್ತು ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ರೂಪಿಸಲಾದ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಡಿ ನರೇಗಾ ಯೋಜನೆಯಡಿ ಅನುಷ್ಠಾನಿಸಲಾಗುತ್ತಿರುವ 13 ಕಾಮಗಾರಿಗಳಲ್ಲಿ 07 ಕಾಮಗಾರಿಗಳು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಸಂಬಂಧಿಸಿದ್ದಾಗಿವೆ.

**ನೈಸರ್ಗಿಕ ಸಂಪನ್ಮೂಲ ವಿನಾಶವನ್ನು ತಡೆಯಲು ಅತಿ ಬಳಕೆ ತಾಲ್ಲೂಕುಗಳೆಂದು ಗುರುತಿಸಿ ಅಂತಹ ಬ್ಲಾಕ್‌ಗಳಲ್ಲಿ ಪಿಎಮ್‌ಕೆಎಸ್‌ವೈ, ಜಲಾನಯನ ಮತ್ತು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗಾಗಿ ಜಿಲ್ಲಾ ಜಲ ಸಂರಕ್ಷಣ ಯೋಜನೆ(ಡಿಪ್) ತಯಾರಿಸಲಾಗುತ್ತಿದೆ.**



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರ ದೂರದೃಷ್ಟಿಯಿಂದ ನರೇಗಾ ಯೋಜನೆಯಡಿ ನೂತನ ನೀರು ನಿರ್ವಹಣೆಯ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದೆ. ಅದರಲ್ಲಿ ನಾಲಾ, ಹಳ್ಳ, ತೊರೆ ಮತ್ತು ನದಿಗಳಿಗೆ ಅಡ್ಡಲಾಗಿ ಬಹುಕಮಾನು ತಡೆಗೋಡೆ ನಿರ್ಮಾಣ, ಕುಡಿಯುವ ನೀರಿನ ಕೊಳವೆ ಬಾವಿಗಳ ಮರುಪೂರಣಗೊಳಿಸಲಾಗುತ್ತಿದೆ.

## ನೈಸರ್ಗಿಕ ಸಂಪನ್ಮೂಲ ವಿಂಗಡಣೆ:

ನೈಸರ್ಗಿಕ ಸಂಪನ್ಮೂಲಗಳೆಲ್ಲವೂ ಪರಿಸರ ಜನ್ಯ. ಹಾಗೂ ನಮ್ಮ ಉಳಿವಿಕೆಗೆ ಅತ್ಯವಶ್ಯಕವಾಗಿವೆ. ಮಿಕ್ಕವು ನಮ್ಮ ಬಯಕೆ ಪೂರೈಸಲು ಇರುವ ಸಾಧನಗಳಾಗಿದ್ದು ನೈಸರ್ಗಿಕ ಸಂಪನ್ಮೂಲಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸಬಹುದು.

1) ಜೈವಿಕ ಜೀವಗೋಳದಿಂದ ಪಡೆದಿರುವುವಂತಹವುಗಳು ಜೈವಿಕ ಸಂಪನ್ಮೂಲಗಳು, ಅರಣ್ಯಗಳು ಮತ್ತು ಅರಣೋತ್ಪನ್ನಗಳು, ಪ್ರಾಣಿಗಳು, ಪಕ್ಷಿಗಳು ಮತ್ತು ಅವುಗಳ ಉತ್ಪನ್ನಗಳು.

2) ಅಜೈವಿಕ – ನಿರ್ಜೀವ ವಸ್ತುಗಳಿಂದ ನಿರ್ಮಾಣವಾದವು ಅಜೈವಿಕ ಸಂಪನ್ಮೂಲಗಳು, ಭೂಮಿ, ನೀರು, ಗಾಳಿ ಮತ್ತು ಚಿನ್ನ, ಕಬ್ಬಿಣ, ತಾಮ್ರ, ಬೆಳ್ಳಿ ಮುಂತಾದ ಖನಿಜಗಳು.

## ನೈಸರ್ಗಿಕ ಸಂಪನ್ಮೂಲಗಳನ್ನು ಅವುಗಳಿಗಿರುವ ನವೀಕರಣ ಸಾಮರ್ಥ್ಯ ಆಧಾರದ ಮೇಲೆ, ಈ ಕೆಳಗಿನಂತೆ ವಿಭಾಗಿಸಬಹುದು:

ಮರುಪೂರಣಗೊಳ್ಳುವ ಸಂಪನ್ಮೂಲಗಳು– ಸುಲಭವಾಗಿ ಪುನಃ ತುಂಬಬಹುದಾದ ಅಥವಾ ಪುನರುತ್ಪತ್ತಿ ಮಾಡಬಹುದಾದವುಗಳು ಯಾವುವೋ ಅವುಗಳೆಲ್ಲ ಮರುಪೂರಣಗೊಳ್ಳುವ ಸಂಪನ್ಮೂಲಗಳು, ಸೂರ್ಯನ ಬೆಳಕು, ಗಾಳಿ, ವಾಯು ಇತ್ಯಾದಿ. ಇವುಗಳ ಲಭ್ಯ ಪ್ರಮಾಣ ಮಾನವನ ಬಳಕೆಯಿಂದ ಅನೇಕ ಸಂಪನ್ಮೂಲಗಳು ಕ್ಷೀಣಿಸಬಹುದು, ಇದರ ಪುನರುತ್ಪತ್ತಿಗೊಳಿಸಿದ್ದಲ್ಲಿ ಲಭ್ಯತೆ ಸಮತೋಲನಗೊಳ್ಳುತ್ತದೆ.

## ನರೇಗಾದಡಿ ನಿರ್ವಹಿಸಬಹುದಾದ ಎನ್‌ಆರ್‌ಎಮ್ ಕಾಮಗಾರಿಗಳು:

1) ಕುಡಿಯುವ ನೀರಿನ ಮೂಲಗಳ ನೀರಿನ ಕೊಯ್ಲು ಸೇರಿದಂತೆ ಅಂತರ್ಜಲದ ಮರುಪೂರಣ ಕಾಮಗಾರಿಗಳಿಗೆ ವಿಶೇಷ ಒತ್ತು ನೀಡುವ ತಡೆಗಟ್ಟುಗಳು, ಮಣ್ಣಿನ ಅಣೆಕಟ್ಟುಗಳು, ನಿಲುಗಡೆ ಕಟ್ಟುಗಳು ತಳಹದಿಯ ತಡೆಗಳು (dykes), ಇವುಗಳಿಂದ ಅಂತರ್ಜಲ ಮಟ್ಟವನ್ನು ಸುಧಾರಣೆ ಮಾಡಲು ಹಾಗೂ ಹೆಚ್ಚಿಸುವ ಸಲುವಾಗಿ ಜಲ ಸಂರಕ್ಷಣೆ ಹಾಗೂ ನೀರು ಕೊಯ್ಲು ವಿನ್ಯಾಸದ ಕಾಮಗಾರಿಗಳನ್ನು ಕೈಗೊಳ್ಳುವುದು.

| ಕ್ರ. ಸಂ. | ಇಲಾಖೆಯ ಹೆಸರು | ಕ್ರಿಯಾ ಯೋಜನೆಯಲ್ಲಿ ಇರಿಸಲಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| | | |
| 1 | ಬೃಹತ ನೀರಾವರಿ ಇಲಾಖೆ | 196021.00 |
| 2 | ಎಂ.ಆರ್.ಬಿ.ಸಿ. ಇಲಾಖೆ | 120400.00 |
| 3 | ಸಣ್ಣ ನೀರಾವರಿ ಇಲಾಖೆ | 77565.00 |
| 4 | ಜಲಾನಯನ ಇಲಾಖೆ (ಹೊಸದಾಗಿ ನಿರ್ಮಾಣ ಮಾಡಿದ) | 12645.00 |
| 5 | ಜಲಾನಯನ ಇಲಾಖೆ (ನವೀಕರಿಸಲಾದ) | 705.00 |
| 6 | ಆಲಾನಯನ ಇಲಾಖೆ (ಬದು ನಿರ್ಮಾಣ) | 12220.00 |
| 7 | ಅರಣ್ಯ ಕೃಷಿ ಇಲಾಖೆ | 4020.00 |
| 8 | ತೋಟಗಾರಿಕೆಯಡಿ ನಡುತೋಪು (ಒಣ ಪ್ರದೇಶದಲ್ಲಿ) | 6720.00 |
| 9 | ಖಿಲಿಡಿಟಿಇಟಜಡಿ | 34801.00 |
| 10 | ಹನಿ ನೀರಾವರಿ ಇಲಾಖೆ (ತೋಟಗಾರಿಕೆ) | 6500.00 |
| 11 | ಹನಿ ನೀರಾವರಿ ಇಲಾಖೆ (ರೇಷ್ಮೆ) | 1403.00 |
| 12 | ನೀರು ಸರಬರಾಜು ಮತ್ತು ಚರಂಡಿ ಶುದ್ಧೀಕರಣ. | 51562.00 |
| 13 | ಸಾಮಾಜಿಕ ಅರಣ್ಯ ಇಲಾಖೆ | 775.00 |
| | ಒಟ್ಟು | 525337.00 |



2) ಜಲಾನಯನ ನಿರ್ವಹಣೆ ಸಮಪಾತಳಿ ಕಂದಕಗಳು ಟೆರೆಸಿಂಗ್ (terracing), ಸಮಪಾತಳಿ ಬದುಗಳ ರಚನೆ ಕಲ್ಲುಗಳ ತಡೆ (Boulder checks) ಹೊದರು ಕಡ್ಡಿಯ ರಚನೆ (gabion structures) ಮತ್ತು spring shed ಅಭಿವೃದ್ಧಿಯಂತಹ ಈ ಕಾಮಗಾರಿಗಳ ಪರಿಣಾಮದಿಂದಾಗಿ ಜಲಾನಯನ ಪ್ರದೇಶಕ್ಕೆ ಪರಿಪೂರ್ಣತೆಯ ಚಿಕಿತ್ಸೆ ಮಾಡುವುದು.

3) ಅತಿ ಸೂಕ್ಷ್ಮ ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಸೃಷ್ಟಿ, ಜೀರ್ಣೋದ್ಧಾರ ಮತ್ತು ಸಣ್ಣ ನೀರಾವರಿ ನಾಲೆಗಳ ಮತ್ತು ಚರಂಡಿಗಳ ನಿರ್ಮಾಣ.

4) ಸಾಂಪ್ರದಾಯಿಕ ಜಲಸಂಚಯಗಳ ಪುನಶ್ಚೇತನಗೊಳಿಸುವ ಕಾಮಗಾರಿಗಳು, ಕೆರೆಗಳ ಹೂಳೆತ್ತುವುದು ಸೇರಿದಂತೆ ಹಾಗೂ ಇತರೆ ನೀರಿನ ಸಂಚಯ ಕಾಮಗಾರಿಗಳು.

5) ಅರಣ್ಯೀಕರಣ, ನೇಡುತೋಪುಗಳು, ಅರಣ್ಯ ಜಮೀನಿನಲ್ಲಿ ಮತ್ತು ಸಾಮಾನ್ಯ ಜಮೀನುಗಳಲ್ಲಿ ಗಿಡಗಳ ನೆಡುವಿಕೆ ಮತ್ತು ತೋಟಗಾರಿಕೆ, ರಸ್ತೆ ಅಂಚುಗಳು, ನಾಲೆಗಳ ಬದುಗಳು, ಕೆರೆ ಅಂಗಳಗಳು ಮತ್ತು ಕರಾವಳಿ ಪ್ರದೇಶಗಳು ಇರುವ ಅರ್ಹ ಪ್ರವರ್ಗಗಳ ಫಲಾನುಭವಿಗಳ ಕುಟುಂಬಗಳಿಗೆ ಹಕ್ಕು ಆಧಾರಿತ ಸೌಲಭ್ಯಗಳನ್ನು ನೀಡುವಿಕೆ.

2016–17ನೇ ಸಾಲಿನ ಜಿಲ್ಲಾ ನೀರಾವರಿ ಯೋಜನೆಯಡಿ ಹಾವೇರಿ ಜಿಲ್ಲೆಯಲ್ಲಿ ಒಗ್ಗೂಡಿಸುವಿಕೆಯ ರೂ. 525337.00 ಲಕ್ಷಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.

## ಕಳೆದ ಮೂರು ವರ್ಷಗಳಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ಫಲಶೃತಿ:

- ಹಾವೇರಿ ಜಿಲ್ಲೆಯ ಈಗಿನ ನೀರಾವರಿ ಪ್ರದೇಶ 1,37,337 ಹೇಕ್ಟೇರ್.
- ಮುಂದಿನ 5 ವರ್ಷಗಳಲ್ಲಿ ನೀರಾವರಿ ಪ್ರದೇಶ ಅಭಿವೃದ್ಧಿ 1,06,822 ಹೇಕ್ಟೇರ್.
- ಒಟ್ಟಾರೆ 5 ವರ್ಷಗಳ ನಂತರ ನೀರಾವರಿ ಪ್ರದೇಶ ಅಭಿವೃದ್ಧಿ 2,44,159 ಹೇಕ್ಟೇರ್.
- ಇಂದಿನ ನೀರಿನ ಲಭ್ಯತೆ 0.87 ಬಿಸಿಎಂ,
- ಮುಂದಿನ 5 ವರ್ಷಗಳ ನಂತರ ನೀರಿನ ಲಭ್ಯತೆ 1.3838 ಬಿಸಿಎಂ.
- ಇಂದಿನ ಹನಿ ನೀರಾವರಿ ಪ್ರದೇಶ (ತೋಟಗಾರಿಕೆ) 21,609 ಹೇಕ್ಟೇರ್.
- ಮುಂದಿನ 5 ವರ್ಷಗಳ ನಂತರ ಹನಿ ನೀರಾವರಿ ಪ್ರದೇಶ (ತೋಟಗಾರಿಕೆ)ಅಭಿವೃದ್ಧಿ 31,797 ಹೇಕ್ಟೇರ್.
- ತುಂತುರು ನೀರಾವರಿ ಪ್ರದೇಶ (ಕೃಷಿ ಇಲಾಖೆ) 29,110 ಹೇಕ್ಟೇರ್.
- ಮುಂದಿನ 5 ವರ್ಷಗಳ ನಂತರ ತುಂತುರು ನೀರಾವರಿ ಪ್ರದೇಶ (ಕೃಷಿ ಇಲಾಖೆ)ಅಭಿವೃದ್ಧಿ 2,26,395 ಹೇಕ್ಟೇರ್.
- ಒಟ್ಟಾರೆ ಅಂತರ್ಜಲ ಅಭಿವೃದ್ಧಿ ಮತ್ತು ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದುತ್ತವೆ. ■



ವರದಿ




ಶ್ರೀನಿವಾಸ ಚಿತ್ರಗಾರ

ಜಿಲ್ಲಾ ಐ.ಇ.ಸಿ ಸಂಯೋಜಕರು,
ನರೇಗಾ ವಿಭಾಗ,
ಜಿಲ್ಲಾ ಪಂಚಾಯತಿ, ಕೊಪ್ಪಳ.


# ಕೊಪ್ಪಳ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅನುಷ್ಠಾನಗೊಂಡ ವಿಶೇಷ ಕಾರ್ಯಕ್ರಮಗಳಿಗೆ ಸಚಿವರ ಪ್ರಶಂಸೆ

ದಿನಾಂಕ : 18.03.2017 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸನ್ಮಾನ್ಯ ಸಚಿವರಾದ ಶ್ರೀ ಹೆಚ್, ಕೆ ಪಾಟೀಲ್‌ರವರು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಿ ಬರ ಪರಿಹಾರ ಕಾಮಗಾರಿಗಳ ಪ್ರಗತಿ ಪರಿಶೀಲನೆ ಮಾಡಿ ಅಧಿಕಾರಿಗಳೊಂದಿಗೆ ಚರ್ಚಿಸುವಾಗ ನರೇಗಾ ಯೋಜನೆಯ ಕೆರೆ ಅಭಿವೃದ್ಧಿ, ಕೃಷಿ ಹೊಂಡ, ನಮ್ಮ ಹೊಲ ನಮ್ಮ ದಾರಿ ಈ ರೀತಿಯ ಸಮುದಾಯ ಕಾಮಗಾರಿಗಳನ್ನು ಬರಗಾಲದಲ್ಲಿಯೂ ಕೂಲಿಕಾರರು ಗುಳೆ ಹೋಗದಂತೆ ತಡೆದು ಚುರುಕಿನಿಂದ ಹೆಚ್ಚು ಕೂಲಿಕಾರರಿಗೆ ಕೆಲಸ ನೀಡಿರುವುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು ಹಾಗೂ ನರೇಗಾ ಯೋಜನೆಯನ್ನು ಮತ್ತಷ್ಟು ಚುರುಕುಗೊಳಿಸುವಂತೆ ಸೂಚನೆ ನೀಡಿದರು.

ಈ ಸಂಧರ್ಭದಲ್ಲಿ ಮಾನ್ಯ ಸಚಿವರು ಮಾತನಾಡುತ್ತಾ ಬನ್ನಿಕೊಪ್ಪ ಮತ್ತು ಕವಲೂರು ಗ್ರಾಮದ ಕೆರೆಗಳನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅನುದಾನದಿಂದ ನರೇಗಾ ಕಾರ್ಯಕ್ರಮದಡಿಯಲ್ಲಿ ಅಭಿವೃದ್ಧಿ ಪಡಿಸಿ ಜನರಿಗೆ ತುಂಗಭದ್ರಾ ಹಿನ್ನಿರಿನ ನೆಲೋಗಿಪುರದ ಜಾಕವೆಲ್‌ನಿಂದ ಕುಡಿಯುವ ನೀರನ್ನು ಒದಗಿಸಿರುವುದು ಮತ್ತು ಈ ಯೋಜನೆಯಲ್ಲಿ ವಿಶೇಷ ಕಾರ್ಯಕ್ರಮಗಳಾದ ಆರೋಗ್ಯ ತಪಾಸಣಾ ಅಭಿಯಾನ, ವೈಯಕ್ತಿಕ ಬ್ಯಾಂಕ್ ಖಾತೆ ತೆರೆಯುವ ಅಭಿಯಾನ, ಕೂಲಿಕಾರರಿಗೆ ಉದ್ಯೋಗ ಒದಗಿಸುವುದರೊಂದಿಗೆ ಮಕ್ಕಳಿಗೆ ಆಟದೊಂದಿಗೆ ಪಾಠ ಕಲಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಜಿಲ್ಲೆಯಲ್ಲಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿರುವುದು ಪ್ರಶಂಸಾರ್ಹ ಎಂದು ಈ ಸಂದರ್ಭದಲ್ಲಿ ಹೇಳಿದರು.

**ಕುಡಿಯುವ ನೀರಿನ ಸಮಸ್ಯೆ, ಗ್ರಾಮೀಣ ಭಾಗದ ಕೂಲಿಕಾರರಿಗೆ ಉದ್ಯೋಗದ ಸಮಸ್ಯೆ, ಜಾನುವಾರುಗಳಿಗೆ ಮೇವಿನ ಸಮಸ್ಯೆ ಇನ್ನೂ ಹಲವಾರು ಬರದ ಸಮಸ್ಯೆಗಳು ದಿನನಿತ್ಯ ಕಂಡುಬರುತ್ತವೆ.**

## ಬರದ ಸಮಸ್ಯೆ ನೀಗಿಸಲು ನರೇಗಾ ತಂತ್ರಗಾರಿಕೆ:

ಮಾರ್ಚ್ ಬಂತೆಂದರೆ ಸಾಕು ವಿಪರೀತ ಬಿಸಿಲಿನ ದಗೆ ಮತ್ತು ಬರಗಾಲದ ಛಾಯೆ, ಕುಡಿಯುವ ನೀರಿನ ಸಮಸ್ಯೆ, ಗ್ರಾಮೀಣ ಭಾಗದ ಕೂಲಿಕಾರರಿಗೆ ಉದ್ಯೋಗದ ಸಮಸ್ಯೆ, ಜಾನುವಾರುಗಳಿಗೆ ಮೇವಿನ ಸಮಸ್ಯೆ ಇನ್ನೂ ಹಲವಾರು ಬರದ ಸಮಸ್ಯೆಗಳು ದಿನನಿತ್ಯ ಕಂಡುಬರುತ್ತವೆ. ಈ ಎಲ್ಲಾ ಸಮಸ್ಯೆಗಳನ್ನು







ಬಗೆಹರಿಸುವ ನಿಟ್ಟಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಿಲ್ಲಾ ಪಂಚಾಯತಿಯು ತನ್ನ ವ್ಯಾಪ್ತಿಯ ಗ್ರಾಮಗಳಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ರೂಪಿಸಿದೆ. ಪ್ರತಿ ನಿತ್ಯ 600 ರಿಂದ 1000 ಕೂಲಿಕಾರರಿಗೆ ಕೆಲಸ ಒದಗಿಸುವ ಮುಖೇನ ಅವರಿಂದ ತಮ್ಮ ಗ್ರಾಮಗಳ ಕೆರೆಗಳನ್ನು ಅಭಿವೃದ್ಧಿಪಡಿಸಲು ಸಾಕಾರವಾಗಿದೆ.

ರೈತರ ಹೊಲಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದ್ದು, ಮಳೆಗಾಲದಲ್ಲಿ ಉತ್ತಮ ಮಳೆ ಬಂದು ಕೆರೆಗಳಲ್ಲಿ ಮತ್ತು ಕೃಷಿ ಹೊಂಡಗಳಲ್ಲಿ ನೀರು ನಿಂತು ಅಂತರ್ಜಲ ಹೆಚ್ಚಿಸಲು ಅನುಕೂಲವಾಗುವುದರ ಜೊತೆಗೆ ಜಾನುವಾರುಗಳಿಗೆ ಕುಡಿಯುವ ನೀರು ಸಹ ಸಿಗುವಂತೆ ಮಾಡಲಾಗುತ್ತಿದೆ ಹಾಗೂ ತಮ್ಮ ಹೊಲಗಳಲ್ಲಿ ಇರುವ ಬೋರ್‌ವೆಲ್‌ಗಳು ಮರುಪೂರಣಗೊಂಡು ಬೇಸಿಗೆಯಲ್ಲಿ ಸಹ ಬೆಳೆಗಳನ್ನು ಬೆಳೆಯಲು ಸಹಕಾರಿಯಾಗಿದೆ. ನಮ್ಮ ಹೊಲ ನಮ್ಮ ದಾರಿ ಯೋಜನೆ ಮೂಲಕ ರೈತರು ತಮ್ಮ ಹೊಲಗಳಿಗೆ ಎತ್ತಿನ ಬಂಡಿಯಲ್ಲಿ ಬಂದು ಹೋಗಲು ಅನುಕೂಲವಾಗಿದೆ. ರೈತರು ಬರಗಾಲದಲ್ಲಿಯೂ ಸಹ ಕೆಲಸ ದೊರೆತಿರುವುದರಿಂದ ಬೇರೆ ಜಿಲ್ಲೆಗಳಿಗೆ ಗುಳೆ ಹೋಗದೆ ತಮ್ಮ ಗ್ರಾಮದಲ್ಲಿಯೇ ಕೆಲಸ ಮಾಡುತ್ತಾ ನೆಮ್ಮದಿಯ ಜೀವನ ಕಂಡುಕೊಳ್ಳಲು ಸಹಕಾರಿಯಾಗಿದೆ.

ಕೊಪ್ಪಳ ಜಿಲ್ಲಾ ಪಂಚಾಯತಿಯಿಂದ ಮಾಹಿತಿ, ಶಿಕ್ಷಣ ಮತ್ತು ಸಂವಹನದಲ್ಲಿ ಕಾರ್ಯಕ್ರಮದಡಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಅರಿವು ಮೂಡಿಸಲು ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ನರೇಗಾ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅನುವು ಮಾಡಿಕೊಟ್ಟಂತಾಗಿದೆ.

## ವೈಯಕ್ತಿಕ ಬ್ಯಾಂಕ್ ಖಾತೆ ತೆರೆಯುವ ಅಭಿಯಾನ

ಕೊಪ್ಪಳ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಅಭಿಯಾನ ಮಾದರಿಯಲ್ಲಿ ಮಾಹತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸಮುದಾಯ ಕಾಮಗಾರಿಗಳಲ್ಲಿ ಮತ್ತು ವೈಯಕ್ತಿಕ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಕೂಲಿಕಾರರಿಗೆ ಪಾರದರ್ಶಕ ಮತ್ತು ಉತ್ತರಾದಾಯತ್ವದಡಿ ಕೂಲಿ ಹಣ ಪಾವತಿಸಲು, ಪ್ರತಿ ಕೂಲಿಕಾರರಿಗೂ ವೈಯಕ್ತಿಕ ಬ್ಯಾಂಕ್ ಖಾತೆಯನ್ನು ಹೊಂದುವ ಸಲುವಾಗಿ ವೈಯಕ್ತಿಕ ಬ್ಯಾಂಕ್ ಖಾತೆ ತೆರೆಯುವ ಅಭಿಯಾನ ಎಂಬ ವಿಶಿಷ್ಠ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಎಲ್ಲಾ ಗ್ರಾಮ ಪಂಚಾಯತಿಗಳಿಂದ ಪ್ರತಿ ದಿನ 50ರಿಂದ 60 ಕೂಲಿಕಾರರು ಮೂಲ ದಾಖಲೆಗಳೊಂದಿಗೆ ಅಭಿಯಾನದಲ್ಲಿ ಪಾಲ್ಗೊಂಡು ಅರ್ಜಿಯನ್ನು ಸಲ್ಲಿಸುತ್ತಿದ್ದಾರೆ ಅದರಂತೆ ಪ್ರತಿ ಕೂಲಿಕಾರರಿಗೂ ಬ್ಯಾಂಕ್ ಖಾತೆಯನ್ನು ತೆರೆಯಲು ಪಂಚಾಯತಿ ಅಬಿವೃದ್ದಿ ಅಧಿಕಾರಿಗಳು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಎಲ್ಲಾ ಗ್ರಾಮ





ಪಂಚಾಯತಿಗಳಲ್ಲಿ ಖಾತೆ ತೆರೆಯುವ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಇದರಿಂದ ಹಣ ಹಂಚಿಕೆಯಲ್ಲಿ ಮಧ್ಯವರ್ತಿಗಳು ಹಾವಳಿ ತಪ್ಪಿಸಿ ಕೂಲಿಕಾರರಿಗೆ ನೆಮ್ಮದಿಯಿಂದ ಕೂಲಿ ಹಣವನ್ನು ಪಡೆಯುವಂತಾಗಿದೆ.

## ಕೊಪ್ಪಳ ಜಿಲ್ಲೆಯ ಬಹುದ್ದೂರ್ ಬಂಡಿ ಮತ್ತು ಇಟಗಿ ಗ್ರಾಮ ಪಂಚಾಯಿತಿಗಳಲ್ಲಿ ಆರೋಗ್ಯ ಶಿಬಿರ ಹಮ್ಮಿಕೊಂಡಿರುವುದು



ಕೂಲಿಕಾರರು ಕೆರೆ ಅಭಿವೃದ್ಧಿ, ನಮ್ಮ ಹೊಲ– ನಮ್ಮ ದಾರಿ, ಕೃಷಿ ಹೊಂಡ ಕಾಮಗಾರಿಗಳಲ್ಲಿ ವಿಪರೀತ ಬಿಸಿಲಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅವರ ಆರೋಗ್ಯದಲ್ಲಿ ಏರುಪೇರು ಆಗದಂತೆ ಗ್ರಾಮಗಳ ವ್ಯಾಪ್ತಿಯ ಸರ್ಕಾರಿ ಆರೋಗ್ಯ ಅಧಿಕಾರಿಗಳನ್ನು ಅವರು ಕೆಲಸ ಮಾಡುವ ಸ್ಥಳಗಳಿಗೆ ಕರೆದುಕೊಂಡು ಹೋಗಿ ಆರೋಗ್ಯದ ತಪಾಸಣೆ ಕೂಡ ಮಾಡಿಸಲಾಗುತ್ತಿದೆ. ಇದರಿಂದ ಕೂಲಿಕಾರರ ಮಾನಸಿಕ ಸ್ಥೈರ್ಯ ಬಲಪಡಿಸಿದ್ದು ಇದರಿಂದ ಎಲ್ಲಾ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳತ್ತಿದ್ದಾರೆ.

## ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಕೂಲಿಕಾರರ ಚಿಕ್ಕ ಮಕ್ಕಳಿಗೆ ಆಟದೊಂದಿಗೆ ಪಾಠ

ಕೊಪ್ಪಳ ಜಿಲ್ಲೆಯ ಗ್ರಾಮಗಳಲ್ಲಿ ಹೆಚ್ಚಿನ ಕೂಲಿಕಾರರಿದ್ದು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೆಚ್ಚು ಹೆಚ್ಚು ಕೆಲಸ ನಿರ್ವಹಿಸುತ್ತಿದ್ದು ಆದರೊಂದಿಗೆ ಅವರ ಮಕ್ಕಳನ್ನು ಕೆಲಸ ಸ್ಥಳಗಳಿಗೆ ಕರೆದುಕೊಂಡು ಬರುತ್ತಾರೆ ಇದರಿಂದ ಮಕ್ಕಳಿಗೆ ಶಿಕ್ಷಣದಿಂದ ವಂಚಿತರಾಗದಂತೆ ಮುತವರ್ಜಿ ವಹಿಸಿ ಮಕ್ಕಳಿಗೆ ಕನ್ನಡ ಅಕ್ಷರಗಳನ್ನು ಕಲಿಸಲಾಗುತ್ತಿದೆ. ಮತ್ತು ಅವರಿಗೆ ಆಟವಾಡಲು ಆಟದ ಸಾಮನುಗಳನ್ನು ಕೂಡ ಒದಗಿಸಲಾಗಿದೆ. ತಿನ್ನಲು ಮಕ್ಕಳಿಗೆ ಬಿಸ್ಕೆಟ್ ಮತ್ತು ಬ್ರೇಡ್‌ಗಳನ್ನು ನೀಡಲಾಗಿದೆ. ಮಕ್ಕಳು ಋಣತ್ಮಾಕ ಚಟುವಟಿಕೆಗಳನ್ನು ತೋರಿಸಲು ಅನುವು ಮಾಡಿಕೊಡಲಾಗಿದೆ ಇದರಿಂದ ಎಲ್ಲಾ ಕೂಲಿಕಾರರು ಕೆಲಸ ನಡೆಯುವ ಸ್ಥಳಕ್ಕೆ ತಮ್ಮ ಮಕ್ಕಳನ್ನು ಕರೆದುಕೊಂಡು ಬರಲು ಆಸ್ತಕಿ ತೋರಿಸುತ್ತಿದ್ದಾರೆ.

## ಉದ್ಯೋಗ ಮಾಹಿತಿ ರಥ ಅಭಿಯಾನ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳಡಿ ಕೊಪ್ಪಳ ಜಿ.ಪಂ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಕೂಲಿಕಾರರು ಗುಳೆ ಹೋಗುವುದನ್ನು ತಪ್ಪಿಸುವ ಸಲುವಾಗಿ ಉದ್ಯೋಗ ಮಾಹಿತಿ ರಥ ಅಭಿಯಾನವನ್ನು ಕೈಕೊಂಡಿದ್ದು. ಈ ವಾಹನವು ಎಲ್ಲಾ ಗ್ರಾಮಗಳಲ್ಲಿ ವಾರ್ಡ್‌ಗಳಲ್ಲಿ, ಎಸ್.ಸಿ/ಎಸ್.ಟಿ ಕಾಲೋನಿಗಳಲ್ಲಿ ಸಂಚರಿಸಿ ಆಡಿಯೋ ಮುಖಾಂತರ, ಕರಪತ್ರಗಳೊಂದಿಗೆ ನರೇಗಾ ಮಾಹಿತಿಯನ್ನು ವ್ಯಾಪಕ ಪ್ರಚಾರ ಮಾಡಿ ಕೂಲಿಕಾರರು ಉದ್ಯೋಗವನ್ನು ಪಡೆಯಲು ಕಾರಣವಾಗಿದ್ದು ಹೆಚ್ಚು ಮಾನವ ದಿನಗಳನ್ನು ಸೃಜಿಸಲು ಕಾರಣವಾಗಿದೆ.

ಒಟ್ಟಾರೆಯಾಗಿ ಕೊಪ್ಪಳ ಜಿಲ್ಲಾ ಪಂಚಾಯಿತಿಯು ಅಭಿವೃದ್ಧಿ ಯೋಜನೆಗಳ ಕುರಿತು ಅನುಸರಿಸಿದ ಮಾರ್ಗಗಳ ಗ್ರಾಮೀಣಾಭಿವೃದ್ಧಿ ಸಚಿವರು ಪ್ರಶಂಸೆ ವ್ಯಕ್ತಪಡಿಸಿದರು. ■



## ರೋಜಗಾರ್ ದಿವಸ್

ಕೂಲಿಕಾರರಿಗೆ ಎಂ.ಜಿ.ಎನ್.ಆರ್.ಜಿ.ಎ. ಯೋಜನೆಯ ಮಹತ್ವವನ್ನು ತಿಳಿಸಲು ರೋಜಗಾರ್ ದಿವಸ್ ಆಚರಣೆ ಮೂಲಕ ಉದ್ದೇಶ, ಗುರಿ, ಯೋಜನೆಯ ಸೌಲಭ್ಯ ಮತ್ತು ಅನುಷ್ಠಾನ ಕಾರ್ಯವಿಧಾನಗಳ ಕುರಿತು ತಿಳಿಸುತ್ತಾ ಕೂಲಿಕಾರರಲ್ಲಿ ಅರಿವು ಮೂಡಿಸಲಾಗಿದೆ.

ಲೇಖನ



ನಿಂಗೇಗೌಡ

ನಿವೃತ್ತ ಪೀಠಾಧಿಕಾರಿ,
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

# ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರಿ ನೌಕರರು ಮತ್ತು ಲೋಕನೌಕರರ ಕರ್ತವ್ಯ ನಿರ್ವಹಣೆ

**ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರಿ ನೌಕರರು ಮತ್ತು ಲೋಕನೌಕರರ ಕರ್ತವ್ಯ ನಿರ್ವಹಣೆಯ ಮೇಲೆ ಸರ್ಕಾರದ ನಿಯಂತ್ರಣಕ್ಕೆ ಸಂಬಂಧಿಸಿದ ಕಾಯ್ದೆಗಳ ಬಗ್ಗೆ ಸಂಕ್ಷಿಪ್ತ ವಿವರಣೆ**

ಸಾಂವಿಧಾನಿಕ ಮಾನ್ಯತೆಯನ್ನು ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ಮೂಲಕ ಗ್ರಾಮೀಣಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರಾಡಳಿತ ಸಂಸ್ಥೆಗಳಿಗೆ ನೀಡಲಾಗಿದೆ. 73ನೇ ತಿದ್ದುಪಡಿಯನ್ವಯ ಅನುಚ್ಛೇದ 243–ಎ ರಿಂದ 243–ಓ ರವರೆವಿಗೆ ಪಂಚಾಯತ್ ಸಂಸ್ಥೆಗಳ ರಚನೆ, ಸದಸ್ಯರುಗಳ ಆಯ್ಕೆ, ಮೀಸಲಾತಿ, ಪಂಚಾಯತ್ ಸಂಸ್ಥೆಗಳ ಆಡಳಿತ ನಿರ್ವಹಣೆಯಲ್ಲಿ ಅಧಿಕಾರಗಳ, ಪ್ರಾಧಿಕಾರಗಳ, ಕರ್ತವ್ಯಗಳ ಮತ್ತು ಜವಾಬ್ದಾರಿಗಳ ಬಗ್ಗೆ ವಿವರಿಸಲಾಗಿದೆ.

ಅನುಚ್ಛೇದ 243–ಜಿ ರನ್ವಯ ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ವ್ಯವಸ್ಥೆ, 243–ಹೆಚ್ ರನ್ವಯ ತೆರಿಗೆ ವಿಧಿಸುವಿಕೆ ಹಾಗೂ 243–ಐ ರನ್ವಯ ಪಂಚಾಯತ್ ಲೆಕ್ಕಪತ್ರಗಳ ಪರಿಶೋಧನೆಯು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಡಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಸಂವಿಧಾನದ ಅನುಚ್ಛೇದ 243–ಎ ರಿಂದ 243–ಓ ಗಳಿಗೆ ಸಂಬಂಧಿಸಿದ ಉದ್ದೇಶಗಳನ್ನು ಈಡೇರಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ನ್ನು ದಿನಾಂಕ:10–05–1993 ರಿಂದ ಜಾರಿಗೊಳಿಸಲಾಗಿರುತ್ತದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೇಮಕಗೊಳ್ಳುವ ಸರ್ಕಾರಿ ಸೇವೆಯ ಅಧಿಕಾರಿಗಳು ಮತ್ತು ನೌಕರರ ಜೊತೆಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಆಯ್ಕೆಯಾಗುವ ಸದಸ್ಯರುಗಳು ಸಹ ಪಂಚಾಯತ್ ರಾಜ್ ಆಡಳಿತದಲ್ಲಿ ಸಮನಾಗಿ ಪಾಲ್ಗೊಳ್ಳುತ್ತಾರೆ. ಇವರುಗಳು ಪಂಚಾಯತ್ ರಾಜ್ ಸಂಸ್ಥೆಯು ಸ್ಥಳೀಯ ಜನತೆಯ ಮೂಲಭೂತ ಸೌಕರ್ಯಗಳಿಗೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. ಈ ಸಂಸ್ಥೆಯು ಆಡಳಿತ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುತ್ತಿರುವುದರಿಂದ, ಈ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿನ ವೈಪಲ್ಯತೆ, ನ್ಯೂನತೆ ಹಾಗೂ ಅಧಿಕಾರ ಮತ್ತು ಹಣದುರುಪಯೋಗ ಪ್ರಕರಣಗಳಿಗೆ ಸರ್ಕಾರಿ ಸೇವೆಯ/ಪಂಚಾಯತಿಗಳು ನೇಮಿಸಿಕೊಂಡ ನೌಕರರು ಹಾಗೂ ಚುನಾಯಿತ ಸದಸ್ಯರುಗಳು, ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಸಮನಾಗಿ ಜವಾಬ್ದಾರರಾಗಿರುತ್ತಾರೆ.

ಸರ್ಕಾರಿ ನೌಕರರ ಸಂಬಂಧದ ಸೇವಾ ನ್ಯೂನತೆ, ಕರ್ತವ್ಯಲೋಪ, ದುರ್ನಡತೆ ಮತ್ತು ಹಣದುರುಪಯೋಗ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ/ವಿಚಾರಣೆ ಮಾಡಲು ಹಾಗೂ ಶಿಕ್ಷೆ ಜಾರಿ ಮಾಡಲು ಕರ್ನಾಟಕ ನಾಗರೀಕಾ ಸೇವಾ(ನಡತೆ) ನಿಯಮಾವಳಿಗಳು 66 ಮತ್ತು ಕರ್ನಾಟಕ ನಾಗರೀಕಾ ಸೇವಾ(ಸಿ.ಸಿ.ಎ) 1957 ನಿಯಮಗಳು, ಚಾಲ್ತಿಯಲ್ಲಿರುತ್ತವೆ. ನಗರಾಡಳಿತ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಸದಸ್ಯರುಗಳು, ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು ಹಾಗೂ ಗ್ರಾಮ ಪಂಚಾಯತಿ ನೇಮಿಸಿಕೊಂಡಿರುವ ಸಿಬ್ಬಂದಿ ಮತ್ತು ಹೊರಗುತ್ತಿಗೆ

ನೌಕರರ ಮೇಲೆ ನಿಯಂತ್ರಣ ಸಾಧಿಸಲು, ಸರ್ಕಾರ Karnataka Public Authorities (Disciplinary proceedings against employees) Act 1982 ಹಾಗೂ The Karnataka Local Authorities (Disciplinary Proceedings of against employees) Act 1966 ಜಾರಿಗೊಳಿಸಲಾಗಿತ್ತು.

ಕರ್ನಾಟಕ ಸರ್ಕಾರ ತನ್ನ ಆಡಳಿತ ಹಾಗೂ ತನ್ನ ಆಡಳಿತ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗಳ, ಸ್ಥಳೀಯ ಆಡಳಿತ ಸಂಸ್ಥೆಗಳ, ನಗರಾಡಳಿತ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತದಲ್ಲಿ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯನ್ನು ಬಿಂಬಿಸಲು ಹಾಗೂ ಆಡಳಿತ ಪ್ರಕ್ರಿಯೆ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ದುರಾಡಳಿತ, ದುರ್ನಡತೆ, ದುರುಪಯೋಗ, ಕರ್ತವ್ಯ ನಿರ್ವಹಣೆಯಲ್ಲಿ ಉದ್ದೇಶಪೂರಕ ವಿಳಂಬವನ್ನು ನಿರ್ಬಂಧಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ನ್ನು ಜಾರಿಗೊಳಿಸಲಾಗಿದೆ. ಈ ಕಾಯ್ದೆ ಜಾರಿಗೆ ಬಂದಾಗ ಮೇಲೆ ತಿಳಿಸಿರುವ ಎರಡು ಕಾಯ್ದೆಗಳನ್ನು ನಿರಸನಗೊಳಿಸಲಾಗಿದೆ. ಸಾರ್ವಜನಿಕ ಪ್ರಾಧಿಕಾರಗಳು, ನಗರಾಡಳಿತ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳು, ಅಧ್ಯಕ್ಷರು ಮತ್ತು ನೌಕರರ ವಿರುದ್ಧದ ದೂರು ಪ್ರಕರಣಗಳನ್ನು ವಿಚಾರಣೆಗೊಳಪಡಿಸಲು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ಸಾರ್ವಜನಿಕ ಆಡಳಿತದಲ್ಲಿನ ನ್ಯೂನತೆ, ಲೋಪದೋಷಗಳು, ಅಧಿಕಾರ ಮತ್ತು ಅನುದಾನದ ದುರುಪಯೋಗ, ಅಕ್ರಮ ಸಂಭಾವನೆ ಪಡೆದಿರುವ ಪ್ರಕರಣೆಗಳಲ್ಲಿ ಕರ್ನಾಟಕ ಲೋಕಾಯುಕ್ತವು ತನಿಖೆ ನಡೆಸಲು ಪ್ರಾಧೀಕೃತಗೊಂಡಿರುತ್ತದೆ. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಪ್ರಕರಣ 2(12) ರಲ್ಲಿ "ಲೋಕ ನೌಕರ" ಎಂಬ ಪದಕ್ಕೆ ವ್ಯಾಖ್ಯಾನ ನೀಡಲಾಗಿದೆ. ಇದರನ್ವಯ ರಾಜ್ಯದ ತಳಹಂತದ ಪಂಚಾಯತ್ ರಾಜ್, ನಗರಾಡಳಿತ ಸಂಸ್ಥೆಗಳು, ವಿವಿಧ ಪ್ರಾಧಿಕಾರಗಳಿಗೆ ಆಯ್ಕೆಯಾಗಿರುವ/ನೇಮಕವಾಗಿರುವ ಸದಸ್ಯರುಗಳು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಹಾಗೂ ಈ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಹಾಗೂ ವೇತನ (ಯಾವುದೇ ರೀತಿಯ ಸಂಭಾವನೆ) ಪಡೆಯು ಎಲ್ಲಾ ವ್ಯಕ್ತಿಗಳನ್ನು ಕಾಯ್ದೆಯ ಉದ್ದೇಶಕ್ಕಾಗಿ "ಲೋಕನೌಕರ" ಎಂದು ವ್ಯಾಖ್ಯಾನಿಸಲಾಗಿದೆ. ಈ ಕಾಯ್ದೆಯಡಿ ರಾಜ್ಯದ ವಿಧಾನ ಮಂಡಲದ ಸದಸ್ಯರುಗಳು, ಸಚಿವರುಗಳನ್ನು ಹಾಗೂ ಮುಖ್ಯಮಂತ್ರಿಗಳನ್ನು "ಲೋಕನೌಕರ" ಪದದ ವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

ಇದರ ಜೊತೆಗೆ ಕೇಂದ್ರ ಸರ್ಕಾರದ Prevention of Corruption Act 1988 ಸಹ ಜಾರಿಯಲ್ಲಿದೆ. ಈ ಕಾಯ್ದೆಯ ಪ್ರಕರಣ 2(ಛಿ) ರಡಿಯಲ್ಲಿ "ಲೋಕ ನೌಕರ" ಎಂಬ ಪದಕ್ಕೆ ವ್ಯಾಖ್ಯಾನ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಅಥವಾ ಆದೇಶ/ಅನುದಾನದ ಮೂಲಕ ರಚಿತವಾಗಿರುವ ಹಾಗೂ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರ, ಸ್ವಯಂ ಆಡಳಿತ, ನಗರಾಡಳಿತ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು, ಸಹಕಾರ ಸಂಘಗಳ, ನಿಗಮಗಳ, ಮಂಡಳಿಗಳ ಚುನಾಯಿತ ಅಥವಾ ನಾಮನಿರ್ದೇಶಿತ ಸದಸ್ಯರುಗಳನ್ನು, ಅಧಿಕಾರಿಗಳನ್ನು ಹಾಗೂ ನೇಮಕಗೊಂಡಿರುವ ಸಿಬ್ಬಂದಿ ವರ್ಗದವರನ್ನು "ಲೋಕ ನೌಕರ" ಎಂದು ಗುರುತಿಸಲಾಗಿದೆ.

ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರಡಿಯಲ್ಲಿ (ನಗರಾಡಳಿತ ಪಂಚಾಯತ್ ರಾಜ್ ಸಂಸ್ಥೆಗಳು), ಪ್ರಾಧಿಕಾರಗಳ ಚುನಾವಣೆ ಅಥವಾ ನಾಮನಿರ್ದೇಶನಕ್ಕೆ ಹಣದ ಪ್ರಲೋಬನೆ ಮಾಡುವುದು, ನೀಡುವುದು ಮತ್ತು ಪಡೆಯುವುದನ್ನು ಸಹ ಅಪರಾದ ಎಂದು ಅರ್ಥೈಸಲಾಗಿದೆ. ಈ ಕಾಯ್ದೆಯ ಸೆಕ್ಷನ್ 7 ರಲ್ಲಿ "ಲೋಕ ನೌಕರರು" ಪಡೆಯುವ "ಅಕ್ರಮ ಸಂಭಾವನೆಗೆ" ಗರಿಷ್ಠ ಐದು ವರ್ಷಗಳ ಮತ್ತು ಸೆರೆವಾಸದ ಶಿಕ್ಷೆಯನ್ನು ವಿಧಿಸಲು ಅವಕಾಶವಿದೆ.

ಪಂಚಾಯತ್ ರಾಜ್ ಸಂಸ್ಥೆಯ ಸದಸ್ಯ, ಅಧ್ಯಕ್ಷ ಅಥವಾ ಉಪಾಧ್ಯಕ್ಷ, ಅಧಿಕಾರಿ ಮತ್ತು ನೌಕರರು ತಮ್ಮ ಸ್ವಂತ ಹಿತಾಸಕ್ತಿಗೆ ಆಡಳಿತ ಮತ್ತು ಅನುದಾನವನ್ನು ದುರುಪಯೋಗಪಡಿಸಿಕೊಳ್ಳುವುದನ್ನು, ಅಕ್ರಮ ಸಂಭಾವನೆ ಪಡೆಯುವುದನ್ನು, ಕರ್ತವ್ಯ ನಿರ್ವಹಣೆಯಲ್ಲಿ ಅನಗತ್ಯ ವಿಳಂಬ ಮಾಡುವ ಮೂಲಕ ಸಾರ್ವಜನಿಕರಿಗೆ ಹಿಂಸೆ ನೀಡುವುದನ್ನು ಕ್ರಿಮಿನಲ್ ಅಪರಾದವೆಂದು ಪರಿಗಣಿಸಲಾಗಿದೆ. ಇಂತಹ ಅಪರಾದಗಳ ನಿರ್ಣಯದಿಂದಾಗಿ ಅಪಾದಿತರಿಗೆ ಗರಿಷ್ಠ ಮಟ್ಟದ ದಂಡ ಹಾಗೂ 5 ವರ್ಷಗಳ ಕಠಿಣ ಶಿಕ್ಷೆಯನ್ನು ಜಾರಿಗೊಳಿಸಲು ಅವಕಾಶವಿದೆ. ಅಪರಾದಗಳು ಪುನರ್ ವರ್ತನೆಯಾಗುವ ಪ್ರಕಣಗಳಲ್ಲಿ ಗರಿಷ್ಠ 10 ವರ್ಷಗಳ ಸೆರೆವಾಸ ನೀಡಲಾಗುವುದು.

ಭ್ರಷ್ಟಚಾರ ತಡೆಗಟ್ಟುವಿಕೆ ಕಾಯ್ದೆ 1988 ರಡಿಯ ಪ್ರಕರಣ 19 ರನ್ವಯ ಅಪರಾದಗಳನ್ನು ಅಭಿಯೋಜನೆಗೊಳಿಸುವ ಮುನ್ನ ಸಕ್ಷಮ ಪ್ರಾಧಿಕಾರಗಳಿಂದ ಪಾರ್ವಾನುಮೋದನೆ ಪಡೆಯಬೇಕಾಗಿದೆ. ಇದರನ್ವಯ ಇಂತಹ ಅಪರಾದಿಗಳನ್ನು ಹುದ್ದೆಯಿಂದ ಅಥವಾ ಸೇವೆಯಿಂದ ಯಾರು ವಜಾಗೊಳಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೋ,

ಅಂತಹ ಪ್ರಾಧಿಕಾರಿಗಳಿಂದ ಪೂರ್ವಾನುಮೋದನೆ ಪಡೆಯಬೇಕಾಗಿದೆ. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಸದಸ್ಯರುಗಳು, ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, "ದುರ್ನಡತೆಗಾಗಿ" ಸದಸ್ಯತ್ವದಿಂದ ಅಥವಾ ಹುದ್ದೆಯಿಂದ ವಜಾಗೊಳಿಸಲು ಸರ್ಕಾರ ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಈ ಕಾಯ್ದೆಯ ಪ್ರಕರಣ 20 ರನ್ವಯ ಯಾವುದೇ "ಲೋಕನೌಕರ" ಅಕ್ರಮ ಸಂಭಾವನೆ ಪಡೆಯುವ, ಸಂದರ್ಭವನ್ನು ಸೃಜಿಸಿ, ಅದನ್ನು ಪಡೆಯಲು ಅಥವಾ ಪಡೆದಿದ್ದ ಪ್ರಕರಣೆಗಳನ್ನು 'ಅಕ್ರಮ ಸಂಭಾವನೆ ಪಡೆದಿದ್ದಾನೆ' ಎಂದು ಪರಿಭಾವಿಸಲು ಅವಕಾಶ ನೀಡಲಾಗಿದೆ. ಇಂತಹ ಪ್ರಕರಣಗಳು ಸಂಬಂಧಿಸಿದ ತನಿಖಾ ಪ್ರಾಧಿಕಾರದಿಂದ ಸಕ್ಷಮ ಪ್ರಾಧಿಕಾರಕ್ಕೆ ಅಥವಾ ಸರ್ಕಾರಕ್ಕೆ ವರದಿಯಾದ ತಕ್ಷಣ ಪರಿಶೀಲಿಸಿ "ಅಪರಾಧಿ"ಯನ್ನು ಅಭಿಯೋಜನೆಗೊಳಿಸಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆ ನೀಡಬೇಕು. ಹುದ್ದೆಯಿಂದ ಅಮಾನತ್ತುಗೊಳಿಸುವ ಅಥವಾ ಸದಸ್ಯತ್ವದಿಂದ ತೆಗೆಯುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿದೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಪ್ರಕರಣ 13 ರನ್ವಯ "Public Servant to Vacate Office, If directed by Lokayuktha" ಎಂದು ತಿಳಿಸಲಾಗಿದೆ. ದೂರುದಾರನ ಅರ್ಜಿಯಲ್ಲಿನ ಅಂಶಗಳು ತನಿಖೆಯಿಂದ ಸಾಬೀತಾಗಿದೆ ಎಂದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಅಭಿಪ್ರಾಯ ವ್ಯಕ್ತಪಡಿಸುತ್ತಾ, ಆ ಹುದ್ದೆಗಳಲ್ಲಿ ಮುಂದುವರಿಯಬಾರದು ಎಂದು ಕರ್ನಾಟಕ ಲೋಕಾಯುಕ್ತ 1984 ರ ಪ್ರಕರಣ 12(3) ರಡಿ ವರದಿಯನ್ನು ಸಕ್ಷಮಪ್ರಾಧಿಕಾರಕ್ಕೆ ಸಲ್ಲಿಸಿದಾಗ ಸಕ್ಷಮ ಪ್ರಾಧಿಕಾರ ಅಥವಾ ಸರ್ಕಾರ ಅದನ್ನು ಒಪ್ಪಬೇಕು ಅಥವಾ ನಿರಾಕರಿಸಬೇಕು. ವರದಿ ತಲುಪಿದ 3 ತಿಂಗಳೊಳಗೆ ಸರ್ಕಾರ ವರದಿಯನ್ನು ಒಪ್ಪದೆ ಪತ್ರಬರೆಯದಿದ್ದರೆ, ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿಕೊಳ್ಳಲಾಗಿದೆ ಎಂದು ಪರಿಭಾವಿಸಲಾಗುತ್ತದೆ. ಇದರಿಂದಾಗಿ ಲೋಕಾಯುಕ್ತ ಕಾಯ್ದೆ 1984 ರ ಪ್ರಕರಣೆ 2(12) ರಲ್ಲಿ ಲೋಕನೌಕರ ಎಂದು ಗುರುತಿಸಲಾಗಿರುವ ಪಂಚಾಯತ್ ರಾಜ್ ಸಂಸ್ಥೆಗಳು ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ಕಳೆದುಕೊಳ್ಳುತ್ತಾರೆ. ಪ್ರಕರಣ 2(12) ರಡಿಯಲ್ಲಿ ಗುರುತಿಸಲಾಗಿರುವ ಸರ್ಕಾರಿ ನೌಕರರು ಹಾಗೂ ಸ್ಥಳೀಯ ಸೇವಾ ಸಿಬ್ಬಂದಿ ಸೇವೆಯಿಂದ ಅಮಾನತ್ತುಗೊಳ್ಳುತ್ತಾರೆ. ಲೋಕಾಯುಕ್ತ

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾಯಿತರಾದ ಅಧ್ಯಕ್ಷರು/ ಉಪಾಧ್ಯಕ್ಷರು/ಸದಸ್ಯರುಗಳು ಪಂಚಾಯತ್ ರಾಜ್ ನಿಧಿ/ಯೋಜನೆಗಳಿಂದ ಸಂಭಾವನೆ ಪಡೆಯುವ ಎಲ್ಲಾ ನೌಕರರನ್ನು 'ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಹಾಗೂ ಭ್ರಷ್ಟಾಚಾರ ತಡೆಗಟ್ಟುವಿಕೆ 1988' ರ ಅಧಿನಿಯಮ ಲೋಕಾ ನೌಕರರು ಎಂದು ಪರಿಗಣಿಸಲಾಗಿದೆ.**

ಅಥವಾ ಉಪಲೋಕಾಯುಕ್ತರ ಶಿಫಾರಸ್ಸನ್ನು/ ವರದಿಯನ್ನು ಸರ್ಕಾರ ಒಪ್ಪಲು ಸಾಧ್ಯವಿಲ್ಲದಿದ್ದರೆ, ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಸಮರ್ಥನೆಯೊಡನೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಬೇಕಾಗುತ್ತದೆ.

ಭ್ರಷ್ಟಾಚಾರ ತಡೆ ಅಧಿನಿಯಮ 1988ನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಸದರಿ ಅಧಿನಿಯಮದ ಪ್ರಕರಣ 17ರನ್ವಯ "ತನಿಖೆ" ನಡೆಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತದಲ್ಲಿನ ಎಲ್ಲಾ ಪೋಲೀಸ್ ತನಿಖಾಧಿಕಾರಿಗಳಿಗೆ (ಪೋಲೀಸ್ ಇನ್ಸ್‌ಪೆಕ್ಟರ್‌ಗಳಿಗೆ) ನೀಡಲಾಗಿತ್ತು. ಇದೇ ಅಧಿಕಾರಿಗಳು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 15 ರಡಿ ಲೋಕಾಯುಕ್ತ ಪೋಲೀಸ್ ತನಿಖಾಧಿಕಾರಿಗಳಾಗಿ, ಲೋಕಾಯುಕ್ತ ಕಾಯ್ದೆಯನ್ನು ಜಾರಿಮಾಡಲು ನೆರವಾಗುತ್ತಿದ್ದರು. ಈ ರೀತಿಯ ದ್ವಿಮುಖ ಕಾರ್ಯಚಾರಣೆಯ ಬಗ್ಗೆ ಮಾನ್ಯ ಸರ್ವೋಚ್ಚನ್ಯಾಯಾಲಯ ಸಿ.ರಂಗಸ್ವಾಮಯ್ಯ ವಿರುದ್ಧ ಕರ್ನಾಟಕ ಪ್ರಕರಣದಲ್ಲಿ ನೀಡಿದ ನಿರ್ದೇಶನದನ್ವಯ ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಪ್ರಕರಣ 17 ರನ್ವಯ ಈ ಕಾಯ್ದೆ ಜಾರಿಗೆ ಪ್ರತ್ಯೇಕ ಭ್ರಷ್ಟಾಚಾರ ನಿಗ್ರಹ ದಳವನ್ನು (Anti Corruption Bureau-ACB) ಕರ್ನಾಟಕ ಸರ್ಕಾರ ದಿನಾಂಕ 14.03.2016 ರಂದು ರಚಿಸಿರುತ್ತದೆ ಹಾಗೂ ಎಲ್ಲಾ ಇಲಾಖೆಗಳಲ್ಲಿ 'ಜಾಗೃತ ಕೋಶಗಳನ್ನು' ಮತ್ತು ಇವುಗಳ ಮೇಲುಸ್ತುವಾರಿಗೆ "ಜಾಗೃತ ಸಲಹಾ ಮಂಡಳಿ"ಯನ್ನು ರಚಿಸಲು ಆದೇಶಿಸಿದೆ. ಇದರಿಂದಾಗಿ ಪ್ರಸ್ತುತ ರಾಜ್ಯದಲ್ಲಿ 'ಭ್ರಷ್ಟಾಚಾರ' ವನ್ನು ತಡೆಯಲು ACB ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತದೆ. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 15ರಡಿಯಲ್ಲಿ ರಾಜ್ಯಸರ್ಕಾರದ ಪೋಲೀಸ್ ಪಡೆಯೊಂದಿಗೆ ಲೋಕಾಯುಕ್ತ ಈಗ ಕಾರ್ಯನಿರ್ವಹಿಸುತ್ತಿದೆ.

ಸಾರ್ವಜನಿಕರು ತಮಗೆ ಸರ್ಕಾರದ ಇಲಾಖೆಗಳಿಂದ, ಅಧಿಕಾರಿಗಳಿಂದ ಮತ್ತು ಚುನಾಯಿತ ಪ್ರತಿನಿಧಿಗಳಿಂದ (ಲೋಕನೌಕರುಗಳಿಂದ) ಆಗುತ್ತಿರುವ ಕಿರುಕುಳ, ಪತ್ರವ್ಯವಹಾರಗಳಲ್ಲಿನ ವಿಳಂಬ, ಭ್ರಷ್ಟಾಚಾರದ ಬಗ್ಗೆ ಮೇಲಿನ ಎರಡೂ ಪ್ರಾಧಿಕಾರಗಳಿಗೆ ದೂರು ಸಲ್ಲಿಸಬಹುದಾಗಿದೆ. ಅಕ್ರಮ ಸಂಭಾವನೆಯನ್ನು ಪಡೆದ ಹಾಗೂ ಪಡೆಯಲು ಪ್ರಯತ್ನಿಸಿದ 'ಸರ್ಕಾರಿ ನೌಕರ' ಮತ್ತು 'ಲೋಕನೌಕರ' ರನ್ನು ಭ್ರಷ್ಟಚಾರ ನಿಗ್ರಹ ಕಾಯ್ದೆಯಡಿ ವಿಚಾರಣೆ ನಡೆಸಲು ಮತ್ತು ನ್ಯಾಯಾಲಯಗಳಲ್ಲಿ ದೂರು ದಾಖಲಿಸಲು ಅವಕಾಶವಿರುತ್ತದೆ. ಈ ಕಾಯ್ದೆಯಡಿ ACB ಸಂಸ್ಥೆಯು ಈಗಾಗಲೇ ನೂರಾರು ದೂರುಗಳನ್ನು ದಾಖಲಿಸಿದೆ. ಅಕ್ರಮ ಹಾಗೂ ಅಘೋಷಿತ ಸಂಪತ್ತಿನ ಕ್ರೋಢೀಕರಣದ ವಿರುದ್ಧ ದಾಳಿ ನಡೆಸಿ ಮೊಕದ್ದಮೆಗಳನ್ನು ದಾಖಲಿಸುತ್ತಿದೆ. ಕರ್ನಾಟಕ ಲೋಕಾಯುಕ್ತ ಈ ಹಿಂದೆ ಭ್ರಷ್ಟಚಾರ ನಿಗ್ರಹ ಕಾಯ್ದೆಯಡಿ ಈಗಾಗಲೆ ದಾಖಲಿಸಿದ್ದ ದೂರುಗಳ ಬಗ್ಗೆ ಈಗ ವಿಚಾರಣೆ ನಡೆಸುತ್ತಿದೆ.

ಮೇಲೆ ತಿಳಿಸಿರುವ ಕಾಯ್ದೆಗಳ ಜೊತೆಗೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ 286 ರಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಸದಸ್ಯರುಗಳನ್ನು ಹಾಗೂ ಈ ಮೂರು ಸಂಸ್ಥೆಗಳ ಅಧೀನದಲ್ಲಿ ನಾಮ ನಿರ್ದೇಶಿಸಲ್ಪಟ್ಟ ಸದಸ್ಯರುಗಳನ್ನು ಹಾಗೂ ಈ ಮೂರು ಸಂಸ್ಥೆಗಳ ಅಧೀನದಲ್ಲಿ ನಿಯೋಜಿತನಾದ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರನನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ದಂಡ ಸಂಹಿತೆಯ 21 ಪ್ರಕರಣ ಮತ್ತು ಭ್ರಷ್ಟಚಾರ ನಿವಾರಣಾ ಅಧಿನಿಯಮ 1988 ಅರ್ಥ ವ್ಯಾಪ್ತಿಯಲ್ಲಿ 'ಲೋಕನೌಕರ' ಎಂದು ಪರಿಗಣಿಸಲಾಗಿದೆ. ಆದುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಹಾಗು ಭ್ರಷ್ಟಚಾರ ತಡೆ ಅಧಿನಿಯಮದಡಿ ಇವರುಗಳ ವಿರುದ್ಧ ದೂರು ದಾಖಲಿಸುವ ಮತ್ತು ವಿಚಾರಣೆ ನಡೆಸಲು ಅವಕಾಶವಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43–ಎ ರಡಿ ಗ್ರಾಮ ಪಂಚಾಯತಿ ಸದಸ್ಯರುಗಳನ್ನು, ಪ್ರಕರಣ 136ರಡಿ ತಾ.ಪಂ ಸದಸ್ಯರುಗಳನ್ನು ಹಾಗೂ ಪ್ರಕರಣ 175ರಡಿ ಜಿಲ್ಲಾ ಪಂಚಾಯತಿ ಸದಸ್ಯರುಗಳನ್ನು ದುರ್ನಡತೆ, ಅಪಕೀರ್ತಿಕರ ನಡತೆ, ಅಕ್ರಮ ಸಂಭಾವನೆ ಪಡೆಯುವುದಕ್ಕಾಗಿ, ಅಧಿಕಾರ ದುರುಪಯೋಗಪಡಿಸಿಕೆ ೂಂಡಿರುವುದಕ್ಕಾಗಿ, ಲೈಂಗಿಕ ದೌರ್ಜನ್ಯಗಳು, ಪರಿಶಿಷ್ಟ ಜಾತಿ/ವರ್ಗದವರ ಮೇಲಿನ ಹಲ್ಲೆ ಮತ್ತು ನಿಂದನೆ ಮಾಡುವುದು ಹಾಗೂ ಪಂಚಾಯತ್ ರಾಜ್ ವಹಿಸಿರುವ ಜವಾಬ್ದಾರಿಗಳನ್ನು, ಕೆಲಸವನ್ನು ನಿರ್ವಹಿಸಲು ಅಸಮರ್ಥನಾದರೆ ಸದಸ್ಯತ್ವದಿಂದ ತೆಗೆದುಹಾಕಲು ಅವಕಾಶ ಕಲ್ಪಿಸಲಾಗಿದೆ. ಈ ಕ್ರಮವಹಿಸುವ ಮುನ್ನ ಸಂಬಂಧಿಸಿದ ಆರೋಪಿತರಿಂದ ವಿವರಣೆ ಪಡೆದು ಪರಿಶೀಲಿಸಿ ತದನಂತರ ಸರ್ಕಾರ ಕ್ರಮವಹಿಸುತ್ತದೆ.

ಪ್ರಕರಣ 13(ಸಿ) ರಡಿ ಗ್ರಾಮ ಪಂಚಾಯತಿ ಅನುಮತಿ ಇಲ್ಲದೆ ನಿರಂತರ 4 ತಿಂಗಳಗಿಂತ ಹೆಚ್ಚಾಗಿ ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಇಲ್ಲದಿದ್ದರೆ ಹಾಗೂ ನಿರಂತರವಾಗಿ ಗ್ರಾಮ ಪಂಚಾಯತಿಯ ನಾಲ್ಕು ಸಭೆಗೆ ಅನುಮತಿ ಇಲ್ಲದೆ 'ಗೈರು ಹಾಜರಾದರೆ', ಪ್ರಕರಣ 129 ರನ್ವಯ ತಾಲ್ಲೂಕು ಪಂಚಾಯತಿಯ ಅನುಮತಿ ಪಡೆಯದೆ ನಿರಂತರವಾಗಿ 6 ತಿಂಗಳು ಮೀರಿದ ಗೈರು ಹಾಜರಿಗಾಗಿ ಮತ್ತು 3 ಅನುಕ್ರಮ ಸಭೆಗಳಿಗೆ ಗೈರು ಹಾಜರಾದರೆ, ಪ್ರಕರಣ 168 ರನ್ವಯ ಜಿಲ್ಲಾ ಪಂಚಾಯತಿ ಸದಸ್ಯರುಗಳು 6 ತಿಂಗಳು ಮೀರಿದ ಗೈರು ಹಾಜರಿಗೆ ಅಥವಾ ಅನುಮತಿ ಇಲ್ಲದೆ ಅನುಕ್ರಮವಾಗಿ 3 ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ ಅವರುಗಳು ಸದಸ್ಯ ಸ್ಥಾನವನ್ನು ಕಳೆದುಕೊಳ್ಳುವರು. ಈ ವಿಷಯವಾಗಿ ರಾಜ್ಯ ಚುನಾವಣಾ ಆಯೋಗ/ಸರ್ಕಾರ ಸೂಕ್ತ ವಿಚಾರಣೆ ನಡೆಸಿದ ನಂತರ ನಿರ್ಧಾರ ಕೈಗೊಳ್ಳುತ್ತದೆ.

ಸರ್ಕಾರದ ಅನುದಾನ ಅಥವಾ ಪಂಚಾಯಿತಿಗಳ ಸಂಪನ್ಮೂಲದ ಹಣ, ಆಸ್ತಿಗಳನ್ನು ದುರುಪಯೋಗ ಮಾಡಿವ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗಿ ಮಾಡಿರುವುದು ಮೇಲ್ನೋಟಕ್ಕೆ ನಂಬಲರ್ಹ ಕಾರಣಗಳು ಇದೆಯೆಂದು ಮೇಲಿನ ಅಧಿಕಾರಿಗಳಿಗೆ ಕಂಡುಬಂದಲ್ಲಿ ಹಾಗೂ ಅಭಿಪ್ರಾಯಪಟ್ಟರೆ, ಅಂತಹ ಲೋಕನೌಕರ ಅಥವಾ ಅಧಿಕಾರಿ/ ನೌಕರರ ವಿರುದ್ಧ ಕರ್ನಾಟಕ ಆರ್ಥಿಕ ಸಂಹಿತೆಯ ಅನಚ್ಛೇದ 392ರನ್ವಯ "ಕ್ರಿಮಿನಲ್ ಮೊಕದ್ದಮೆ" ದಾಖಲಿಸಲು ಈಗಾಗಲೇ ಸುತ್ತೋಲೆ ಸಂಖ್ಯೆ: ಗ್ರಾಅಪ 188 ಜಿಪಸ 603, ದಿನಾಂಕ: 14–11–2003 ರಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದೆ.

ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಸದಸ್ಯರುಗಳು ಮತ್ತು ಅಧಿಕಾರಿ/ನೌಕರ ವರ್ಗದವರು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಿರುವ ಎಲ್ಲಾ ಕಾರ್ಯ ಜವಾಬ್ದಾರಿಗಳನ್ನು ನಿಗಧಿತ ಸಮಯದಲ್ಲಿ, ಪ್ರಾಮಾಣಿಕತೆ ಹಾಗೂ ಪಾರದರ್ಶಕವಾಗಿ ನಿಯಮಾನುಸಾರ ಕಾರ್ಯನಿರ್ವಹಿಸುವ ಮೂಲಕ ಗ್ರಾಮಾಭಿವೃದ್ಧಿಗೆ ಸಮಿಸಬೇಕಾಗಿದೆ. ■

ಲೇಖನ

ಪಿ. ಶಿವಶಂಕರ್

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಮೈಸೂರು

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ

ವಿಶ್ವಪ್ರಸಿದ್ಧ ಮೈಸೂರು ಜಿಲ್ಲೆಯು ತನ್ನದೇ ಆದ ಐತಿಹಾಸಿಕ, ಚಾರಿತ್ರಿಕ, ಸಾಂಸ್ಕೃತಿಕ ಹಿನ್ನಲೆಯುಳ್ಳ ಜಿಲ್ಲೆಯಾಗಿದ್ದು ವಿಶ್ವದಲ್ಲಿ ತನ್ನದೇ ಆದ ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಜೀವನದಿ ಕಾವೇರಿ ಮತ್ತು ಕಪಿಲ ನದಿಗೆ ಕೆ.ಆರ್.ಎಸ್ ಮತ್ತು ಕಬಿನಿ ಅಣೆಕಟ್ಟುಗಳನ್ನು ನಿರ್ಮಿಸಿದ್ದರೂ ಸಹ ಕಳೆದ 4 ವರ್ಷಗಳಿಂದ ಈ ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಈ ವರ್ಷ ಜಿಲ್ಲೆಯಲ್ಲಿನ 7 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಸರ್ಕಾರವು ಘೋಷಿಸಿದೆ.

ಜಿಲ್ಲೆಯಲ್ಲಿ ಜನರಿಗೆ ಹಾಗೂ ಜಾನುವಾರುಗಳಿಗೆ ನೀರಿನ ಸಮಸ್ಯೆ ಆಗಬಾರದೆಂದು ಜಿಲ್ಲಾಡಳಿತ ಮುನ್ನೆಚರಿಕೆಯಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜಾನುವಾರುಗಳು ಕುಡಿಯಲು ನೀರಿಗೆ ಸಮಸ್ಯೆ ಆಗದಂತೆ ಜಿಲ್ಲೆಯ ಬಹುಭಾಗದ ಎಲ್ಲಾ ಗ್ರಾಮಗಳಲ್ಲಿಯೂ ಕುಡಿಯುವ ನೀರಿನ ತೊಟ್ಟಿಗಳನ್ನು ನಿರ್ಮಿಸಿದೆ.

ಇಂತಹ ಮೈಸೂರು ಜಿಲ್ಲೆಯು ಇತ್ತೀಚಿನ ದಿನಗಳಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವುದು ವಿಪರ್ಯಾಸ, ತೀವ್ರ ಬರದ ಪರಿಣಾಮ ರೈತರಿಗೆ ವ್ಯವಸಾಯಕ್ಕೆ ನೀರಿಲ್ಲದೆ ಮಳೆ ಇಲ್ಲದೆ ರೈತರು ಆಕಾಶದತ್ತ ಕೈಮುಗಿಯುತ್ತಿದ್ದಾರೆ. ಆದರೆ ಜಾನುವಾರುಗಳು ಕುಡಿಯುವ ನೀರಿಗೋಸ್ಕರ ರೈತರ ಕಡೆ ನೋಡುತ್ತಿವೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯಂತಹ ಮಹತ್ತರ ಯೋಜನೆಯನ್ನು ಜಾರಿಗೆ ತಂದು ಬರ ನಿವಾರಣಾ ಕಾಮಗಾರಿಗಳು, ರೈತರಿಗೆ ನೆರವು ನೀಡುವ ಕಾಮಗಾರಿಗಳು ಹಾಗೂ ಕೃಷಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಅವಕಾಶ ನೀಡಿ...**



ರಾಜಮಹಾರಾಜರುಗಳ ಕಾಲದಿಂದಲೂ ಧಾನ ಧರ್ಮದ ಹೆಸರಿನಲ್ಲಿ ಗೋವುಗಳಿಗೆ ಕುಡಿಯುವ ನೀರಿನ ಪೂರೈಕೆಗಾಗಿ ಕೆರೆ, ಕಟ್ಟೆ ನಿರ್ಮಾಣ ಹಾಗೂ



ಕುಡಿಯುವ ನೀರಿನ ತೊಟ್ಟಿಗಳನ್ನು ನಿರ್ಮಿಸಿ ಸದಾಕಾಲ ಕುಡಿಯುವ ನೀರನ್ನು ಪೂರೈಸುತ್ತಿದ್ದುದ್ದು ನಮಗೆಲ್ಲ ಇತಿಹಾಸ ಪುಟಗಳನ್ನು ತೆರೆದಾಗ ಕಂಡುಬರುತ್ತದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯಂತಹ ಮಹತ್ತರ ಯೋಜನೆಯನ್ನು ಜಾರಿಗೆ ತಂದು ಬರ ನಿವಾರಣಾ ಕಾಮಗಾರಿಗಳು, ರೈತರಿಗೆ ನೆರವು ನೀಡುವ ಕಾಮಗಾರಿಗಳು ಹಾಗೂ ಕೃಷಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಅವಕಾಶ ನೀಡಿ ರೈತರ ಸಂಕಷ್ಟ ನಿವಾರಣೆಗಾಗಿ ವ್ಯವಸಾಯದ ಅಭಿವೃದ್ಧಿ, ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸರ್ಕಾರವು ಯೋಜನೆಯನ್ನು ರೂಪಿಸಿದೆ.

ಅವುಗಳಲ್ಲಿ ಮುಖ್ಯವಾದಂತಹ ವ್ಯಕ್ತಿಗತ ಕಾಮಗಾರಿಗಳಾದ ರೈತರ ಭೂ ಅಭಿವೃದ್ಧಿ, ತೋಟಗಾರಿಕೆ ಅಭಿವೃದ್ಧಿ, ಕೃಷಿಹೊಂಡ, ಎರೆಹುಳು ಗೊಬ್ಬರದ ಘಟಕ, ಕುರಿ/ದನದ ಕೊಟ್ಟಿಗೆ, ಬದು ನಿರ್ಮಾಣ ಹಾಗೂ ಕೃಷಿಕಣ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ, ಕೊಳವೆ ಬಾವಿ ಮರುಪೂರಣ ಘಟಕ, ಕೆರೆ ಹೂಳೆತ್ತುವುದು, ನಮ್ಮಹೊಲ ನಮ್ಮದಾರಿ, ಗ್ರಾಮಗಳ ಒಳಗೆ ನೈರ್ಮಲ್ಯಕ್ಕಾಗಿ ಆರೋಗ್ಯಕ್ಕಾಗಿ ಒಳಚರಂಡಿ ಪುನರ್ ನಿರ್ಮಾಣ ಇತ್ಯಾದಿ ಹಲವಾರು ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಜಾರಿಗೆ ತರಲಾಗಿದೆ.

ಇದರಿಂದಾಗಿ ಜಾನುವಾರುಗಳು ಸುಲಭವಾಗಿ ನೀರನ್ನು ಕುಡಿಯಲು ಅನುಕೂಲವಾಗುತ್ತದೆ. ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿಗೆ ಗ್ರಾಮೀಣ ಜನರ ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂಪಿಸಿರುವ ಕೊಳವೆ ಮಾರ್ಗದಿಂದ ಸಂಪರ್ಕ ಕಲ್ಪಿಸಿ ತೊಟ್ಟಿಯಲ್ಲಿ ಸದಾ ನೀರಿರುವಂತೆ ನೋಡಿಕೊಳ್ಳಲಾಗುತ್ತದೆ ಹಾಗೂ ವಾರದಲ್ಲಿ 2 ಬಾರಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಸಿಬ್ಬಂದಿಯಿಂದ ಸ್ವಚ್ಛಗೊಳಿಸಲಾಗುತ್ತಿದೆ. ಈ ರೀತಿ ಕುಡಿಯುವ ನೀರಿನ ತೊಟ್ಟಿಯನ್ನು ಸ್ವಚ್ಛವಾಗಿಟ್ಟು, ಜಾನುವಾರುಗಳಿಗೆ ಉತ್ತಮವಾದ ನೀರನ್ನು ಗ್ರಾಮದ ಮುಖ್ಯ ಭಾಗಗಳಲ್ಲಿ ಸಿಗುವಂತೆ ವ್ಯವಸ್ಥೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯಡಿ ಮಾಡಲಾಗಿದೆ.

ಸಾರ್ವಜನಿಕರು ಸಹ ಕುಡಿಯುವ ನೀರಿನ ತೊಟ್ಟಿ ನಿರ್ಮಾಣದ ಬಗ್ಗೆ ಹರ್ಷ ವ್ಯಕ್ತಪಡಿಸಿರುತ್ತಾರೆ ಕಾರಣ ಈ ತೊಟ್ಟಿಗಳು ರೈತರಿಗೆ ಉಪಯೋಗವಾಗಿ ಜಾನುವಾರುಗಳಿಗೆ ಬೇಸಿಗೆಯಲ್ಲಿ ದಣಿವನ್ನು ನಿವಾರಿಸುವ ಸಂಜೀವಿನಿ ತೊಟ್ಟಿಗಳಾಗಿ ಕಾರ್ಯನಿರ್ವಹಿಸುತ್ತಿವೆ



ಈ ಕಾರ್ಯಕ್ರಮವನ್ನು ಜಾರಿಗೆ ತಂದ ಗ್ರಾಮೀಣಾಭಿವೃದ್ಧಿ ಇಲಾಖೆಯು ನಿಜಕ್ಕೂ ರೈತರ ಕಾಳಜಿಗಾಗಿ ಕೆಲಸ ನೀಡುತ್ತಿದ್ದು, ರೈತರಿಂದ ಪ್ರಶಂಸೆಗೆ ಒಳಗಾಗುತ್ತಿರುವುದು ಹರ್ಷದಾಯಕ. ■

ಸಾಧನೆ



**ಕೆ.ಎನ್.ಮಹಾಂತೇಶ್**

ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯತಿ
ಹೊಸದುರ್ಗ, ಚಿತ್ರದುರ್ಗ ಜಿಲ್ಲೆ,
ಮೊ: 9480861120

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರಿಗೆ ಸ್ವತಃ ಕೃಷಿ ಹೊಂಡಗಳ ಮಹತ್ವದ ಬಗ್ಗೆ ಅರಿವು ಮೂಡಿಸಿರುವ ಕುರಿತು...**

# ಅಂತರ್ಜಲ ಮರುಪೂರಣದಿಂದ ಬರದ ನಾಡಿನಲ್ಲೂ ನೀರಿಗಿಲ್ಲ ತೊಂದರೆ

## ಶಾಸಕ ಬಿ.ಜಿ ಗೋವಿಂದಪ್ಪರವರ ದೂರದೃಷ್ಟಿಯ ಫಲ

ರಾಜ್ಯದಲ್ಲಿ ಎರಡು ವರ್ಷಗಳಿಂದ ಕುಡಿಯುವ ನೀರಿಗೆ ಹಾಹಾಕಾರವಿದ್ದು ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಆದರೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಜನರಿಗೆ ನೀರಿನ ತೊಂದರೆ ಇಲ್ಲದೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.

ರಾಜ್ಯದ ಹಿಂದುಳಿದ, ಬರಪೀಡಿತ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದಾದ ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದವರಾಗಿದ್ದು, ಜನಸೇವಕರಾಗಿ ಗ್ರಾಮೀಣ ಜನರ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ರಸ್ತೆ, ಚರಂಡಿ, ಸೇತುವೆ ಕಾಮಗಾರಿಗಳನ್ನು ಜನರ ನಿರೀಕ್ಷೆ ಮೀರಿ ಕೆಲಸಕಾರ್ಯಗಳನ್ನು ನಿರ್ವಹಿಸಿದ್ದು ಅಭಿವೃದ್ಧಿ ಚಿಂತನಾಕಾರರಿಗೆ ಮಾರ್ಗದರ್ಶಿಯಾಗಿದ್ದಾರೆ.



ಶಾಸಕರಾಗುವ ಮುನ್ನ ಇವರು ಮೊದಲ ಬಾರಿಗೆ 1987ರಲ್ಲಿ ಪ್ರಥಮವಾಗಿ ಬೆಲಗೂರು ಮಂಡಲ ಪಂಚಾಯಿತಿಯ ಪ್ರಧಾನರಾಗಿ ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸಿ, ತದನಂತರ ಶ್ರೀರಾಂಪುರ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿ ಗ್ರಾಮೀಣಾಭಿವೃದ್ಧಿ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ತದನಂತರ 1999ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಈವರೆಗೆ 3 ಬಾರಿ ಶಾಸಕರಾಗಿ ಆಯ್ಕೆಯಾಗಿರುತ್ತಾರೆ.

### ಅಂತರ್ಜಲ ಅಭಿವೃದ್ಧಿ ಮತ್ತು ಸಣ್ಣ ನೀರಾವರಿ ಕಾಮಗಾರಿಗಳಿಗೆ ಭಗೀರಥ ಯತ್ನ.:

ಇವರು ತಾಲ್ಲೂಕಿನಲ್ಲಿ ಹೆಚ್ಚಿನದಾಗಿ ಅಂತರ್ಜಲ ಅಭಿವೃದ್ಧಿಗೆ ಪೂರಕವಾಗಿ ಸಣ್ಣ ನೀರಾವರಿ ಇಲಾಖೆಯ ಮೂಲಕ ತಾಲ್ಲೂಕಿನಾದ್ಯಂತ ಸುಮಾರು ರೂ.70.00ಕೋಟಿ ಅಂದಾಜು ಮೊತ್ತದ ಚೆಕ್ ಡ್ಯಾಂ, ಗೋಕಟ್ಟೆ, ಬ್ಯಾರೇಜ್ ಕಂ ಬ್ರಿಡ್ಜ್, ಕೆರೆಗಳ ಅಭಿವೃದ್ಧಿಯಂತಹ ಸುಮಾರು 500ಕ್ಕೂ ಹೆಚ್ಚಿನ ಕಾಮಗಾರಿಗಳನ್ನು ಕೈಗೊಂಡು ಗ್ರಾಮೀಣ ಭಾಗದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಂಡಿರುತ್ತಾರೆ. ಅಷ್ಟೇ ಅಲ್ಲದೇ ಹೊಸದುರ್ಗ ತಾಲ್ಲೂಕು ಹೊರತುಪಡಿಸಿ ನೆರೆಯ ತಾಲ್ಲೂಕುಗಳಾದ ಕಡೂರು ಹಾಗೂ ಹಿರಿಯೂರು



ಬಲ್ಲಾಳಸಮುದ್ರ ಬಳಿ ವೇದಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ. ಅಂದಾಜು ಮೊತ್ತ: 6.00 ಕೋಟಿ

ತಾಲ್ಲೂಕುಗಳಿಗೆ ಉಪಯೋಗವಾಗುವಂತೆ ಸುಮಾರು ರೂ. 12,500 ಕೋಟಿಯ ವೆಚ್ಚದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಅನುಮೋದನೆ ಮಾಡಿಸಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ರೂ. 696 ಕೋಟಿ ಅಂದಾಜು ಮೊತ್ತದಲ್ಲಿ ಚಾನಲ್ ಮತ್ತು ಸುರಂಗ ಮಾರ್ಗ ಕಾಮಗಾರಿಯ ಪ್ರಗತಿಗೆ ಒತ್ತು ನೀಡಿರುತ್ತಾರೆ.

ಅಲ್ಲದೇ ಭದ್ರಾ ಮೇಲ್ದಂಡೆ ಯೋಜನೆಯಡಿ ತಾಲ್ಲೂಕಿನ ಕೊರಟಿಕೆರೆ/ಆಲಘಟ್ಟ ಗ್ರಾಮದ ಬಳಿ ರೂ. 6.30 ಕೋಟಿ ಹಾಗೂ ಬಲ್ಲಾಳಸಮುದ್ರ ಗ್ರಾಮದ ಬಳಿ ವೇದಾವತಿ ನದಿಗೆ ರೂ. 6.00 ಕೋಟಿ ವೆಚ್ಚದಲ್ಲಿ ಬ್ಯಾರೇಜ್ ಕಂ ಬ್ರಿಡ್ಜ್‌ಗಳನ್ನು ಈಗಾಗಲೇ ನಿರ್ಮಿಸಿದ್ದು ಇತ್ತೀಚೆಗೆ ಸಾರ್ವಜನಿಕರಿಗೆ ಸಮರ್ಪಣೆ ಮಾಡಲಾಗಿದೆ ಹಾಗೂ ಕಾರೇಹಳ್ಳಿ ಗ್ರಾಮದ ಹರಿಹರೇಶ್ವರ ದೇವಸ್ಥಾನದ ಬಳಿ ರೂ. 9.00 ಕೋಟಿ ಅಂದಾಜು ಮೊತ್ತದಲ್ಲಿ ಬ್ಯಾರೇಜ್ ಕಂ ಬ್ರಿಡ್ಜ್ ಕಾಮಗಾರಿ ಮಂಜೂರಾಗಿದ್ದು ಪ್ರಾರಂಭಿಕ ಪ್ರಗತಿಯ ಹಂತದಲ್ಲಿರುತ್ತದೆ.

ಶಾಸಕರು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರಿಗೆ ಸ್ವತಃ ಕೃಷಿ ಹೊಂಡಗಳ ಮಹತ್ವದ ಬಗ್ಗೆ ಅರಿವು ಮೂಡಿಸಿ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಕೃಷಿ ಹೊಂಡ ಕಾಮಗಾರಿಗಳನ್ನು ಕೈಗೊಂಡಿದ್ದು, ನೀರು ಸಂಗ್ರಹವಾಗಿ ಅಂತರ್ಜಲ ಅಭಿವೃದ್ಧಿಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಂಡಿರುತ್ತಾರೆ.

## ವಿದ್ಯುತ್ ಸರಬರಾಜಿಗೆ ಇನ್ನಿಲ್ಲ ತೊಂದರೆ:

ಇವರು ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ವ್ಯತ್ಯಯದಿಂದಾಗಿ ರೈತರಿಗೆ ಆಗುತ್ತಿದ್ದ ತೊಂದರೆಗಳನ್ನು ನಿವಾರಿಸಲು ಮಾಡದಕೆರೆ ಬಳಿ ರೂ.8.51ಕೋಟಿ, ಹಾಗೂ ನೀರುಗುಂದ ಗೇಟ್‌ನಲ್ಲಿ ರೂ.6.62ಕೋಟಿ ಮೊತ್ತದಲ್ಲಿ ಹೊಸದಾಗಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ಮಂಜೂರು ಮಾಡಿಸಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಇದಲ್ಲದೆ ಮಧುರೆ ಬಳಿ ರೂ. 100.00 ಕೋಟಿ ಮೊತ್ತದಲ್ಲಿ ವಿದ್ಯುತ್ ಸ್ವೀಕರಣ ಕೇಂದ್ರವನ್ನು ಮಂಜೂರು ಮಾಡಿಸಲಾಗಿದೆ ಹಾಗೂ ನಿರಂತರ ವಿದ್ಯುತ್ ಯೋಜನೆಯಡಿ ಸುಮಾರು ರೂ.15.00ಕೋಟಿ ಅಂದಾಜು ಮೊತ್ತದಲ್ಲಿ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರು ಹಾಗೂ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ವಿದ್ಯುತ್ ಸರಬರಾಜು ಕಾಮಗಾರಿ ಮುಕ್ತಾಯ ಹಂತದಲ್ಲಿದೆ.

## ತಾಲ್ಲೂಕಿಗೆ ಕುಡಿಯಲು ನೀರು ಉಣಿಸಲು ಸತತ ಯತ್ನ:

ಇವರು ಹೊಸದುರ್ಗ ಪಟ್ಟಣ ಹಾಗೂ ತಾಲ್ಲೂಕಿನ 346 ಜನ ವಸತಿಗಳಿಗೆ ಭದ್ರಾ ಜಲಾಶಯದಿಂದ ರೂ.350.00ಕೋಟಿ ಅಂದಾಜು ಮೊತ್ತದಲ್ಲಿ ಸುಮಾರು 85 ಕೀ.ಮೀ ಪೈಪ್‌ಲೈನ್ ಅಳವಡಿಸುವ ಮೂಲಕ ಶುದ್ಧ





**ಹೊಸದುರ್ಗ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಕೃಷಿಹೊಂಡಗಳ ನೋಟ.**

ಕುಡಿಯುವ ನೀರು ಸರಬರಾಜಿಗೆ ಪ್ರಸ್ತಾವನೆ ಸಲ್ಲಿಸಿದ್ದು ಮಂಜೂರಾತಿ ಹಂತದಲ್ಲಿದೆ.

## ಶುದ್ಧ ಕುಡಿಯುವ ನೀರಿನ ಘಟಕ ಸ್ಥಾವರಗಳ ಸ್ಥಾಪನೆ:

ತಾಲ್ಲೂಕಿನ ಸುಮಾರು 95 ಜನ ವಸತಿ ಪ್ರದೇಶಗಳಿಗೆ ಸರ್ಕಾರದಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಂಜೂರಾಗಿ ಇದಾಗಲೇ ಸಾರ್ವಜನಿಕರಿಗೆ ಶುದ್ಧ ನೀರು ಪೂರೈಕೆ ಮಾಡುತ್ತಿದ್ದು ಉಳಿದ ಜನವಸತಿಗಳಿಗೂ ಸಹ ಹಂತ ಹಂತವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಂಜೂರು ಮಾಡಿಸಲು ಮಾನ್ಯ ಶಾಸಕರು ಕ್ರಮವಹಿಸಿರುತ್ತಾರೆ.

## ಬರ ನಿರ್ವಹಣೆಗೆ ನಿರಂತರ ಗ್ರಾಮ ಪ್ರವಾಸ:

ಚಿತ್ರದುರ್ಗ ಜಿಲ್ಲೆಯನ್ನು ಬರಪೀಡಿತ ಪ್ರದೇಶವನ್ನಾಗಿ ಸರ್ಕಾರ ಘೋಷಿಸಿದ್ದು ಹೊಸದುರ್ಗ ತಾಲ್ಲೂಕಿನಲ್ಲಿ ಕಳೆದ 2 ತಿಂಗಳಿಂದ ಮಾನ್ಯ ಶಾಸಕರು ತಾಲ್ಲೂಕಿನ ಅನುಷ್ಠಾನ ಅಧಿಕಾರಿಗಳೊಂದಿಗೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಹಲವು ಬಾರಿ ಪ್ರವಾಸ ಮಾಡಿದ್ದಾರೆ. ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ನೀರು ಮತ್ತು ಮೇವಿನ ಸಮಸ್ಯೆಗಳ ಕುರಿತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಇದಕ್ಕಾಗಿಯೇ ಟಾಸ್ಕ್‌ಫೋರ್ಸ್ ಮತ್ತು ಇತರೆ ಯೋಜನೆಗಳ ಅನುದಾನದಲ್ಲಿ ಕೊಳವೆಬಾವಿಗಳನ್ನು ಕೂಡ ಕೊರೆಸಿ, ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಪೈಪ್‌ಲೈನ್ ಮಾಡಿಸುವ ಮೂಲಕ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಪಣ ತೊಟ್ಟಿದ್ದಾರೆ.

ಇಂದಿಗೂ ಕೂಡ ತಾಲ್ಲೂಕಿನ ಯಾವುದೇ ಗ್ರಾಮಕ್ಕೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿರುವುದಿಲ್ಲ. ಇದಕ್ಕೆ ಕಾರಣ ಮಾನ್ಯ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಂಡಿರುವ ಜಲಸಂರಕ್ಷಣೆ ಹಾಗೂ ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳು ಮತ್ತು ಮಾನ್ಯ ಶಾಸಕರ ಕಾಳಜಿ ಹಾಗೂ ಅಭಿವೃದ್ಧಿ ಪೂರಕ ಚಿಂತನೆ ನಿಜಕ್ಕೂ ಶ್ಲಾಘನೀಯ. ■





**ಹೊಸದುರ್ಗ ತಾಲ್ಲೂಕಿನ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಜಾನುವಾರುಗಳಿಗೆ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ ಕಾಮಗಾರಿ ಹಾಗೂ ಕೃಷಿಹೊಂಡದ ನೋಟ.**

# 'ಮಕ್ಕಳ ಪೋಸ್ಟ್‌ಕಾರ್ಡ್ ಅಭಿಯಾನ ಗಳಿಸಿತು ಕೊಪ್ಪಳಕೆ ಸನ್ಮಾನ'

ಯಶೋಗಾಥೆ




ಶ್ರೀಮತಿ ಬಸಮ್ಮ ಹುಡೇದ

ಸ್ಯಾನಿಟೇಶನ್ ಹೈಜಿನ್ ಸಮಾಲೋಚಕರು
ಸ್ವಚ್ಛ ಭಾರತ ಮಿಷನ್ ಜಿಲ್ಲಾ ಘಟಕ
ಜಿಲ್ಲಾ ಪಂಚಾಯತಿ, ಕೊಪ್ಪಳ


**ಸ್ವಚ್ಛ ಭಾರತ ಮಿಷನ್(ಗ್ರಾಮೀಣ) ಯೋಜನೆಯಡಿ ಬಯಲು ಬರ್ಹಿದೆಸೆ ಮುಕ್ತವಾಗಲು ಶಾಲಾ ಮಕ್ಕಳ ಮೂಲಕ ವಿನೂತನ ಚಟುವಟಿಕೆಗಳ ಹಮ್ಮಿಕೊಂಡ ಯಶೋಗಾಥೆ**

## ವೈಯಕ್ತಿಕ ಶೌಚಾಲಯ ಇಲ್ಲದ ಶಾಲಾ ಮಕ್ಕಳಿಂದ ಪಾಲಕರಿಗೆ ಪತ್ರ:

ಕೊಪ್ಪಳ ಜಿಲ್ಲೆಯಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಒಂದು ಹೊಸ ಕ್ರಾಂತಿಯನ್ನು ಪ್ರಾರಂಭಿಸಲಾಗಿದೆ. ಈ ಮೊದಲು ಜಿಲ್ಲಾ ಪಂಚಾಯತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತಿ ಅಧಿಕಾರಿಗಳು ತಮ್ಮದೇ ಆದ ರೀತಿಯಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಸೀಟಿ ಊದುವ ಮೂಲಕ, ಶೌಚಾಲಯ ಇಲ್ಲದ ಫಲಾನುಭವಿಗಳು ಬಯಲಿಗೆ ಹೋಗುವವರನ್ನು ತಡೆದು ಕಾಲಿಗೆ ಬೀಳುವ ಮೂಲಕ, ಶೌಚಾಲಯ ನಿರ್ಮಿಸಲು ಹಾಗೂ ಶೌಚಾಲಯ ಬಳಕೆ ಮಾಡುವಂತಹ ಅರಿವು ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುಖೇನ ಕ್ರಾಂತಿಯನ್ನೇ ಪ್ರಾರಂಭಿಸಿದ್ದರು.

ಅದೇ ರೀತಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಶೌಚಾಲಯ ನಿರ್ಮಿಸಲು ಏನಾದರೂ ಹೊಸಪ್ರಯೋಗ ಮಾಡಬೇಕು ಹಾಗೂ ಈ ಕುರಿತು ಮಕ್ಕಳಲ್ಲಿ ಅರಿವು ಮೂಡಿಸಬೇಕೆಂದು ನಿರ್ಧರಿಸುತ್ತಾರೆ. ಇದರಂತೆ ಶಿಕ್ಷಣ ಇಲಾಖೆಯ ವತಿಯಿಮದ ಜಿಲ್ಲೆಯಲ್ಲಿ ಒಟ್ಟು ಇರುವ ವಿದ್ಯಾರ್ಥಿಗಳ ಸಂಖ್ಯೆ 1,26,804 ಎಂಬ ವರದಿ ಪಡೆದು ಯಾವ ವಿದ್ಯಾರ್ಥಿಯ ಮನೆಯಲ್ಲಿ ಶೌಚಾಲಯ ಇಲ್ಲವೋ ಆ ವಿದ್ಯಾರ್ಥಿಗಳು ತಮ್ಮ ಪಾಲಕರಿಗೆ ಪತ್ರ ಬರೆದು ಶೌಚಾಲಯ ಕಟ್ಟಿಸಿಕೊಳ್ಳಲು ಪ್ರೇರೇಪಣೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ಇದರಂತೆ ಕೊಪ್ಪಳ, ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗಾ



**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಕ್ಕಳಿಗೆ ಪೋಸ್ಟ್ ಕಾರ್ಡಗಳನ್ನು ವಿತರಿಸಲು ಪತ್ರ ಚಳುವಳಿಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪತ್ರಗಳನ್ನು ವಿತರಿಸುತ್ತಿರುವುದು.**

ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಉಪನಿರ್ದೇಶಕರನ್ನು ಸಭೆ ಕರೆದು ಅವರಿಗೆ ಪೋಸ್ಟ್‌ಕಾರ್ಡ್‌ಗಳನ್ನು ವಿತರಿಸಿ ಮಕ್ಕಳ ಮುಖಾಂತರ ಪತ್ರ ಬರೆಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ



ಅದರಂತೆ ಶೌಚಾಲಯ ನಿರ್ಮಿಸುವಲ್ಲಿ ವಿನೂತನ ಹೆಜ್ಜೆಯನ್ನು ನಿಟ್ಟಿದ್ದಾರೆ.

## ಪೋಸ್ಟ್‌ಕಾರ್ಡ್ ಅಭಿಯಾನಕ್ಕೆ ಸಾಥ್ ಕೊಟ್ಟ ಶಾಲಾ ಮಕ್ಕಳು:

ಈ ಪೋಸ್ಟ್‌ಕಾರ್ಡ್ ಬಳಸಿ ತಮ್ಮ ಮನೆಯಲ್ಲಿ ವೈಯಕ್ತಿಕ ಶೌಚಾಲಯ ಇಲ್ಲದ ಮಕ್ಕಳು ತಮ್ಮ ತಂದೆ ತಾಯಿಗೆ ತಾವು ಪತ್ರ ಬರೆಯುವದು. ಪೋಸ್ಟ್‌ಕಾರ್ಡ್‌ಗಳು ಪಾಲಕರಿಗೆ ಒಂದು ವಾರದೊಳಗಾಗಿ ತಲುಪುವಂತೆ ನೋಡಿಕೊಳ್ಳುವದು ಹಾಗೂ ಜನವರಿ 16, 2017ರಿಂದ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಮಕ್ಕಳಿಗೆ ಶೌಚಾಲಯ ನಿರ್ಮಾಣ ಮಾಡಿದ ಸೂಚಕವಾಗಿ ಕ್ಯಾಪ್, ಬ್ಯಾಡ್ಜ್ ಮತ್ತು ಬ್ಯಾಂಡ್‌ಗಳನ್ನು ನೀಡಿ, ಮಕ್ಕಳು ಅದನ್ನು ಪ್ರತಿ ದಿನ ತಪ್ಪದೇ ಶಾಲೆಗೆ ಹಾಕಿಕೊಂಡು ಧರಿಸಿಕೊಂಡು ಬರುವಂತೆ ನೋಡಿಕೊಳ್ಳಬೇಕು. ಎಂದು ಆದೇಶ ನೀಡುವುದರೊಂದಿಗೆ ಎಲ್ಲರೂ ಶೌಚಾಲಯ ಕಟ್ಟಿಸಿಕೊಳ್ಳಲು ಯೋಜನೆ ರೂಪಿಸಿದರು.

## ಶಾಲಾ ಮಕ್ಕಳು ಮನೆಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಕೊಡುವಂತೆ ತಮ್ಮ ಪಾಲಕರಿಗೆ ಪತ್ರ ಬರೆದಿದ್ದು.

ಈ ಕಾರ್ಯ ಯೋಜನೆಯಂತೆ ಶಾಲಾ ಮಕ್ಕಳನ್ನು ಪ್ರೇರೆಪಿಸುವುದು ಮತ್ತು ಸ್ವಚ್ಚತೆಗೆ ಆದ್ಯತೆ ನೀಡಲು ಶಿಕ್ಷಕರು ತಮ್ಮ ವರ್ಗದ ಮಕ್ಕಳಿಗೆ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವಂತೆ ಪ್ರತಿ ದಿನ ತಿಳುವಳಿಕೆ ನೀಡಿ, ಪಾಲಕರ ಮನವೊಲಿಸಿ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಸಿಕೊಳ್ಳುವಂತೆ ನೋಡಿಕೊಳ್ಳಲು ಸೂಚಿಸಲಾಯಿತು. ಮುಖ್ಯೋಪಾಧ್ಯಾಯರು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು (ಸಿ.ಆರ್.ಪಿ) ಇದರ ಮೇಲುಸ್ತುವಾರಿ ವಹಿಸಿಬೇಕು. 15 ದಿನಗಳಿಗೊಮ್ಮೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ತಾಲೂಕ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಲಕಾಲಕ್ಕೆ ಪರಿಶೀಲಿಸುತ್ತಾರೆ. ಪ್ರತಿ 15 ದಿನಕ್ಕೊಮ್ಮೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತದೆ.

ಇದಲ್ಲದೆ ಜನವರಿ 16, 2017 ರಿಂದ ಶಾಲಾ ಮಕ್ಕಳಿಗೆ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವಂತೆ ಮನವೊಲಿಸಿ ಶೌಚಾಲಯ ನಿರ್ಮಾಣ ಮಾಡಿ ಶಾಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಶಾಲೆ ಎಂದು ಘೋಷಣೆ ಮಾಡಿದ ಶಾಲೆಗೆ ವಿಶೇಷವಾದ ಕೊಡುಗೆಯಾಗಿ (ಸ್ಮಾರ್ಟ್ ಬೋರ್ಡ್, ಕಂಪ್ಯೂಟರ್ ಇತ್ಯಾದಿ)ಶಾಲೆಗೆ ಅವಶ್ಯವಿರುವ ಸಲಕರಣೆಗಳನ್ನು ವಿತರಿಸಲು ಕ್ರಮವಹಿಸಲಾಯಿತು. ಮುಂದುವರೆದು ಶಾಲಾ ಸಿಬ್ಬಂದಿಗಳನ್ನು ಗೌರವಿಸುವುದು



**ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿರವರು ಶಾಲಾ ಮಕ್ಕಳಿಗೆ ಕ್ಯಾಪ್,ಬ್ಯಾಡ್ಜ್ ಮತ್ತು ಬ್ಯಾಂಡ್‌ಗಳನ್ನು ಬಿಡೆಗಡೆ ಮಾಡಿ ಶೌಚಾಲಯಗಳನ್ನು ನಿರ್ಮಿಸಲು ಪ್ರೇರೇಪಿಸುತ್ತಿರುವುದು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಸ್ಥಿತರಿರುವುದು.**

ಹಾಗೂ ಅವರಿಗೆ ಬಹುಮಾನ ವಿತರಣೆ ಮಾಡುವುದು. ಪ್ರತಿಯೊಂದು ಶಾಲೆಯಿಂದ ಶೌಚಾಲಯ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವ ಒಬ್ಬ ಶಿಕ್ಷಕರನ್ನು ಸ್ವಚ್ಛತಾ ಪ್ರೇರಕರು ಎಂದು ಗುರುತಿಸಿ, ಶಾಲಾ ಮಕ್ಕಳು ತಮ್ಮ ತಮ್ಮ ಪಾಲಕರಿಗೆ ಪತ್ರ ಬರೆಸಿ ಶಾಲಾ ಮಕ್ಕಳ ಮೂಲಕ ಪತ್ರಗಳು ಪಾಲಕರನ್ನು ತಲುಪಿದ್ದು ಕೆಲವು ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಪ್ರಗತಿಯಲ್ಲಿರುವುದು ತಿಳಿದು ಬಂದಿದೆ. ಹಾಗೆಯೇ ಕೆಲವು ಶೌಚಾಲಯಗಳು ಸಹ ಈಗಾಗಲೇ ಪೂರ್ಣಗೊಂಡಿರುವುದು ಕೂಡ ತಿಳಿದು ಬಂದಿದೆ.

ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿರವರು ಶಾಲಾ ಮಕ್ಕಳಿಗೆ ಕ್ಯಾಪ್,ಬ್ಯಾಡ್ಜ್ ಮತ್ತು ಬ್ಯಾಂಡ್‌ಗಳನ್ನು ಬಿಡುಗಡೆ ಮಾಡಿ ಶೌಚಾಲಯಗಳನ್ನು ನಿರ್ಮಿಸಲು ಪ್ರೇರೇಪಿಸುತ್ತಿರುವುದು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಸ್ಥಿತರಿರುವುದು.

**ಶಾಲಾ ಮಕ್ಕಳು ತಮ್ಮ ಮನೆಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡುತ್ತಿರುವುದು.**

ಈಗಾಗಲೇ ಕೊಪ್ಪಳ ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳಿಂದ ಶಾಲಾ ಮಕ್ಕಳ ಮೂಲಕ 648 ಶೌಚಾಲಗಳನ್ನು ನಿರ್ಮಾಣ ಮಾಡಲಾಗಿದೆ.



ಜನವರಿ–26,2017 ರ ನಂತರ ನಿರ್ಮಿಸಿಕೊಂಡ ಮಕ್ಕಳಿಗೆ ದಿನಾಂಕ:23.03.2017 ರಂದು ಗ್ರಾಮ ಪಂಚಾಯತಿ ಹಾಗೂ ಶಾಲಾ ಹಂತದಲ್ಲಿ ಮಕ್ಕಳಿಗೆ ಮೊದಲಿಗೆ ಕ್ಯಾಪ್ ಹಾಗೂ ತದನಂತರ ಬ್ಯಾಂಡ್ ಮತ್ತು ಬ್ಯಾಡ್ಜಗಳನ್ನು ನೀಡುವ ಉದ್ದೇಶ ಹೊಂದಲಾಗಿದೆ.

ಗ್ರಾಮೀಣ ಭಾಗದಲ್ಲಿ ಶಾಲಾ ಮಕ್ಕಳ ಮೂಲಕ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿನೂತನ ಐಇಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಾಗೂ ಒಂದು ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತ ಮಾಡಲು ಕೇವಲ ಒಂದು ಸರ್ಕಾರಿ ಯೋಜನೆಯನ್ನು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮಾತ್ರ ಸಾಧ್ಯವಿಲ್ಲ. ಭಾವಿ ಪ್ರಜೆಗಳಾದ ಶಾಲಾ ಮಕ್ಕಳನ್ನು ಸದರಿ ಯೋಜನೆಯಲ್ಲಿ ತೊಡಗಿಸಿಕೊಂಡು ಪ್ರಗತಿ ಸಾಧಿಸುತ್ತಿರುವುದು ಹೆಮ್ಮೆಯ ವಿಷಯ. ■



**ಮಕ್ಕಳಿಗೆ ಕ್ಯಾಪ್ ವಿತರಿಸುವ ಸಮಾರಂಭದ ಚಿತ್ರಣ.**

ಯಶೋಗಾಥೆ

# ನಗದು ರಹಿತ ವ್ಯವಹಾರದತ್ತ ಕೋಟತಟ್ಟು ಗ್ರಾಮ ಪಂಚಾಯತಿ




ವಿವೇಕ್ ಅಮೀನ್

ಮೊ: 9008649069


ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕಿನ ಕೋಟತಟ್ಟು ಗ್ರಾಮ ಪಂಚಾಯತಿ ಗಾಂಧಿ ಗ್ರಾಮ ಪುರಸ್ಕಾರ, ಉಡುಪಿ– ದಕ್ಷಿಣ ಕನ್ನಡ ಪಂಚಾಯತಿ ಪ್ರತಿನಿಧಿಗಳ ಕ್ರೀಡಾ ಸಾಂಸ್ಕೃತಿಕ ಕಾರ್ಯಕ್ರಮ "ಹೊಳಪು", ಪಂಚಾಯತಿ ಹಬ್ಬ, ಡಾ. ಶಿವರಾಮ ಕಾರಂತ ಹಬ್ಬ ಸೇರಿದಂತೆ ಹಲವು ವಿಶಿಷ್ಟ ಕಾರ್ಯಕ್ರಮಗಳ ಆಯೋಜನೆಯೊಂದಿಗೆ, ರಾಜ್ಯದಲ್ಲಿ ಗುರುತಿಸಿಕೊಂಡಿದೆ. ಅದಕ್ಕೆ ಹೊಸದಾಗಿ ಸೇರ್ಪಡೆ "ನಗದು ರಹಿತ – ಜನರ ಹಿತ" ಜನಸಹಭಾಗಿತ್ವದೊಂದಿಗೆ ಎನ್ನುವ ಹೊಸ ಪರಿಕಲ್ಪನೆ.

ಮಾನ್ಯ ಆರೋಗ್ಯ ಸಚಿವ ಶ್ರೀ ರಮೇಶ್ ಕುಮಾರ್‌ರವರಿಂದ ನಗದು ರಹಿತ ಗ್ರಾಮ ಪಂಚಾಯತಿ ಕಾರ್ಯಕ್ರಮ ಉದ್ಘಾಟನೆಯ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಗಾಪಂ ಅಧ್ಯಕ್ಷರು, ಜಿಪಂ ಅಧ್ಯಕ್ಷರು, ಸಿಇಓ, ಮತ್ತು ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರ ನಗದು ರಹಿತ ಆಡಳಿತಕ್ಕೆ ಮನ್ನಣೆ ನೀಡಲು ಪ್ರಾರಂಭಿಸಿದಾಗ, ಗ್ರಾಮ ಪಂಚಾಯತಿ ಮಟ್ಟದಲ್ಲಿ ನಗದು ರಹಿತ ಆಡಳಿತವನ್ನು ರಾಜ್ಯದಲ್ಲಿಯೇ ಮಾದರಿಯಾಗಿ ಅನುಷ್ಠಾನಕ್ಕೆ ತರಲು ಕೋಟತಟ್ಟು ಗ್ರಾಮ ಪಂಚಾಯತಿ ಪ್ರಯತ್ನ ಯಶಸ್ವಿಯಾಗಿದೆ. ಇದಲ್ಲದೆ ರಾಜ್ಯದಲ್ಲೇ ಮೊದಲ ನಗದು ರಹಿತ ಗ್ರಾಮ ಪಂಚಾಯತಿ ಎಂಬ ಹೆಗ್ಗಳಿಕೆ ಕೂಡ ಪಡೆದುಕೊಂಡಿದೆ.

ನಗದು ರಹಿತ ವ್ಯವಹಾರದಿಂದ ಭ್ರಷ್ಟಾಚಾರ, ಖೋಟಾನೋಟುಗಳನ್ನು ತಡೆಗಟ್ಟುವುದರೊಂದಿಗೆ ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ತೆರೆಯುವುದರಿಂದ, ಆರ್ಥಿಕ ಸೇರ್ಪಡೆಯೊಂದಿಗೆ ದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರ ನೀಡಬಹುದಾಗಿದೆ ಎನ್ನುವುದು ಗ್ರಾಮ ಪಂಚಾಯತಿಯ ಮುಖ್ಯ ಉದ್ದೇಶವಾಗಿತ್ತು.

ನಗದು ರಹಿತ ಗ್ರಾಮ ಪಂಚಾಯತಿ ಮಾಡುವಲ್ಲಿ ಸಾಕಷ್ಟು ಪೂರ್ವ ತಯಾರಿ ಹಾಗೂ ಬ್ಯಾಂಕ್‌ಗಳು ಮತ್ತು ಸಾರ್ವಜನಿಕರ ಸಹಭಾಗಿತ್ವ ಬಹುಮುಖ್ಯವಾದ ಪಾತ್ರವನ್ನು ವಹಿಸಿತ್ತು. ಈ ಸಂಧರ್ಭದಲ್ಲಿ ಕೆಲವೊಂದು ಪೂರ್ವ ತಯಾರಿಯ ಹಂತಗಳನ್ನು ಅನುಸರಿಸಲಾಯಿತು.

**ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳು, ಜಿಲ್ಲಾ ಲೀಡ್ ಬ್ಯಾಂಕ್ ಸಹಯೋಗದೊಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಬ್ಯಾಂಕಿಂಗ್ ಮತ್ತು ನಗದು ರಹಿತ ವ್ಯವಹಾರದ ಕುರಿತು ಕಾರ್ಯಾಗಾರ**

"ಕೋಟತಟ್ಟು ಗ್ರಾಮ ಪಂಚಾಯತಿ ಜಾರಿಗೆ ತಂದಿರುವ ನಗದು ರಹಿತ ವ್ಯವಹಾರ ಪಾರದರ್ಶಕ ಆಡಳಿತಕ್ಕೆ ನಿದರ್ಶನವಾಗಿದ್ದು, ಇತರೆ ಗ್ರಾಮದವರಿಗೂ ಸಹ ಇದು ಮಾದರಿಯಾಗಿದೆ. ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವರೊಂದಿಗೆ ಚರ್ಚಿಸಿ ಈ ಮಾದರಿಯನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಅಳವಡಿಸಿಕೊಳ್ಳುವ ಕುರಿತಂತೆ ಹಿರಿಯ ಅಧಿಕಾರಿಗಳ ತಂಡವನ್ನು ಇಲ್ಲಿಗೆ ಕಳುಹಿಸಿ, ವರದಿ ಪಡೆದು ರಾಜ್ಯದ ಎಲ್ಲಾ ಜಿಲ್ಲೆಗಳ ಕನಿಷ್ಠ 2 ಗ್ರಾಮ ಪಂಚಾಯತಿಗಳಲ್ಲಾದರೂ ನಗದು ರಹಿತ ವ್ಯವಹಾರವನ್ನು ಶೀಘ್ರದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.



ಶ್ರೀ ರಮೇಶ್ ಕುಮಾರ್
ಆರೋಗ್ಯ & ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರಕಾರ



# First cashless panchayat in K'taka launched

## Kottathatu GP To Be A Model For Other Panchayats

TIMES NEWS NETWORK

**Udupi:** Karnataka health minister KR Ramesh Kumar on Sunday launched the cashless system at Kottathatu gram panchayat (GP). It will be the first GP in the state to be declared entirely cashless. From paying their bills to filing applications for licences, arrangements have been made to encourage villagers to use digital modes of payment.

**GOING DIGITAL**

Kottathatu GP has a population of 5,523 people. The elected leaders of the GP – including the panchayat president – conducted a survey to find out the exact number of debit card holders within their purview. They found that, of a total of 1,032 families, 200 households did not have debit cards, while 80 did not have bank accounts. But, the members took steps to address the problem and as a consequence, all households within the GP limits now have debit cards, and can transact without cash.

"Kottathatu GP will be a model for other panchayats in the state. The elected representatives took the initiative in the endeavour, and that is admirable. I will talk to the minister for rural development and panchayat raj HK Patil, and request him to send officials here to file a report on the cashless system. Soon, each district will have two model GPs," Ramesh Kumar said.

The minister said that the public had to face many hardships as a consequence of demonetisation. "Though a few people who had hidden money were caught, people had to struggle a lot. What is the rationale behind introducing the Rs 2,000 note? I am not questioning the government, but I am anxious," Ramesh Kumar added.

He said that Prime Minister Narendra Modi should bring back the black money hidden by politicians, and also create an environment wherein even the poor get an equal chance to win elections.

**SMART TRANSACTION:** Karnataka health minister KR Ramesh Kumar launched the cashless system at Kottathatu gram panchayat on Sunday

THE TIMES OF INDIA, MANGALURU

**ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ವರದಿ**

## 1. ಗ್ರಾಮದ ಸಮೀಕ್ಷೆ :

- ಸಮೀಕ್ಷೆಗಾಗಿ ವಾರ್ಡ್ ಸದಸ್ಯರ ನೇತೃತ್ವದಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ ಹಾಗೂ ಸ್ವಯಂ ಸೇವಕರನ್ನೊಳಗೊಂಡಂತೆ, ಪ್ರತಿ ವಾರ್ಡ್‌ಗೆ ಒಂದು ತಂಡ ರಚನೆ ಮಾಡಲಾಯಿತು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರತಿ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಲಾಗಿ ಬ್ಯಾಂಕ್ ಖಾತೆ ಹೊಂದಿರುವವರು – ಬ್ಯಾಂಕ್ ಖಾತೆ ಹೊಂದಿ ಎ.ಟಿ.ಎಂ./ ಡೆಬಿಟ್ ಕಾರ್ಡ್, ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್‌ನಂತಹ ಸೇವೆ ಹೊಂದಿಲ್ಲದವರು ಹಾಗೂ ಬ್ಯಾಂಕ್ ಖಾತೆ ಹೊಂದಿಲ್ಲದವರ ಮಾಹಿತಿಯನ್ನು ಸಂಗ್ರಹಿಸಲಾಯಿತು.

## 2. ಬ್ಯಾಂಕಿಂಗ್ ಮತ್ತು ನಗದು ರಹಿತ ವ್ಯವಹಾರದ ಮಾಹಿತಿ ಕಾರ್ಯಾಗಾರ :

- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶಾಖೆ ಹೊಂದಿರುವ ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳು, ಜಿಲ್ಲಾ ಲೀಡ್ ಬ್ಯಾಂಕ್ ಸಹಯೋಗದೊಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಬ್ಯಾಂಕಿಂಗ್ ಮತ್ತು ನಗದು ರಹಿತ ವ್ಯವಹಾರದ ಕುರಿತು ಕಾರ್ಯಾಗಾರ ಏರ್ಪಡಿಸುವುದರ ಮೂಲಕ ಪ್ರಯೋಜನಗಳ ಮಾಹಿತಿಯನ್ನು ನೀಡಲಾಯಿತು.
- ಕಾರ್ಯಾಗಾರದಲ್ಲಿ ವಿವಿಧ ರೀತಿಯ ಬ್ಯಾಂಕಿಂಗ್ ಸೌಲಭ್ಯಗಳು ಬ್ಯಾಂಕ್ ಖಾತೆ, ಎ.ಟಿ.ಎಂ.–ಡೆಬಿಟ್ ಕಾರ್ಡ್–ಕ್ರೆಡಿಟ್ ಕಾರ್ಡ್ ಸೌಲಭ್ಯಗಳು, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್ ಸೇವೆಗಳ ಮಾಹಿತಿಗಳು ಸೇರಿದಂತೆ ಅವುಗಳ ಕಾರ್ಯಾಚರಣೆ ಮತ್ತು ಸುರಕ್ಷತೆಯ ಅರಿವನ್ನು ಮೂಡಿಸಲಾಯಿತು.
- ನಗದು ರಹಿತ ವ್ಯವಸ್ಥೆ ಇದರ ಪ್ರಯೋಜನಗಳ ಮಾಹಿತಿ ಮತ್ತು ಬ್ಯಾಂಕಿಂಗ್ ಸೌಲಭ್ಯಗಳನ್ನು ಬಳಸಲು ಮನವಿ ಮಾಡಲಾಯಿತು ಹಾಗೂ ಗ್ರಾಮ ಪಂಚಾಯತಿಯನ್ನು ಭ್ರಷ್ಟಾಚಾರ ಮುಕ್ತಗೊಳಿಸಿ, ಸಂಪೂರ್ಣ ಪಾರದರ್ಶಕ ಆಡಳಿತದತ್ತ ಕೊಂಡೊಯ್ಯುವ ಉದ್ದೇಶವುಳ್ಳ ಕರಪತ್ರಗಳನ್ನು ಮುದ್ರಿಸಿ ವ್ಯಾಪಕ ಪ್ರಚಾರ ಮಾಡಲಾಯಿತು.

## 3. ಸಾಮೂಹಿಕ ಬ್ಯಾಂಕ್ ಖಾತೆ ತೆರೆಯುವುದು :

- ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ಎಲ್ಲಾ ಬ್ಯಾಂಕ್‌ಗಳು ಒಟ್ಟುಗೂಡಿಸಿ, ಬ್ಯಾಂಕ್ ಖಾತೆ ಹೊಂದಿಲ್ಲದವರಿಗೆ ಖಾತೆ ತೆರೆಯಲು ವ್ಯವಸ್ಥೆ ಕಲ್ಪಿಸಿ ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ತೆರೆಯಲು ಅನುವು ಮಾಡಿಕೊಡಲಾಯಿತು.
- ಈಗಾಗಲೇ ಬ್ಯಾಂಕ್ ಖಾತೆ ಹೊಂದಿರುವವರಿಗೆ ಎ.ಟಿ.ಎಂ., ರುಪೇಕಾರ್ಡ್ ನೀಡುವುದರೊಂದಿಗೆ ಅಗತ್ಯವಿರುವವರಿಗೆ ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್‌ನಂತಹ ಸೇವೆಗಳನ್ನು ಸಹ ಚಾಲನೆಗೊಳಿಸಲಾಯಿತು.

## 4. ಗ್ರಾಮ ಪಂಚಾಯತಿ ನಿರ್ಣಯ :

- ಕೋಟತಟ್ಟು ಗ್ರಾಮದ ಪ್ರತಿಯೊಬ್ಬರೂ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿರುವುದು, ಗ್ರಾಮ ಪಂಚಾಯತಿಯ ಎಲ್ಲಾ 1,032 ಕುಟುಂಬಗಳು, ಕುಟುಂಬಕ್ಕೊಂದು ಬ್ಯಾಂಕ್ ಖಾತೆ ಮತ್ತು ಎ.ಟಿ.ಎಂ./ ರುಪೇ ಕಾರ್ಡ್ ಸೌಲಭ್ಯ ಖಾತ್ರಿ ಪಡಿಸಿಕೊಂಡ ನಂತರ ಗ್ರಾಮ ಪಂಚಾಯತಿಯಲ್ಲಿನ ಎಲ್ಲಾ ರೀತಿಯ ತೆರಿಗೆ, ಶುಲ್ಕ, ದಂಡಗಳ ಪಾವತಿಯನ್ನು ನಗದುರಹಿತ ವಿಧಾನಗಳ ಮೂಲಕ ನಿರ್ವಹಿಸುವುದನ್ನು ಗ್ರಾಮ ಪಂಚಾಯತಿ ನಿರ್ಣಯದ ಮೂಲಕ ಕಡ್ಡಾಯಗೊಳಿಸಲಾಯಿತು.
- ಗ್ರಾಮ ಪಂಚಾಯತಿ ಕಛೇರಿಯಲ್ಲಿ ನಗದು ರಹಿತ ಪಾವತಿಗಾಗಿ ಪಿ.ಓ.ಎಸ್. ಯಂತ್ರ ಹಾಗೂ ಇತರ ಅಗತ್ಯ ಸೌಲಭ್ಯ ಕಲ್ಪಿಸುವುದು
- ಕೋಟತಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ರೀತಿಯ ಉದ್ಯಮ, ಅಂಗಡಿ, ಹೋಟೆಲ್‌ಗಳನ್ನು ನಗದು ರಹಿತ ಪಾವತಿಯ ಉಪಕರಣಗಳ ಬಳಕೆಗೆ ಉತ್ತೇಜನ ನೀಡುವುದು.
- ಸಾರ್ವಜನಿಕರಿಗಾಗಿ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಶೇ.100 ನಗದು ರಹಿತವಾಗಿ ಕಾರ್ಡ್, ಆನ್‌ಲೈನ್, ಮೊಬೈಲ್ ಬ್ಯಾಂಕಿಂಗ್ ಮೂಲಕವೇ ನಿರ್ವಹಿಸಲು ಅಗತ್ಯ ಸೌಲಭ್ಯ ಕಲ್ಪಿಸುವುದು.
- ಸಾರ್ವಜನಿಕರು ಇತರ ಕಡೆಗಳಲ್ಲೂ ಹೆಚ್ಚು ಹೆಚ್ಚು ಕಾರ್ಡ್, ಆನ್‌ಲೈನ್, ಮೊಬೈಲ್ ಬ್ಯಾಂಕಿಂಗ್ ಮೂಲಕವೇ ವಹಿವಾಟು ನಡೆಸುವಂತೆ ಉತ್ತೇಜನ ನೀಡುವುದರೊಂದಿಗೆ ನಿರಂತರ ಮಾಹಿತಿ ನೀಡುವುದು.



“ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕರ ತೆರಿಗೆ ಹಣ ಬ್ಯಾಂಕ್ ಖಾತೆಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡ ನಿದರ್ಶನಗಳು ನಮ್ಮ ಮುಂದಿವೆ. ನಗದು ರಹಿತ ವ್ಯವಸ್ಥೆಯಿಂದ ಹಣ ದುರುಪಯೋಗದಂತಹ ಪ್ರಕರಣಗಳನ್ನು ಸಂಪೂರ್ಣವಾಗಿ ತಡೆಯಬಹುದಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**
ವಿಧಾನ ಪರಿಷತ್ ಸದಸ್ಯರು, ಕರ್ನಾಟಕ.



“ ಗ್ರಾಮ ಪಂಚಾಯತಿಯಲ್ಲಿ ನಗದು ರಹಿತ ವ್ಯವಹಾರದ ಕ್ರಮದಿಂದಾಗಿ ತೆರಿಗೆಗಳನ್ನು ಸ್ಥಳೀಯರು ಕಛೇರಿಗೆ ಬಂದು ನೀಡುವುದರಿಂದ ತೆರಿಗೆ ವಸೂಲಾತಿಗೆ ಮನೆ ಭೇಟಿ ನೀಡುವಲ್ಲಿ ವ್ಯರ್ಥವಾಗುವುದು, ಸಂಗ್ರಹಿಸಲಾದ ತೆರಿಗೆಯನ್ನು ಲೆಕ್ಕ ಹಾಕಿ ಬ್ಯಾಂಕ್‌ಗೆ ಜಮೆಗೊಳಿಸುವಲ್ಲಿ ಸಮಯ ಉಳಿತಾಯ ಹಾಗೂ ಉದ್ಭವಿಸಬಹುದಾದ ಆರ್ಥಿಕ ಲೋಪಗಳ ಇಲ್ಲದಿರುವಿಕೆ ಇತ್ಯಾದಿ ಅನುಕೂಲತೆಗಳು ಉಂಟಾಗಿವೆ. ಖಾತೆಗೆ ಸಂಗ್ರಹವಾದ ತೆರಿಗೆಯ ಬಗ್ಗೆ ಪ್ರತಿದಿನವೂ ಬ್ಯಾಂಕ್‌ನಿಂದ ಮೇಲ್ ಮುಖಾಂತರ ಲೆಕ್ಕ ತಃಖ್ತೆ ಬರುತ್ತಿರುವುದರಿಂದ ಲೆಕ್ಕ ಪರಿಶೋಧಕರಿಗೂ ಸಹಕಾರಿಯಾಗಲಿದೆ.

**ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್**
ಸಿಇಓ, ಜಿಲ್ಲಾ ಪಂಚಾಯತ್ ಉಡುಪಿ



“ ಕರ್ನಾಟಕದಲ್ಲಿ ಪ್ರಪ್ರಥಮ ನಗದುರಹಿತ ಗ್ರಾಮ ಪಂಚಾಯತಿ ಎಂದು ಹೇಳಿಕೊಳ್ಳಲು ಹೆಮ್ಮೆಯಿದೆ. ಗ್ರಾಮ ಪಂಚಾಯತಿಯ ಆಡಳಿತ ಮಂಡಳಿ, ಅಧಿಕಾರಿ, ಸಿಬ್ಬಂದಿವರ್ಗ ಹಾಗೂ ಬ್ಯಾಂಕ್‌ನವರ ಸಹಕಾರದಿಂದ ನಗದುರಹಿತ ವ್ಯವಸ್ಥೆಯನ್ನು ಯಶಸ್ವಿಗೊಳಿಸಿದ ಶ್ರೇಯಸ್ಸು ಗ್ರಾಮಸ್ಥರಿಗೆ ಸಲ್ಲಬೇಕಾಗಿದೆ.

**ಶ್ರೀ ಹೆಚ್. ಪ್ರಮೋದ್ ಹಂದೆ**
ಅಧ್ಯಕ್ಷರು, ಗ್ರಾಮ ಪಂಚಾಯತ್, ಕೋಟತಟ್ಟು

## ಯಶೋಗಾಥೆ



ಚಂದ್ರಶೇಖರ ಯಲಿಗಾರ

ಜಿಲ್ಲಾ ವ್ಯವಸ್ಥಾಪಕರು
(ಎಸ್‌ಡಿ&ಕಾಂ)
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್
ಜಿಲ್ಲಾ ಪಂಚಾಯತ ಗದಗ.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ವತಿಯಿಂದ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಒಕ್ಕೂಟಗಳನ್ನು ರಚನೆ ಮಾಡುತ್ತಿದ್ದು, ಈ ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ನೀಡಲಾಗುತ್ತಿರುತ್ತದೆ. ಈ ಸಂದರ್ಭದಲ್ಲಿ ದ್ಯಾಮವ್ವ ಬಂಡಿಯವರು ಒಕ್ಕೂಟದ ಮೂಲಕ ಸಾಲ ಪಡೆದು ತಾನು ಅವಲಂಬಿಸಿದ್ದ ದೋಸೆ, ಪಡ್ಡು, ಚೂಂಗಮಣಿ ಹಂಚುಗಳನ್ನು ತಯಾರಿಸಿ ಮಾರಾಟ ಮಾಡುವುದರ ಮುಖೇನ ತಮ್ಮ ಕುಟುಂಬಕ್ಕೆ ಆಧಾರವಾಗಿದ್ದಾರೆ.**

# ಬದುಕೆಂಬ ಬಂಡಿ ನಡೆಸಲು ದ್ಯಾಮವ್ವ ಭಂಡಿಯ ಹರಸಾಹಸ

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ವಾಸವಾಗಿರುವ ದ್ಯಾಮವ್ವ ಭಂಡಿರವರ ಕುಟುಂಬವು 4 ಜನ ಸದಸ್ಯರಿಂದ ಕೂಡಿದ ಬಡ ಕುಟುಂಬವಾಗಿರುತ್ತದೆ. ಈ ಕುಟುಂಬವು ಜೀವನ ಸಾಗಿಸಲು ಪರಂಪರಾನುಗತವಾಗಿ ಕುಟುಂಬದವರು ಅವಲಂಬಿಸಿದ್ದ ದೋಸೆ, ಪಡ್ಡು, ಚೂಂಗಮಣಿ ಹಂಚುಗಳನ್ನು ತಯಾರಿಸಿ ಮಾರುವುದು ಇವರ ಮೂಲ ಉದ್ಯೋಗವಾಗಿತ್ತು. ಆದರೆ ಬೇಡಿಕೆ ಇದ್ದರೂ ಕಚ್ಚಾ ಸಾಮಾಗ್ರಿಗಳ ಕೊರತೆಯಿಂದ ಹಾಗೂ ಇದಕ್ಕೆ ಹಣ ಹೂಡಲು ಸಮಸ್ಯೆಯಿದ್ದು ಹೆಚ್ಚಿನ ಮಟ್ಟದಲ್ಲಿ ಲಾಭಗಳಿಸಲು ಸಾಧ್ಯವಾಗುತ್ತಿರಲಿಲ್ಲ.

ಇದಲ್ಲದೆ ಇವರಿಗೆ ಇರುವ ಜಮೀನು ಮಳೆ ಆಶ್ರಯದಿಂದ ಕೂಡಿದ್ದು ವ್ಯವಸಾಯಕ್ಕೆ ಅಷ್ಟೊಂದು ಯೋಗ್ಯಕರವಾಗಿಲ್ಲದ್ದರಿಂದ ವ್ಯವಸಾಯಕ್ಕೆಂದು ಮಾಡಿದ ಖರ್ಚು ಕೂಡ ಸಿಗದಂತಾಗಿತ್ತು. ಇತರರ ಬಳಿ ಅತಿ ಹೆಚ್ಚು ಬಡ್ಡಿಗೆ ಸಾಲ ಪಡೆದು ಕುಟುಂಬದ ನಿರ್ವಹಣೆ ಮಾಡುತ್ತಿದ್ದು ತುಂಬಾ ಕಡು ಕಷ್ಟಕರ ಜೀವನ ನಡೆಸುತ್ತಿದ್ದರು.

ಇಂತಹ ಸಂದರ್ಭದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ಬಡತನ ನಿವಾರಣೆ ಮಾಡುವ ಹಿತದೃಷ್ಟಿಯಿಂದ ಹಾಗೂ ಮಹಿಳೆಯರ ಆರ್ಥಿಕಾಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಕಿರು ಬಂಡವಾಳ ಹೂಡಿಕೆ ಯೋಜನೆಯ ತರಬೇತಿ



ನೀಡಿ ಯಾವುದಾದರೂ ಆರ್ಥಿಕ ಚಟುವಟಿಕೆ ಕೈಗೊಳ್ಳಲು ರಾಜ್ಯ ಸರ್ಕಾರವು ಸಂಜೀವಿನಿ-ಕರ್ನಾಟಕ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನ ಮಾಡಲಾಗುತಿತ್ತು.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿಯೂ ಸಹ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿದ್ದು ಒಕ್ಕೂಟ ಕಾರ್ಯತಂತ್ರ ವ್ಯಾಪ್ತಿಯಡಿ ಸ್ವಸಹಾಯ ಗುಂಪುಗಳ ಒಕ್ಕೂಟಗಳನ್ನು ರಚಿಸಿ ಒಕ್ಕೂಟಗಳ ಮಹಿಳೆಯರಿಗೆ ಏನಾದರೂ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಸಮುದಾಯ ಬಂಡವಾಳ ನಿಧಿಯನ್ನು ಕಡಿಮೆ ಬಡ್ಡಿದರದಲ್ಲಿ ಸಾಲವಾಗಿ ನೀಡಲಾಗುತಿತ್ತು

ಇದೇ ವೇಳೆ ದ್ಯಾಮವ್ವ ಬಂಡಿಯವರು ಒಕ್ಕೂಟದಿಂದ ಪಡೆದ ಸಮುದಾಯ ಬಂಡವಾಳ ನಿಧಿಯಡಿ ಸ್ವಸಹಾಯ ಗುಂಪಿನ ಆಂತರಿಕ ಸಾಲ ಪಡೆದು ಹಾಗೂ ಸ್ವಂತ ಉಳಿತಾಯದ ಹಣ ಸೇರಿಸಿ ಒಟ್ಟು 50,000/- ರೂ. ಗಳಿಗೆ ದೋಸೆ, ಪಡ್ಡು, ಚೂಂಗಮಣಿ ಹಂಚುಗಳನ್ನು ತಯಾರಿಸಿ ಮಾರಾಟ ಮಾಡುವ ಕಚ್ಚಾ ಸಾಮಾಗ್ರಿಗಳು ಮತ್ತು ಸಂಬಂಧಪಟ್ಟ ಯಂತ್ರಗಳನ್ನು ಖರೀದಿಸಿ ಚಟುವಟಿಕೆಯನ್ನು ಪ್ರಾರಂಭಿಸಿದರು.

ದ್ಯಾಮವ್ವ ಭಂಡಿರವರ ತಮ್ಮದೇ ಮನೆಯಲ್ಲಿ ಈ ಚಟುವಟಿಕೆಯನ್ನು ಪ್ರಾರಂಭಿಸಲು ಶುರು ಮಾಡಿದ್ದು.ಈ ಚಟುವಟಿಕೆಯಲ್ಲಿ ಅಳವಡಿಸಿಕೊಂಡಿರುವ ಹೊಸ ಅವಿಷ್ಕಾರವೆಂದರೆ ಗುಣ ಮಟ್ಟದ ಬಾಳಿಕೆ ಬರುವ ವಸ್ತುಗಳನ್ನು ಮಾರಾಟ ಮಾಡುವುದು, ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದು. ಜಾತ್ರೆ ಮತ್ತು ಸಂತೆಗಳಲ್ಲಿ ಮಾರಾಟ ಮಾಡುವುದು ಇನ್ನೂ ವಿವಿಧ ತಂತ್ರಗಳನ್ನು ಇದರಲ್ಲಿ ಅಳವಡಿಸಿಕೊಂಡಿದ್ದಾರೆ.ಇದರಿಂದ ಪ್ರತಿ ತಿಂಗಳು 5000-6000/- ರೂ.ಗಳವರೆಗೂ ಆದಾಯ ಗಳಿಸಲಾಗುತ್ತಿದೆ ಎಂದು ತಿಳಿಸುತ್ತಾರೆ.

ದ್ಯಾಮವ್ವ ಭಂಡಿರವರ ಮೊದಲು ಮಾಡಿರುವ ಸಾಲವನ್ನು ಸ್ವಲ್ಪ ಮಟ್ಟದಲ್ಲಿ ತೀರಿಸಿದ್ದಾರೆ ಹಾಗೆಯೇ ಸಾಮಾಜಿಕವಾಗಿ ಇತರೆ ಮಹಿಳೆಯರಿಗೆ ಮಾದರಿಯಾಗಿದ್ದು ಮನಸ್ಸೊಂದಿದ್ದರೆ ಮಾರ್ಗವೆನ್ನುವಂತೆ ಗ್ರಾಮದಲ್ಲಿ ಈ ಚಟುವಟಿಕೆಯ ವ್ಯಾಪಾರ ವಹಿವಾಟು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ.

ದ್ಯಾಮವ್ವ ಭಂಡಿರವರ ಪ್ರಕಾರ "ಸರ್ಕಾರದಿಂದ ಹಲವಾರು ಯೋಜನೆಗಳು ಬಂದರೂ ಸಹ ಬಡತನ ನಿರ್ಮೂಲನೆ ಮಟ್ಟ ಕಡಿಮೆ ಆಗಿರಲಿಲ್ಲ. ಆದರೆ ಸಂಜೀವಿನಿ ಯೋಜನೆ ಇತರೆ ಯೋಜನೆಗಿಂತ ತುಂಬ ಭಿನ್ನವಾಗಿದೆ. ಯಾಕೆಂದರೆ ಈ ಯೋಜನೆಯಡಿ ಮಹಿಳಾ ಸ್ವ ಸಹಾಯ ಗುಂಪುಗಳ ಮುಖಾಂತರ ಆರ್ಥಿಕಾಭಿವೃದ್ಧಿ ಕೈಗೊಳ್ಳವ ಚಟುವಟಿಕೆಗಳನ್ನು ನಡೆಸುವುದರಿಂದ ತಮ್ಮ ಆರ್ಥಿಕ ಮಟ್ಟವನ್ನು ಅಭಿವೃದ್ಧಿ ಪಡಿಸಿಕೊಂಡು ಕುಟುಂಬ ಅಭಿವೃದ್ಧಿ ಹೊಂದಲು ಸಾಧ್ಯ ಇದಕ್ಕೆ ಸಹಕರಿಸಿದ ಸಂಜೀವಿನಿ ಯೋಜನೆ ಸಿಬ್ಬಂದಿಗೆ ಮತ್ತು ಮಹಿಳಾ ಗುಂಪಿನ ಸದಸ್ಯರಿಗೆ ತುಂಬಾ ಕೃತಜ್ಞತೆಗಳು" ಎಂದು ಅಭಿನಂದನೆ ಸಲ್ಲಿಸುತ್ತಾರೆ. ■

## 2017-18ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಟ್ಟಾರೆಯಾಗಿ 14,061 ಕೋಟಿ ರೂ. ಒದಗಿಸಲಾಗಿದೆ.

**ಪ್ರಮುಖವಾಗಿ..**

- **ನಮ್ಮ ಗ್ರಾಮ ನಮ್ಮ ಯೋಜನೆಗೆ 20 ಕೋಟಿ ರೂ. ಗಳನ್ನು**
- **ಗ್ರಾಮೀಣ ನೀರು ಸರಬರಾಜು ಯೋಜನೆಗೆ 2,200 ಕೋಟಿ ರೂ.ಗಳನ್ನು**
- **ಗ್ರಾಮೀಣ ನೈರ್ಮಲ್ಯವನ್ನು ಕಾಪಾಡಲು ಬಯಲು ಬಹಿರ್ದೆಸೆ ಮುಕ್ತವಾಗಿಸಲು 1,585 ಕೋಟಿ ರೂ. ಗಳನ್ನು ನೀಡಲಾಗಿದೆ**
- **ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-4ನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಿ 4,386 ಕಿ.ಮೀ.ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು ಈ ಯೋಜನೆಗೆ 1,765 ಕೋಟಿ ರೂ.ಗಳನ್ನು ಒದಗಿಸಲಾಗಿದೆ.**

| ಪಂಚಾಯ್ತಿಯ ಚುನಾಯಿತ ಸದಸ್ಯರ ಗೌರವಧನ ಹೆಚ್ಚಳ | |
|---|---|
| ಜಿ.ಪಂ. ಸದಸ್ಯ | 3000 ರಿಂದ 5000 |
| ತಾ.ಪಂ. ಅಧ್ಯಕ್ಷ | 4500 ರಿಂದ 6000 |
| ತಾ.ಪಂ ಉಪಾಧ್ಯಕ್ಷ | 3000 ರಿಂದ 4000 |
| ತಾ.ಪಂ ಸದಸ್ಯ | 1500 ರಿಂದ 3000 |
| ಗ್ರಾ. ಪಂ. ಅಧ್ಯಕ್ಷ | 1000 ರಿಂದ 3000 |
| ಗ್ರಾ.ಪಂ ಉಪಾಧ್ಯಕ್ಷ | 600 ರಿಂದ 2000 |
| ಗ್ರಾ.ಪಂ ಸದಸ್ಯ | 500 ರಿಂದ 1000 |

## ಕವಿಯ(ಕ್ಷ) ಪ್ರಶ್ನೆ



# ಬಂತು ಬೇಸಿಗೆ ಕಾಲ

ಮನುಷ್ಯನ ಅತಿಯಾದ ಆಸೆ ಮತ್ತು ತನ್ನ ಸುಖ ಸ್ವಾರ್ಥಕ್ಕಾಗಿ ಅರಣ್ಯವನ್ನು ನಾಶ ಮಾಡುತ್ತಿರುವುದು ಪ್ರಕೃತಿ ವಿಕೋಪಕ್ಕೆ ಕಾರಣವಾಗಿದೆ. ಇದರ ಪರಿಣಾಮವಾಗಿ ಪ್ರಕೃತಿಯು ನಮಗೆ ನೀಡಿರುವುದು ಬರಗಾಲ. ಲಕ್ಷಾಂತರ ವರ್ಷಗಳಿಂದಲೂ ಪ್ರಕೃತಿ ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಹೀಗೆ ಕಾಲಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ. ಆದರೆ ನಮ್ಮಗಳ ದುರಾಸೆಯಿಂದಾಗಿ ಕಾಲಕ್ಕೆ ಸರಿಯಾಗಿ ಮಳೆಯಾಗದೇ ಅತಿಯಾದ ಬಿಸಿಲಿನಿಂದಾಗಿ ಪ್ರಕೃತಿ ಕಂಡವಾಗಿದೆ. ಇದರ ಪರಿಣಾಮ ಪ್ರತಿ ವರ್ಷ ನೀರಿಗಾಗಿ ಪರದಾಟ, ಜನ-ಜಾನುವಾರುಗಳ ಮಾರಣ ಹೋಮ, ಅನಾರೋಗ್ಯ ಹೀಗೆ ಹಲವಾರು ತೊಂದರೆಗಳನ್ನು ನಾವೇ ಅನುಭವಿಸುವಂತಾಗಿದೆ. ಮಾನವ ಹೊಸ ಹೊಸ ಆವಿಷ್ಕಾರಗಳನ್ನು ಕಂಡುಹಿಡಿಯುವುದು ಒಳ್ಳೆಯ ಉದ್ದೇಶಕ್ಕಾದರೂ ಪರಿಣಾಮ ಪ್ರಕೃತಿಗೆ ಮಾರಕವಾಗುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಪರಿಣಾಮವಾಗಿ ನಾವೆಂದು ಕೇಳದಂತಹ ಜಲಪ್ರಳಯ, ಅತಿವೃಷ್ಟಿ-ಅನಾವೃಷ್ಟಿ, ಭೂಕಂಪ ಹೀಗೆ ಹತ್ತು ಹಲವಾರು ಭಯಾನಕ ಸಂಗತಿಗಳನ್ನು ಅನುಭವಿಸುವಂತಾಗಿದೆ. ಇದಕ್ಕೆಲ್ಲಾ ಕಾರಣನಾದ ಮನುಷ್ಯನೇ ಪರಿಹಾರವನ್ನು ಹುಡುಕಬೇಕಾಗಿದೆ.

### ಕೆಲವು ಪ್ರಶ್ನೆಗಳು ?

1. ಅನಾವಶ್ಯಕವಾಗಿ ಕಾಡುಗಳನ್ನು ಹಾಳು ಮಾಡುವುದರ ಬದಲು ಮರ-ಗಿಡಗಳನ್ನು ಬೆಳೆಸುವ ಕಾರ್ಯವನ್ನು ಮಾಡಬಹುದಲ್ಲವೇ?
2. ವಿನಾಕಾರಣ ಮರಗಿಡಗಳನ್ನು ಕಡಿಯುವ ಬದಲು, ಮನೆಗೊಂದು ಮರ ಎಂದು ಪರಿಸರ ರಕ್ಷಿಸುವುದು ಒಳಿತಲ್ಲವೇ?
3. ನಮ್ಮಗಳ ಐಷಾರಾಮಿ ಜೀವನಕ್ಕಾಗಿ ಅವಶ್ಯಕವಿಲ್ಲದಿದ್ದಾಗಲೂ ವಾಹನಗಳನ್ನು ಬಳಸುವುದು ಎಷ್ಟು ಸರಿ?
4. ನಮ್ಮ ಮಕ್ಕಳಲ್ಲಿ ಪರಿಸರ ಪ್ರೇಮವನ್ನು ಬೆಳೆಸಿದಲ್ಲಿ ಅವರ ಮುಂದಿನ ಜೀವನ ಆರೋಗ್ಯಕರವಾಗಿರುವುದಲ್ಲವೇ?
5. ಮಳೆ ನೀರು ಸಂರಕ್ಷಣೆ ಮಾಡಿದ್ದಲ್ಲಿ ಹೆಚ್ಚಲ್ಲದಿದ್ದರೂ, ಸ್ವಲ್ಪ ಪ್ರಮಾಣದಲ್ಲಿಯಾದರೂ ಸಹಾಯವಾಗುವುದಲ್ಲವೇ?

**ಅರುಣ್ ಕುಮಾರ್ ಎಲ್.**
ನಂ.935, ಶಿವಪಾರ್ವತಿ ನಿಲಯ,
4ನೇ ಬ್ಲಾಕ್, ಡಿ ಗ್ರೂಪ್ ಬಡಾವಣೆ,
ಬಿಎಂಟಿಸಿ ಬಸ್‌ನಿಲ್ದಾಣದ ಎದುರು,
ವಿಶ್ವನೀಡಂ ಅಂಚೆ, ಲಿಂಗದೀರನಹಳ್ಳಿ,
ಬೆಂಗಳೂರು 560091

ಕಾವ್ಯ ವಿಕಾಸ



# ಪ್ರಗತಿಕಾಯಕ

ಹೋಗಿನೇಡಾನ ಬನ್ನಿರಿ ನಮ್ಮೂರ ಗ್ರಾಮದ ಪವಿತ್ರದೇಗುಲ
ನಮ್ಮೂರ ಗ್ರಾಮದ ಮಾದರಿ ಗ್ರಾಮಪಂಚಾಯತಿಯ ಪ್ರಗತಿಕಾಯಕ
ಗ್ರಾಮಗಳಾಭಿವೃದ್ಧಿ ಮೂಲಭೂತ ಸೌಕರ್ಯಗಳ ಪ್ರಗತಿಕಾಯಕ
ಶ್ರೇಯಸ್ಸು ಯಶಸ್ಸುಗೊಂಡಿರುವುದು ಪ್ರಗತಿಕಾಯಕ ನೋಡಾಬನ್ನಿರಿ.

ಕೇಂದ್ರ ರಾಜ್ಯ ಸರ್ಕಾರಗಳೆರಡ ಪ್ರಗತಿಯ ಅದ್ಭುತ ಯೋಜನೆ.
ಗ್ರಾಮ ಪಂಚಾಯತಿಯ ಸರ್ವಸದಸ್ಯರ ಅಂಗೀಕಾರ ಬಹುಮತ ಪಡೆದು
ಶ್ರೇಯಸ್ಸು ಯಶಸ್ಸು ಅರ್ಹಫಲಾನುಭವಿ ಉಜ್ವಲ ಭವಿಷ್ಯ
ಪ್ರೇರಣೆಯ ಬದುಕಿಗೆ ಪ್ರಗತಿಕಾಯಕಕ್ಕೆ ಕಾರಣಗಳಾಗೈತ್ರಿ.

ಗ್ರಾಮ ಪಂಚಾಯತಿಯ ಗ್ರಾಮಸೌಧ ಕಾಯಕಪ್ರಗತಿ ಶ್ರೇಯಸ್ಸಾಗತ್ರಿ
ಜನಸೇವೆಯ ಪಂಚತಂತ್ರ ಪ್ರಗತಿಕಾಯಕ ಚುರುಕುಗೊಂಡೈತ್ರಿ,
ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿಬ್ಬಂದಿ ದಕ್ಷತೆ
ಪ್ರಮಾಣಿಕ ನಿಷ್ಟೆ ಅರ್ಹ ಫಲಾನುಭವಿಗಳಿಗೆ ಸ್ವೀಕೃತವಾಗೈತ್ರಿ.

ಗ್ರಾಮ ಪಂಚಾಯತಿಯ ಸರ್ವಪ್ರತಿನಿಧಿಗಳ ಒಮ್ಮೊತಕ್ಕರಳು
ಸಕಾಲಪ್ರಗತಿ ಯೋಜನೆ ಅನುಷ್ಟಾನ ಗ್ರಾಮಗಳಲ್ಲಿ ಯಶಸ್ಸಾಗೈತ್ರಿ
ಗ್ರಾಮ ವಿಕಾಸಸುವರ್ಣಗ್ರಾಮ ಉದ್ಯೋಗ ಖಾತರಿ ಮಹಾತ್ಮಗಾಂಧೀ
ನರೇಗಾ ರಾಜೀವಗಾಂಧಿ ಚೈತನ್ಯ ಪ್ರಗತಿ ಯೋಜನೆ ಚಾಲನೆಗೊಂಡೈತ್ರಿ.

ಪ್ರಧಾನ ನರೇಂದ್ರ ಮೋದಿಯವರ ಸ್ವಚ್ಛ ಬಾರತ್ ಅಭಿಯಾನ
ಡಾ||ಅಂಬೇಡ್ಕರ್ ಜಾತ್ಯಾತೀತತೆ, ಮಹಾತ್ಮ ಗಾಂಧೀಯ ಗ್ರಾಮ
ಸ್ವರಾಜ್ಯಾಡಳಿತ, ವಿಶ್ವಗುರು ಬಸವಣ್ಣನ ಕಾಯಕಕೈಲಾಸವೆಂಬ
"ಗ್ರಾಮ ಸ್ವಚ್ಛತೆ" ಸ್ವಚ್ಛ ಭಾರತ್ ಮಿಷನ್ ಪಾಲನೆ ಕನಸು ನನಸ್ಸಾಗೈತ್ರಿ.

**ಮರಿದೇವರ ಸಿದ್ದಪ್ಪ**
ನಿವೃತ್ತ ಶಿಕ್ಷಕರು,
ಚೌಡಾಪುರ ಅಂಚೆ, ಕೂಡ್ಲಿಗಿ ತಾಲೂಕು,
ಬಳ್ಳಾರಿ ಜಿಲ್ಲೆ 583135.
9880307012.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಮೂಲಕ ಒದಗಿಸಲಾಗುತ್ತಿರುವ ಆನ್‌ಲೈನ್ ಸೇವೆಗಳ ಸೇವಾ ಶುಲ್ಕದ ಮೊತ್ತವನ್ನು ಜಮೆ ಮಾಡಲು ಗ್ರಾಮ ಪಂಚಾಯತಿಗಳಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯುವ ಬಗ್ಗೆ.

**ಓದಲಾಗಿದೆ:**

1. ದಿನಾಂಕ: 09.12.2016 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿ.
2. ಸರ್ಕಾರದ ಆದೇಶ ಸಂಖ್ಯೆ:FD 5 TAR 2017, dated:30.01.2017.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿ.ಪಂ) ಇವರ ಟಿಪ್ಪಣಿ ಸಂಖ್ಯೆ:ಆಇ/333/ವೆಚ್ಚ–6/2016, ದಿನಾಂಕ:14.02.2017.

***

## ಪ್ರಸ್ತಾವನೆ

ರಾಜ್ಯದ 4023 ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳನ್ನು ಸ್ಥಾಪಿಸಲಾಗಿದೆ. "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 43 ಸೇವೆಗಳು ಹಾಗೂ ಕಂದಾಯ ಇಲಾಖೆಯ 40 ಸೇವೆಗಳನ್ನು ದಿನಾಂಕ:01.07.2016 ರಿಂದ ಒದಗಿಸಲಾಗುತ್ತಿದೆ. ಉಳಿದ 17 ಇನ್ನಿತರ ಸೇವೆಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು. ರಾಜ್ಯದ ಉಳಿದ ಗ್ರಾಮ ಪಂಚಾಯತಿಗಳಿಗೆ ಈ ಯೋಜನೆಯನ್ನು ವಿಸ್ತರಿಸಿ ಸಮನ್ವಯಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ 43 ಸೇವೆಗಳು ಹಾಗೂ ಕಂದಾಯ ಇಲಾಖೆಯ 40 ಸೇವೆಗಳಿಗೆ ಸಂಬಂಧಿಸಿದಂತೆ ಪ್ರತಿ ಕೋರಿಕೆಗೆ ಸೇವಾ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಪ್ರಸ್ತುತ ಬಾಪೂಜಿ ಸೇವಾ ಕೇಂದ್ರದಿಂದ ಸಂಗ್ರಹಣೆಯಾಗುತ್ತಿರುವ ಈ ಮೊತ್ತವನ್ನು ಗ್ರಾಮ ಪಂಚಾಯತಿ ನಿಧಿ ಖಾತೆಯಲ್ಲಿ ಜಮೆ ಮಾಡಲಾಗುತ್ತಿದೆ. ಈಗಾಗಲೇ ಗ್ರಾಮ ಪಂಚಾಯತಿಯ ತೆರಿಗೆ ವಸೂಲಾತಿ ಮತ್ತು ಇನ್ನಿತರೆ ಸ್ವಂತ ಸಂಪನ್ಮೂಲ ಕ್ರೋಢೀಕರಣಗಳಿಂದ ಸಂಗ್ರಹಣೆಯಾಗುವ ಆದಾಯವನ್ನು ಗ್ರಾಮ ಪಂಚಾಯತಿ ನಿಧಿ ಖಾತೆಯಲ್ಲಿ ಜಮೆ ಮಾಡಲಾಗುತ್ತಿರುವುದರಿಂದ ಬಾಪೂಜಿ ಸೇವಾ ಕೇಂದ್ರಗಳ ಆನ್‌ಲೈನ್ ಸೇವಾ ಶುಲ್ಕದ ಮೊತ್ತವನ್ನು ಅಂದಾಜಿಸಲು ಕಷ್ಟಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಬಾಪೂಜಿ ಸೇವಾ ಕೇಂದ್ರಗಳ ಆನ್‌ಲೈನ್ ಸೇವಾ ಶುಲ್ಕದ ಮೊತ್ತವನ್ನು ಅಂದಾಜಿಸಿ ಸಮನ್ವಯಗೊಳಿಸಲು ಸದರಿ ಮೊತ್ತವನ್ನು ಗ್ರಾಮ ಪಂಚಾಯತಿಗಳಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸುವ ಅವಶ್ಯಕತೆಯಿರುತ್ತದೆ.

ಈ ಬಗ್ಗೆ ಮೇಲೆ ಓದಲಾದ (3) ರಲ್ಲಿನ ಷರತ್ತಿಗೊಳಪಟ್ಟು ಗ್ರಾಮ ಪಂಚಾಯತಿಗಳಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ. ಅದರಂತೆ ಗ್ರಾಮ ಪಂಚಾಯತಿಗಳು ಈಗಾಗಲೇ ಇಳಿಡಿಠಿತಿ ಖಾತೆಯನ್ನು ತೆರೆದಿರುವ ಸ್ಥಳೀಯ ಎಸ್.ಬಿ.ಎಂ ಶಾಖೆಗಳಲ್ಲಿ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಆನ್‌ಲೈನ್ ಸೇವಾ ಶುಲ್ಕವನ್ನು ಜಮೆ ಮಾಡಲು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಸರ್ಕಾರವು ಉದ್ದೇಶಿಸಿದೆ.

ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/09/ಗ.ಕೋಶ/2016, ಬೆಂಗಳೂರು, ದಿನಾಂಕ:22.03.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ "ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳನ್ನು ಸ್ಥಾಪಿಸಿರುವ 4023 ಗ್ರಾಮ ಪಂಚಾಯತಿಗಳು ಹಾಗೂ ರಾಜ್ಯದ ಉಳಿದ ಎಲ್ಲಾ ಗ್ರಾಮ ಪಂಚಾಯತಿಗಳು Escrow ಖಾತೆಯನ್ನು ತೆರೆದಿರುವ ಸ್ಥಳೀಯ ಎಸ್.ಬಿ.ಎಂ ಶಾಖೆಗಳಲ್ಲಿ ಆನ್‌ಲೈನ್ ಸೇವಾ ಶುಲ್ಕದ ಮೊತ್ತವನ್ನು ಜಮೆ ಮಾಡಲು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಆದೇಶಿಸಿದೆ.

"ಪಂಚಾಯತ್ 100–ಬಾಪೂಜಿ ಸೇವಾ ಕೇಂದ್ರ" ಗಳ ಮೂಲಕ ಗ್ರಾಮ ಪಂಚಾಯತಿಗಳಲ್ಲಿ ಒದಗಿಸಲಾಗುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಕಂದಾಯ ಇಲಾಖೆಯ ಆನ್‌ಲೈನ್ ಸೇವೆಗಳಿಗೆ ಸಂಬಂಧಿಸಿದಂತೆ ಪ್ರತಿ ಕೋರಿಕೆಗೆ ನಿಗದಿಪಡಿಸಲಾಗಿರುವ ಆನ್‌ಲೈನ್ ಸೇವಾ ಶುಲ್ಕದ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ ದಲ್ಲಿ ನಮೂದಿಸಿದೆ.

1. ಈಗಾಗಲೇ ಗ್ರಾಮ ಪಂಚಾಯತಿ ನಿಧಿ ಖಾತೆಯಲ್ಲಿ ಜಮೆ ಮಾಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಆನ್‌ಲೈನ್ ಸೇವೆಗಳ ಸೇವಾ ಶುಲ್ಕದ ಮೊತ್ತವನ್ನು ಹಾಗೂ ಕಂದಾಯ ಇಲಾಖೆಯ ಆನ್‌ಲೈನ್ ಸೇವೆಗಳ ಸೇವಾ ಶುಲ್ಕದ ಮೊತ್ತವನ್ನು (ಅನುಬಂಧದಲ್ಲಿನ ಕ್ರಮ ಸಂಖ್ಯೆ (3) ರಲ್ಲಿನ ಮೊತ್ತ) ಪ್ರತ್ಯೇಕವಾಗಿ ತೆರೆದ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ: FD 5 TAR 2017, dated:30.01.2017 ರಲ್ಲಿ ಬ್ಯಾಂಕ್ ಖಾತೆ ನಿರ್ವಹಣೆ ಸಂಬಂಧ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸುವುದು.
3. ಈ ಬ್ಯಾಂಕ್ ಖಾತೆಯಲ್ಲಿ ಅನುಬಂಧದಲ್ಲಿನ ಕ್ರಮ ಸಂಖ್ಯೆ (3) ರಲ್ಲಿನ ಮೊತ್ತವನ್ನು ಹೊರತುಪಡಿಸಿ ಬೇರೆ ಯಾವುದೇ ಮೊತ್ತವನ್ನು ಜಮೆ ಮಾಡುವಂತಿಲ್ಲ.
4. ಅನುಬಂಧದಲ್ಲಿನ ಕ್ರಮ ಸಂಖ್ಯೆ (4) ರಲ್ಲಿನ ಮೊತ್ತವನ್ನು ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲ ಕ್ರೋಢೀಕರಣದಿಂದ ಸಂಗ್ರಹಣೆಯಾಗುವ ಆದಾಯವನ್ನು ಜಮೆ ಮಾಡುತ್ತಿರುವ ಗ್ರಾಮ ಪಂಚಾಯತಿ ನಿಧಿ ಖಾತೆಗೆ (GP Fund Account) ಜಮೆ ಮಾಡುವುದು.
5. ಈ ಬ್ಯಾಂಕ್ ಖಾತೆಯನ್ನು ಗ್ರಾಮ ಪಂಚಾಯಿತಿಯಲ್ಲಿರುವ ಇತರ ಬ್ಯಾಂಕ್ ಖಾತೆಗಳಂತೆ ಪ್ರತಿ ವರ್ಷ ಲೆಕ್ಕ ಪರಿಶೋಧನೆಗೊಳಪಡಿಸುವುದು.
6. ಈ ಖಾತೆಯಲ್ಲಿನ ಮೊತ್ತವನ್ನು ಬಾಪೂಜಿ ಸೇವಾ ಕೇಂದ್ರಗಳ ನಿರ್ವಹಣೆಗೆ ಅಗತ್ಯವಿರುವ DEO ಸಿಬ್ಬಂದಿ ವೇತನ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಗಳಿಗೆ ನಿಯಮಾನುಸಾರ ಭರಿಸುವುದು. ಈ ಖಾತೆಯ ನಿರ್ವಹಣೆಯಲ್ಲಿ ಯಾವುದೇ ತರಹದ ಲೋಪದೋಷಗಳು ಬಾರದಂತೆ ನಿರ್ವಹಿಸುವ ಹೊಣೆಗಾರಿಕೆಯು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳದ್ದು ಆಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಯಾಲಕ್ಕಿಗೌಡ)**
ನಿರ್ದೇಶಕರು (ಇ–ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಅನುಬಂಧ

| 43 Online Services of RDPR | | | |
|---|---|---|---|
| **Sl. No.** | **Service Name** | **Online Service Fee** | **Service Charges** |
| 1 | 2 | 3 | 4 |
| 1 | Issuance of Building permission-Residential(New/Addl/ Mod) | Rs. 50/- | As Per Panchayat Bye law |
| 2 | Issuance of Building permission-Commercial (New/Addl/ Mod) | Rs. 50/- | As Per Panchayat Bye law |
| 3 | Issuance of Alteration to Assessment List(Mutation) | Rs. 50/- | 3% of Stamp duty |
| 4 | Copy of Demand/ Assessment List (Existing) | Free | Rs.50/- |
| 5 | Application to waive off property tax | Free | Rs.50/- |
| 6 | Issuance for Building Completion Certificate | Rs. 50/- | Rs.50/- |
| 7 | Application for new Water connection | Rs. 50/- | As Per Panchayat Bye law |
| 8 | Application for Disconnecting Water Connection | Rs. 10/- | Rs.250/- |
| 9 | Intimation of Digging of Borewells | Rs. 10/- | Rs.50/- |
| 10 | Intimation to Closure of Borewells | Rs. 10/- | Rs.50/- |
| 11 | Issuances of NOC for ESCOMS | Rs. 50/- | As Per Panchayat Bye law |
| 12 | Application requesting for skill based equipments like tailoring machines etc (To Place before GramaSabha) | Rs. 10/- | Rs. 10/- |
| 13 | Application under SCP/TSP Schemes (Subsidy for cattle feed/cattle shed) (To place before GramaSabha) | Rs. 10/- | Rs. 10/- |
| 14 | Application for availing housing scheme (To place before GramaSabha) | Rs. 10/- | Rs. 20/- |
| 15 | Application for getting free-sites (To place before GramaSabha) | Rs. 10/- | Rs. 20/- |
| 16 | Application for SBM ( To Place before Grama Sabha) | Rs. 10/- | Rs. 20/- |
| 17 | Application for Bio-gas | Rs. 10/- | Rs. 20/- |
| 18 | No Due Certificate from Gram Panchayat | Rs. 10/- | Rs. 50/- |
| 19 | Application under Rajeev Gandhi Chaithanya Yojana ( To Place before GramaSabha) | Rs. 10/- | Rs. 10/- |
| 20 | Issuance of Providing employment to unskilled labours under MGNREGA scheme | Rs. 10/- | Rs. 10/- |

| | | | |
|---|---|---|---|
| 21 | Issuance of job card for unskilled labours under MGNREGA | Rs. 10/- | Free |
| 22 | Payment of residential property tax | Rs. 10/- | Demand Notice |
| 23 | Payment of Commercial property tax | Rs. 10/- | Demand Notice |
| 24 | Payment of water charges | Rs. 10/- | Free |
| 25 | Application for New Street Lights in Existing Lines | Rs. 10/- | Rs. 10/- |
| 26 | NOC to Land Conversion | Rs. 50/- | As Per GP Meeting Proceedings |
| 27 | Payment of Rent on GP Assets | Rs. 50/- | Demand Notice to be generated |
| 28 | NOC to Other Authorities/Departments | Rs. 50/- | Payable as per GP meeting Proceedings |
| 29 | e-payment for the work executed under developmental schemes | Rs. 10/- | Rs. 10/- |
| 30 | Issuance of Trade license (new /Addl/Mod) (Hotels and Shops) | Rs. 50/- | As Per Panchayat Bye law |
| 31 | Issuance of  NOC to Factories | Rs. 50/- | As Per Panchayat Bye law |
| 32 | Issuance of Advertisement license (New/addl/Mod) | Rs. 50/- | As per Act and Dimensions of Advertisement board |
| 33 | NOC to Entertainment activities | Rs. 10/- | Rs.250/- |
| 34 | Renewal of trade license (Hotel and Shops) | Rs. 10/- | Rs.250/- |
| 35 | Application to avail service under 25% SC and ST GP welfare fund | Rs. 10/- | Rs. 10/- |
| 36 | Renewal of Advertisement license (New/addl/Mod) | Rs. 10/- | Rs.250/- |
| 37 | Application to avail services under 3% Physically Handicapped | Rs. 10/- | Free |
| 38 | Maintainance of Drinking Water (Minor Repairs) | Rs. 10/- | Free |
| 39 | Maintanence of Street Light (Minor Repairs) | Rs. 10/- | Rs. 10/- |
| 40 | Maintanace of Village sanitation (Minor Repairs) | Rs. 10/- | Rs. 10/- |
| 41 | Issuance of records (population, crop,cattle census, BPL list) | Rs. 10/- | Free |
| 42 | Application to avail services under 2%Sports Services | Rs. 10/- | Rs. 10/- |
| 43 | Issuance of Distance Certificate for School/College Students/Others | Rs. 10/- | Rs. 10/- |

| 39 Nada Kacheri Services of Revenue Department | | |
|---|---|---|
| 1 | Population Certificate | Rs. 15/- |
| 2 | Caste and Income Certficate | Rs. 15/- |
| 3 | Caste Certificate (Cat-A) | Rs. 15/- |
| 4 | Caste Certificate (SC/ST) | Rs. 15/- |
| 5 | OBC Certificate (Central) | Rs. 15/- |
| 6 | Residence Certificate | Rs. 15/- |
| 7 | Income Certificate | Rs. 15/- |
| 8 | Non Tenancy Certificate | Rs. 15/- |
| 9 | Widow Certificate | Rs. 15/- |
| 10 | Living Certificate | Rs. 15/- |
| 11 | Agricultural Family member certificate | Rs. 15/- |
| 12 | No Re-Marriage Certificate | Rs. 15/- |
| 13 | Land less Certificate | Rs. 15/- |
| 14 | Surviving Family Members Certificate | Rs. 15/- |
| 15 | Unemployment Certificate | Rs. 15/- |
| 16 | No Govt. Job Certificate | Rs. 15/- |
| 17 | Agriculturist Certificate | Rs. 15/- |
| 18 | Small / Marginal farmer Certificate | Rs. 15/- |
| 19 | Agricultural Labour Certficate | Rs. 15/- |
| 20 | Non creamy layer Certificate | Rs. 15/- |
| 21 | Land holding Certificate | Rs. 15/- |
| 22 | Bonafide Certificate | Rs. 15/- |
| 23 | Solvency Certificate | Rs. 15/- |
| 24 | Domicile Certificate | Rs. 15/- |
| 25 | Income Certificate for Employment | Rs. 15/- |
| 26 | Income Certificate for compass for Employment | Rs. 15/- |
| 27 | Attestation of Family Tree | Rs. 15/- |
| 28 | HK Region Residence and Eligibility | Rs. 15/- |
| 29 | Crop Certificate | Rs. 15/- |
| 30 | Physically Handicapped Pension | Rs. 15/- |
| 31 | Widow Pension | Rs. 15/- |
| 32 | Sandhya Suraksha Yojane | Rs. 15/- |
| 33 | National Family Benefit Scheme | Rs. 15/- |
| 34 | Indira Gandhi National Old Age Pension | Rs. 15/- |
| 35 | Mythri | Rs. 15/- |
| 36 | Manaswini | Rs. 15/- |
| 37 | Anthya Samskara Yojane | Rs. 15/- |
| 38 | Acid Victim Pension | Rs. 15/- |
| 39 | Farmer Widow Pension | Rs. 15/- |
| Bhoomi Services of revenue Department | | |
| 1 | RTC | Rs. 10/- |

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 939 ಗ್ರಾಪಂಅ 2016(1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 19.11.2016

# ಸುತ್ತೋಲೆ

**ವಿಷಯ:** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ತಿದ್ದುಪಡಿ ತಂದ ಪರಿಣಾಮವಾಗಿ ಗ್ರಾಮ ಪಂಚಾಯತಿಗಳು, ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆ ಹಾಗೂ ನೀರಿನ ಕರಗಳನ್ನು ವಸೂಲಿ ಮಾಡುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಸುತ್ತೋಲೆಗಳನ್ನು ಹಿಂಪಡೆದು, ಹೊಸ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

***

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ತಿದ್ದುಪಡಿ ತಂದ ಪರಿಣಾಮವಾಗಿ, ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆ ಹಾಗೂ ನೀರಿನ ಕರಗಳನ್ನು ವಸೂಲಿ ಮಾಡುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಸುತ್ತೋಲೆಗಳನ್ನು ಹಿಂಪಡೆದು, ತಿದ್ದುಪಡಿಯಾದ ಕಾಯ್ದೆಗೆ ಅನುಗುಣವಾಗಿ ಹೊಸದಾಗಿ ಸುತ್ತೋಲೆಗಳನ್ನು ಹೊರಡಿಸುವ ಅವಶ್ಯಕತೆಯಿರುತ್ತದೆ. ಆದುದರಿಂದ, ಗ್ರಾಮ ಪಂಚಾಯತಿಗಳು, ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆ ಹಾಗೂ ನೀರಿನ ಕರಗಳನ್ನು ವಸೂಲಿ ಮಾಡುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಕೆಳಗೆ ನಮೂದಿಸಿದ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

| ಕ್ರ.ಸಂ. | ಹಿಂಪಡೆಯಲಾದ ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 380 ಗ್ರಾಪಂಅ 2002, ದಿನಾಂಕ 24.05.2003 | ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ವಿಧಿಸಿ ವಸೂಲಿ ಮಾಡುವ ಬಗ್ಗೆ. |
| 2 | ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 380 ಗ್ರಾಪಂಅ 2002, 27.08.2003 | ಕೃಷಿ ಭೂಮಿಗಳಲ್ಲಿ ಹಾಗೂ ಸರ್ಕಾರಿ ಜಮೀನುಗಳಲ್ಲಿ ನಿರ್ಮಿಸಿರುವ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವ ಬಗ್ಗೆ. |
| 3 | ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 218 ಗ್ರಾಪಂಅ 2008, ದಿನಾಂಕ 11.12.2009 | ತೆರಿಗೆಗಳ ಪರಿಷ್ಕರಣೆ ಬಗ್ಗೆ. |
| 4 | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 190 ಗ್ರಾಪಂಅ 2010, ದಿನಾಂಕ 02.09.2011 | ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಡಗಳ ಮೇಲಿನ ತೆರಿಗೆ ಪರಿಷ್ಕರಿಸುವ ಬಗ್ಗೆ. |
| 5 | ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 50 ಗ್ರಾಪಂನ್ಯಾ 2008, ದಿನಾಂಕ 01.03.2010 | ದೂರ ಸಂಪರ್ಕ ಸಾಧನಗಳಿಗೆ ತೆರಿಗೆ ವಿಧಿಸುವ ಬಗ್ಗೆ. |
| 6 | ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 327 ಗ್ರಾಪಂಅ 2012, ದಿನಾಂಕ 29.06.2012 | ತೆರಿಗೆಗಳ ಪರಿಷ್ಕರಣೆ ಬಗ್ಗೆ. |

ತಿದ್ದುಪಡಿಯಾದ ಕಾಯ್ದೆಗೆ ಅನುಗುಣವಾಗಿ ಹೊಸ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ಹೊರಡಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ಹಾಗೂ ಅನುಸೂಚಿ ಖಗಿ ರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆಗಳು ಮತ್ತು ಫೀಜುಗಳನ್ನು ವಿಧಿಸುವ ಹಾಗೂ ವಸೂಲಿ ಮಾಡುವ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಈ ಸಂಬಂಧ ಗ್ರಾಮ ಪಂಚಾಯತಿಗಳು ಕಟ್ಟಡ ಮತ್ತು ಸ್ವತ್ತುಗಳ ಮೇಲೆ ತೆರಿಗೆಯನ್ನು ವಿಧಿಸಲು ನಿಯಮಗಳನ್ನು ಸಹ ರಚಿಸಲಾಗಿತ್ತು. ಈ ಹಿಂದೆ ಇದ್ದ ವಿಧಾನದಂತೆ ಅಂದರೆ ಕಟ್ಟಡಗಳ ವಾರ್ಷಿಕ ಬಾಡಿಗೆಯ ಮತ್ತು ಖಾಲಿ ನಿವೇಶನಗಳ ಮೇಲೆ ತೆರಿಗೆಗಳನ್ನು ನಿರ್ಧರಿಸಲು ಹಾಗೂ ವಸೂಲಿ ಮಾಡಲು ಉಲ್ಲೇಖದಲ್ಲಿ ನಮೂದಿಸಿರುವ ಮಾರ್ಗಸೂಚಿಯ ಸುತ್ತೋಲೆಗಳನ್ನು ಹೊರಡಿಸಲಾಗಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಸಲ್ಲಿಸಿರುವ ಮಾಹಿತಿಯನ್ನು ಪರಿಶೀಲಿಸಿದಾಗ, ಬಹುತೇಕ ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸುವಲ್ಲಿ ಹಾಗೂ ವಿಧಿಸಿದ ತೆರಿಗೆಯನ್ನು ಪೂರ್ಣವಾಗಿ ವಸೂಲಿ ಮಾಡುವಲ್ಲಿ ವಿಫಲವಾಗಿವೆ. ಗ್ರಾಮ ಪಂಚಾಯತಿಗಳು ಆರ್ಥಿಕವಾಗಿ ಸಧೃಡವಾಗಿರಬೇಕೆಂಬ ಮಹದೋದ್ದೇಶದಿಂದ ಸ್ಥಳೀಯವಾಗಿ ತೆರಿಗೆಗಳನ್ನು ವಿಧಿಸುವ ಶಾಸನಬದ್ಧ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಿದ್ದಾಗ್ಯೂ ಸಹ ಈ ಅಧಿಕಾರವನ್ನು ಅರ್ಥಪೂರ್ಣವಾಗಿ ಗ್ರಾಮ ಪಂಚಾಯತಿಗಳು ಉಪಯೋಗಿಸಿಕೊಂಡಿರುವುದಿಲ್ಲ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿರುತ್ತದೆ.

ಗ್ರಾಮ ಪಂಚಾಯತಿಗಳನ್ನು ಮತ್ತಷ್ಟು ಅಧಿಕಾರಯುಕ್ತವನ್ನಾಗಿಸಲು ಮತ್ತು ಸಧೃಡಗೊಳಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಕ್ಕೆ ತಿದ್ದುಪಡಿಯನ್ನು ತರಲಾಗಿದ್ದು ಪ್ರಕರಣ 199ರ ಜೊತೆಗೆ 199ಎ ಪ್ರಕರಣವನ್ನು ಸೇರಿಸಲಾಗಿದೆ. ಹಾಗೂ ಅನುಸೂಚಿ IV ರಲ್ಲಿ ಅಮೂಲಾಗ್ರ ಬದಲಾವಣೆ ಮಾಡಲಾಗಿದೆ. ಈ ಹಿಂದೆ ಬಾಡಿಗೆ ಆಧಾರದ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದ ವಿಧಾನವನ್ನು ಬದಲಾಯಿಸಿ, ಕಟ್ಟಡ ಮತ್ತು ಸ್ವತ್ತಿನ ಬಂಡವಾಳ ಮೌಲ್ಯದ ಮೇಲೆ ತೆರಿಗೆ ವಿಧಿಸಲು ಉಪಬಂಧ ಕಲ್ಪಿಸಿದೆ.

ಅನುಸೂಚಿ IV ರಲ್ಲಿ ವಿಧಿಸಿರುವ ಕಟ್ಟಡಗಳ ಮತ್ತು ನಿವೇಶನಗಳ ಮೇಲೆ ವಿಧಿಸಬಹುದಾದ ತೆರಿಗೆ, ಮನೋರಂಜನೆಗಳ ಮೇಲಿನ ಶುಲ್ಕ, ವಾಹನ ನಿಲುಗಡೆ ಶುಲ್ಕ, ಮಾರುಕಟ್ಟೆಗಳ ಮೇಲಿನ ಶುಲ್ಕ, ಪಶುಗಳು, ಸಂತೆಗಳು, ಜಾತ್ರೆಗಳ ಮೇಲಿನ ಶುಲ್ಕ ಮತ್ತು ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಅಳವಡಿಸಲು ರಸ್ತೆಗಳನ್ನು ತೋಡುವುದಕ್ಕಾಗಿ ವಿಧಿಸಬಹುದಾದ ಶುಲ್ಕಗಳ ಬಗ್ಗೆ ಕೆಳಗೆ ವಿವರಿಸಲಾಗಿದೆ.

## ಅನುಸೂಚಿ-IV

**(199 ನೇ ಪ್ರಕರಣವನ್ನು ನೋಡಿ)**

**ಸ್ವತ್ತಿನ ಮೇಲೆ ತೆರಿಗೆ**     **ಕಟ್ಟಡದ ಮೇಲೆ ತೆರಿಗೆ**

| ಎ | **ಕಟ್ಟಡಗಳ ಮೇಲೆ ತೆರಿಗೆ** | **ವಾರ್ಷಿಕ ದರ** |
|---|---|---|
| | i) ನಿವಾಸ ಕಟ್ಟಡಗಳು | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.10% ಕ್ಕಿಂತ ಹೆಚ್ಚಿಲ್ಲದೆ. |
| | ii) ವಾಣಿಜ್ಯ ಕಟ್ಟಡಗಳು | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.20% ಕ್ಕಿಂತ ಕಡಿಮೆಯಿಲ್ಲದ ಆದರೆ 0.5% ಕ್ಕಿಂತ ಹೆಚ್ಚಿಲ್ಲದೆ. |
| | ii) ಕೈಗಾರಿಕೆಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್, ಬಯೋಟೆಕ್ ಪಾರ್ಕ್, ಪವರ್ ಪ್ಲಾಂಟ್ಸ್, ಹೈಡ್ರೋ ಥರ್ಮಲ್, ಸೋಲಾರ್ ಸ್ಥಾವರಗಳು, ವಿಂಡ್‌ಮಿಲ್ಸ್ ಮತ್ತು ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು (ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿ ವಿಶೇಷ ಆರ್ಥಿಕ ವಲಯ (SEZ) ಮತ್ತು ಇತರ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳು) | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.4% ಕ್ಕಿಂತ ಕಡಿಮೆಯಿಲ್ಲದ ಆದರೆ 1% ಕ್ಕಿಂತ ಹೆಚ್ಚಿಲ್ಲದೆ. |

| | | |
|---|---|---|
| ಬಿ | **ಈ ಮುಂದಿನ ಅಳತೆಯುಳ್ಳ ಖಾಲಿ ಜಮೀನು, ಎಂದರೆ:–**<br>ಎ. 1000 ಚ.ಮೀ.ಗಿಂತ ಹೆಚ್ಚಲ್ಲದ | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.05% ಕ್ಕಿಂತ ಕಡಿಮೆಯಿಲ್ಲದ ಆದರೆ 0.1% ಕ್ಕಿಂತ ಹೆಚ್ಚಿಲ್ಲದೆ. |
| | ಬಿ. 1000 ಚ.ಮೀ.ಗಿಂತ ಹೆಚ್ಚಿನ ಆದರೆ 4000 ಚ.ಮೀ.ಗಿಂತ ಕಡಿಮೆ | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.025% ಕ್ಕಿಂತ ಕಡಿಮೆಯಿಲ್ಲದ ಆದರೆ 0.05% ಕ್ಕಿಂತ ಹೆಚ್ಚಿಲ್ಲದೆ. |
| | ಸಿ. 4000 ಚ.ಮೀ.ಗಿಂತ ಹೆಚ್ಚು | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.01% ಕ್ಕಿಂತ ಕಡಿಮೆಯಿಲ್ಲದ ಆದರೆ 0.02% ಕ್ಕಿಂತ ಹೆಚ್ಚಿಲ್ಲದೆ |
| ಸಿ | **ಜಾಹಿರಾತುಗಳು ಮತ್ತು ಹೋರ್ಡಿಂಗ್‌ಗಳ ಮೇಲೆ ತೆರಿಗೆ:** ಪ್ರತಿ ಚ.ಮೀ.ಗೆ ಅಥವಾ ಅದರ ಭಾಗಕ್ಕೆ | ತಿಂಗಳೊಂದಕ್ಕೆ ಐದು ರೂಪಾಯಿಗಳು |
| ಡಿ | ಮೊಬೈಲ್ ಟವರ್‌ಗಳ ಮೇಲೆ ತೆರಿಗೆ | ವಾರ್ಷಿಕ ಪ್ರತಿ ಟವರಿನ ಮೇಲೆ ಹನ್ನೆರಡು ಸಾವಿರ ರೂಪಾಯಿಗಳು. |
| ಇ | ವಿಂಡ್‌ಮಿಲ್‌ಗಳ ಮೇಲೆ ತೆರಿಗೆ | ಟರ್ಬೈನ್‌ಗಳನ್ನು ಆಧರಿಸಿ ವಾರ್ಷಿಕ 0.5 ರಿಂದ 1 ಲಕ್ಷ |
| ಎಫ್ | ಸೋಲಾರ್ ಪಾರ್ಕ್‌ಗಳ ತೆರಿಗೆ | ಸ್ವತ್ತಿನ ಮೂಲ ಮೌಲ್ಯದ ಮೇಲೆ 0.50% ಕ್ಕಿಂತ ಕಡಿಮೆಯಿಲ್ಲದ ಆದರೆ 1.50% ಕ್ಕಿಂತ ಹೆಚ್ಚಿಲ್ಲದೆ. |

**ವಿವರಣೆ :–**

1. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1957 ರ 45 ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು)
2. ಕಟ್ಟಡದ ಖಾಲಿ ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣದ ವಿಧಾನ, ಅದರ ಉಪಯೋಗ ಮತ್ತು ಕಟ್ಟಡದ ಆಯುಷ್ಯ ಮತ್ತು ನಿಯಮಿಸಬಹುದಾದ ಅಂತಹ ಇತರ ಯಾವುದೇ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ ನಿಯಮಿಸಲಾದ ತೆರಿಗೆಯ ನಿರ್ಧರಣೆ.

| | | |
|---|---|---|
| ಜಿ | ಮನೋರಂಜನೆಗಳ ಮೇಲೆ ಶುಲ್ಕ | ಪ್ರತಿ ಪ್ರದರ್ಶನಕ್ಕೆ ಐವತ್ತು ರೂಪಾಯಿಗಳು |
| ಹೆಚ್ | **ವಾಹನ ನಿಲುಗಡೆ ಶುಲ್ಕ** | **ಪ್ರತಿ ದಿನಕ್ಕೆ ರೂಪಾಯಿಗಳಲ್ಲಿ** |
| | i) ಬಸ್, ಲಾರಿ ಮುಂತಾದವುಗಳು | 50/– |
| | ii) ಕಾರ್ ಮತ್ತು ಲಘು ಮೋಟಾರು ವಾಹನಗಳು | 20/– |
| | iii) ಮೋಟಾರು ಸೈಕಲ್ | 10/– |
| | iv) ಸ್ಪ್ರಿಂಗ್ ಉಳ್ಳ ಇತರ ವಾಹನ | 3/– |
| | v) ಸ್ಪ್ರಿಂಗ್ ಇಲ್ಲದಿರುವ ಪ್ರತಿಯೊಂದು ಗಾಡಿ ಮತ್ತು ಇತರ ವಾಹನ | 2/– |
| | vi) ಪ್ರತಿಯೊಂದು ಬೈಸೈಕಲ್ ಮತ್ತು ತ್ರಿಚಕ್ರವಾಹನ | 1/– |
| ಐ | **ಮಾರುಕಟ್ಟೆಗಳ ಮೇಲೆ ಶುಲ್ಕ** | |
| | i) ಒಂದು ಚದುರ ಮೀಟರ್‌ಗಿಂತ ಹೆಚ್ಚಲ್ಲದ ಪ್ರತಿಯೊಂದು ಪ್ಲಾಟಿನ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |

| | | |
|---|---|---|
| | ii) ಪ್ರತಿ ಹೆಚ್ಚಿನ ಚದುರ ಮೀಟರ್ ಅಳತೆಯುಳ್ಳ ಪ್ಲಾಟ್ ಅಥವಾ ಅದರ ಭಾಗಕ್ಕೆ | ಪ್ರತಿ ದಿನಕ್ಕೆ ಎರಡು ರೂಪಾಯಿ |
| | iii) ಯಾವುದೇ ಸರಕಿನ ಪ್ರತಿ ಬಾಸ್ಕೆಟ್ ಅಥವಾ ಬ್ಯಾಗಿನ ಮೇಲೆ | ಪ್ರತಿ ದಿನಕ್ಕೆ ಎರಡು ರೂಪಾಯಿ |
| | iv) ಯಾವುದೇ ಸರಕಿನ ಬ್ಯಾಗನ್ನು ಹೇರುವ ಪ್ರತಿ ಗಾಡಿಯ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |
| ಜೆ | **ಪಶುಗಳ ನೋಂದಣಿಯ ಮೇಲೆ ಶುಲ್ಕ** | |
| | ಸಂತೆಗಳು ಮತ್ತು ಜಾತ್ರೆಗಳಲ್ಲಿ ಮಾರಾಟಕ್ಕಾಗಿ ತಂದ ಪ್ರತಿ ಪಶುವಿನ ಮೇಲೆ | ಪ್ರತಿ ದಿನಕ್ಕೆ ಐದು ರೂಪಾಯಿ |
| | ಮೇಯಿಸುವ ಜಮೀನಿನಲ್ಲಿ ಪಶುಗಳನ್ನು ಮೇಯಿಸುವುದಕ್ಕೆ ಶುಲ್ಕ | ಪ್ರತಿ ತಿಂಗಳಿಗೆ ಐದು ರೂಪಾಯಿ |
| | ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕ | ಮೂರು ನಾಳಗಳಿಗೆ ಪ್ರತಿ ಮೀಟರ್‌ಗೆ 450 ರೂಪಾಯಿಗಳು ಲೇಯಿಂಗ್ ಚಾರ್ಜ್, ಹೆಚ್ಚಿನ ನಾಳಗಳಿಗೆ ಪ್ರತಿ ಮೀಟರ್‌ಗೆ 75 ರೂಪಾಯಿ<br>ಮೇಲ್ವಿಚಾರಣೆ ಚಾರ್ಜ್ ಪ್ರತಿ ಮೀಟರ್‌ಗೆ 75 ರೂಪಾಯಿ ಹಿಂದಿರುಗಿಸಬಹುದಾದ ಭದ್ರತಾ ಠೇವಣಿ ಪ್ರತಿ ಮೀಟರ್‌ಗೆ 119.50 ರೂಪಾಯಿಯಂತೆ. |

ಗ್ರಾಮ ಪಂಚಾಯತಿಗಳು ಪ್ರಕರಣ 199 ರಡಿಯಲ್ಲಿ ವಿಧಿಸಬಹುದಾದ ತೆರಿಗೆಗಳು ಮತ್ತು ದರಗಳನ್ನು ಕಟ್ಟಡ ಮತ್ತು ಭೂಮಿಯ ಸಂಬಂಧದಲ್ಲಿ ಕನಿಷ್ಠ ಎರಡು ವರ್ಷಗಳಿಗೊಮ್ಮೆ ಹಾಗೂ ಅನುಸೂಚಿ-IVರ ರಲ್ಲಿ ನಿರ್ದಿಷ್ಟಪಡಿಸಿದ ಇತರ ಬಾಬ್ತುಗಳನ್ನು ಕನಿಷ್ಠ ಒಂದು ವರ್ಷಕ್ಕೊಮ್ಮೆ ತೆರಿಗೆ ಮತ್ತು ದರಗಳನ್ನು ಪರಿಷ್ಕರಿಸಲು ಈ ಕೆಳಕಂಡ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿದೆ.

1) ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ... ಅಧ್ಯಕ್ಷರು
2) ಗ್ರಾಮ ಪಂಚಾಯತಿಗೆ ಸಂಬಂಧಿಸಿದ ತಾಲ್ಲೂಕಿನ ಸ್ಟಾಂಪ್ ಮತ್ತು ನೊಂದಣಿ ಇಲಾಖೆಯ ಉಪ ನೋಂದಣಾಧಿಕಾರಿ ... ಸದಸ್ಯರು
3) ಸಂಬಂಧಿಸಿದ ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ... ಸದಸ್ಯರುಗಳು
4) ಸಂಬಂಧಿಸಿದ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ... ಸದಸ್ಯರು
5) ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ... ಸದಸ್ಯ ಕಾರ್ಯದರ್ಶಿ

ಕಟ್ಟಡಗಳ ಮೇಲೆ ತೆರಿಗೆಯನ್ನು ನಿರ್ಧರಿಸುವಾಗ "ವಾಸಕ್ಕೆಂದು ಉಪಯೋಗಿಸುವ ಕಟ್ಟಡ" ಹಾಗೂ "ವಾಸಕ್ಕಲ್ಲದ ವ್ಯಾಪಾರ, ವಾಣಿಜ್ಯ ಕಟ್ಟಡಗಳು" ಎಂದು ವರ್ಗೀಕರಿಸತಕ್ಕದ್ದು. ತೆರಿಗೆಯನ್ನು / ಶುಲ್ಕವನ್ನು ನಿರ್ಧರಿಸುವ ಮುನ್ನ ಅವಶ್ಯವಿದ್ದಲ್ಲಿ ಸಾರ್ವಜನಿಕರ, ಸಂಘ ಸಂಸ್ಥೆಯ ಜನಪ್ರತಿನಿಧಿಗಳೊಡನೆ ಸಮಾಲೋಚಿಸಬಹುದು. ಹಾಗೂ ಸ್ಥಳ ಪರೀಕ್ಷೆ ಮಾಡಿ ನಿರ್ಧಾರ ಕೈಗೊಳ್ಳಬಹುದು. ಸಮಿತಿಯು ಕೈಗೊಂಡ ಶಿಫಾರಸ್ಸನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಯು ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು. ಈ ಸಂಬಂಧ ಗ್ರಾಮ ಪಂಚಾಯತಿಯು ತನ್ನ ಸಭೆಯಲ್ಲಿ ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಬೇಕು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 70ರಡಿ ನಿರೂಪಿಸಿರುವ ಲೈಸೆನ್ಸ್ ಫೀಜುಗಳ ಬಗ್ಗೆಯೂ ಸಹ ಸಮಿತಿಯು ಪ್ರತ್ಯೇಕವಾಗಿ ಚರ್ಚಿಸಿ ಗ್ರಾಮ ಪಂಚಾಯತಿ

ವ್ಯಾಪ್ತಿಯಲ್ಲಿನ ವಿಮಾನ ನಿಲ್ದಾಣಗಳು, ಬಸ್ ನಿಲ್ದಾಣಗಳು, ವಾಣಿಜ್ಯ ಮಳಿಗೆಗಳು, ಟಿ.ವಿ. ಕೇಬಲ್ ಸೆಂಟರ್‌ಗಳು, ಹೋಟೆಲ್‌ಗಳು, ರಿಫ್ರೆಶ್‌ಮೆಂಟ್ ಸ್ಟಾಲ್‌ಗಳು, ರೆಸಾರ್ಟ್‌ಗಳು, ಸ್ಟೇ ಹೊಂಮ್ಸ್, ಕೋಳಿ ಮತ್ತು ಮಾಂಸದ ಮಳಿಗೆಗಳು, ವೈನ್‌ಸ್ಟೋರ್‌ಗಳು ಮುಂತಾದ ವಾಣಿಜ್ಯ ಕೇಂದ್ರಗಳು, ಕೈಗಾರಿಕಾ ಸ್ಥಾಪನೆಗೆ ಆವಶ್ಯಕವಾಗಿ ಪಾವತಿಸಬೇಕಾಗಿರುವ ಲೈಸೆನ್ಸ್ ಫೀಜುಗಳ, ಪರವಾನಗಿ ಶುಲ್ಕ ಹಾಗೂ ಪುನರ್ ನವೀಕರಣದ ಶುಲ್ಕದ ಬಗ್ಗೆ ನಿರ್ಣಯ ಕೈಗೊಳ್ಳತಕ್ಕದ್ದು.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿಸುವ ಕೈಗಾರಿಕೆಗಳು, ಅಂದರೆ ಯಾವುದರಲ್ಲಿ ವಿದ್ಯುಚ್ಛಕ್ತಿ, ಉಗಿಶಕ್ತಿ, ಜಲಶಕ್ತಿ ಅಥವಾ ಇತರೆ ಯಾಂತ್ರಿಕ ಶಕ್ತಿ ಬಳಸಲು ಉದ್ದೇಶಿಸಲಾಗಿದೆಯೋ ಅಥವಾ ಅಂತಹ ಕೈಗಾರಿಕೆಗಳು ಸ್ಥಾಪಿತವಾಗಿದೆಯೋ, ಅಂತಹ ಕೈಗಾರಿಕೆಗಳಿಗೆ ಗ್ರಾಮ ಪಂಚಾಯತಿಗೆ ಶುಲ್ಕವನ್ನು ಪಾವತಿಸಿ ಅನುಮತಿಯನ್ನು ಪಡೆಯಬೇಕು. ಈ ಶುಲ್ಕದ ಬಗ್ಗೆ ಹಾಗೂ ಕೈಗಾರಿಕೆ ಮತ್ತು ಅದರ ವ್ಯಾಪ್ತಿಯ ಪ್ರದೇಶದ ಮೇಲೆ ತೆರಿಗೆಯನ್ನು ವಿಧಿಸುವ ಬಗ್ಗೆ ಮೇಲೆ ತಿಳಿಸಿರುವ ಸಮಿತಿಯು ನಿರ್ಧಾರ ಕೈಗೊಳ್ಳತಕ್ಕದ್ದು. ಅಧಿನಿಯಮದ ಪ್ರಕರಣ 202 ರಲ್ಲಿ ಕೈಗಾರಿಕಾ ಪ್ರದೇಶದ ಮಾಲೀಕನು ಕೈಗಾರಿಕೆಗಾಗಿ ಅಥವಾ ನೌಕರರಿಗೆ ಕಾರ್ಖಾನೆ ವಸತಿಗಳೆಂದು ಮತ್ತು ಉದ್ಯಮಕ್ಕೆ ಸಂಬಂಧಿಸಿದ ಇತರೆ ಉದ್ದೇಶಗಳಿಗಾಗಿ ಉಪಯೋಗಿಸಿದ ಕಟ್ಟಡಗಳು ಮತ್ತು ಭೂಮಿಗಳಿಗಾಗಿ ನೈರ್ಮಲ್ಯ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿದರೆ ಗ್ರಾಮ ಪಂಚಾಯತಿಯು ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಗಳು, ದರಗಳು ಅಥವಾ ಫೀಜುಗಳ ಬದಲಾಗಿ ಗ್ರಾಮ ಪಂಚಾಯತಿ ಮತ್ತು ಅಂತಹ ಮಾಲೀಕನ ನಡುವೆ ಒಪ್ಪಿಕೊಳ್ಳಬಹುದಾದಂತೆ ವಾರ್ಷಿಕವಾಗಿ ಅಂಥ ಮೊಬಲಗನ್ನು ಸಂಗ್ರಹಿಸತಕ್ಕದ್ದು. ಒಂದು ವೇಳೆ ಒಪ್ಪಂದಕ್ಕೆ ಬರಲಾಗದಿದ್ದಲ್ಲಿ ವಿಷಯವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಉಲ್ಲೇಖಿಸಬಹುದು. ಈ ರೀತಿ ಉಲ್ಲೇಖ ಕಳುಹಿಸುವ ಮುನ್ನ ವಿವಾದಗ್ರಸ್ಥ ತೆರಿಗೆಯ ಶೇ.50 ರಷ್ಟು ಭಾಗವನ್ನು ಅಂತಹ ಮಾಲೀಕನು ಕಡ್ಡಾಯವಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಪಾವತಿಸತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಗ್ರಾಮ ಪಂಚಾಯತಿ ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಅಂತಹ ಮೊಬಲಗನ್ನು ನಿರ್ಧರಣೆ ಮಾಡಬಹುದು ಮತ್ತು ಅದು ಗ್ರಾಮ ಪಂಚಾಯತಿಗೂ ಮತ್ತು ಮಾಲೀಕನಿಗೂ ಬಂಧನಕಾರಿಯಾಗಿರತಕ್ಕದ್ದು.

ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯತಿ ತೆರಿಗೆ ಮತ್ತು ಫೀಜುಗಳು) ನಿಯಮಗಳು 1994ರ ನಿಯಮ 3(1)(a) ರಲ್ಲಿ ತಿಳಿಸಿರುವಂತೆ ಮೇಲೆ ತಿಳಿಸಿದ ತೀರ್ಮಾನವನ್ನು ಗ್ರಾಮ ಪಂಚಾಯತಿಯ ಸಾಮಾನ್ಯ / ವಿಶೇಷ ಸಭೆಯಲ್ಲಿ ಮಂಡಿಸಿ ಚರ್ಚಿಸುವುದು ಹಾಗೂ ಈ ಬಗ್ಗೆ ಗ್ರಾಮ ಪಂಚಾಯತಿಯು ನಿರ್ಣಯ ಕೈಗೊಳ್ಳಬೇಕು. ನಂತರ ಸದರಿ ನಿಯಮದ 3(1)(b) ರಲ್ಲಿ ವಿವರಿಸಿರುವಂತೆ ಗ್ರಾಮ ಪಂಚಾಯತಿ ಈ ನಿರ್ಣಯವನ್ನು ಪ್ರಕಟಿಸಬೇಕು. ಕರಪತ್ರಗಳ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕು. ಈ ನಿರ್ಣಯದ ಸಂಬಂಧ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ಮನದಟ್ಟು ಮಾಡಲು ಒಂದು ವಾರ ಕಾಲ ಸಾರ್ವಜನಿಕ ಪ್ರಕಟಣೆ ಹಾಗೂ ಡಂಗೂರದ ಮೂಲಕ ಪ್ರಚಾರ ಮಾಡಬೇಕು. ಈ ತೆರಿಗೆ ವಿವರಗಳನ್ನು ಗ್ರಾಮ ಪಂಚಾಯತಿಯಲ್ಲಿ ಸದಾಕಾಲ ಇರುವಂತೆ ಗೋಡೆಯ ಮೇಲಾಗಲಿ ಅಥವಾ ಕಪ್ಪು ಹಲಗೆಯ ಮೇಲಾಗಲಿ ಬರೆಸಬೇಕು. ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳ ಪ್ರಕಟನಾ ಫಲಕದಲ್ಲಿ ಪ್ರಕಟಿಸಬೇಕು.

ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಎಲ್ಲಾ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆ ವಿಧಿಸಲು ಕ್ರಮ ಕೈಗೊಳ್ಳತಕ್ಕದ್ದು. ಕೃಷಿಯೇತರ ಜಮೀನೆಂದು ಘೋಷಿತವಾಗಿಲ್ಲದ ಪ್ರದೇಶಗಳಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿದ್ದಲ್ಲಿ ಅಂಥಹ ಕಟ್ಟಡಗಳ ಮೇಲೂ ಸಹಾ ತೆರಿಗೆಯನ್ನು ವಿಧಿಸಬಹುದು. ಆದರೆ, ಗ್ರಾಮ ಪಂಚಾಯತಿಯು ತೆರಿಗೆ ವಿಧಿಸಿದ ನಂತರವೂ ಸಹ ಇಂತಹ ಸ್ವತ್ತು ಕರ್ನಾಟಕ ಭೂ ಕಂದಾಯ ಕಾಯ್ದೆಯನ್ವಯ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಆಗಿಂದಾಗ್ಗೆ ಹೊರಡಿಸುವ ಆದೇಶ ಮತ್ತು ಸುತ್ತೋಲೆಗಳ ಷರತ್ತಿಗೊಳಪಟ್ಟಿರುತ್ತದೆ. ಇನ್ನು ಮುಂದೆ ಅಂತಹ ಜಮೀನಿನಲ್ಲಿ ಕಟ್ಟಡ ಕಟ್ಟಲು ಯಾವುದೇ ಕಾರಣಕ್ಕೂ ಗ್ರಾಮ ಪಂಚಾಯತಿಯು ಪರವಾನಿಗೆ ನೀಡಕೂಡದು.

ಮೇಲೆ ತಿಳಿಸಿದ ರೀತಿಯಲ್ಲಿ ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ಥಿರ ಆಸ್ತಿ

ಸ್ವತ್ತುಗಳನ್ನು (ಸರ್ಕಾರಿ/ಸರ್ಕಾರೇತರ) ಕಡ್ಡಾಯವಾಗಿ ಆಸ್ತಿ ತೆರಿಗೆ ವಿಧಿಸುವ ಪಟ್ಟಿಯಲ್ಲಿ ಸೇರಿಸಬೇಕು.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕಟ್ಟಡ ಮತ್ತು ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9, 11ಎ ಮತ್ತು 11ಬಿ ಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸಬೇಕು. ಈ ಸಂಬಂಧ ಸರ್ಕಾರ ಆಗಿಂದಾಗ್ಗೆ ಹೊರಡಿಸಿರುವ ಸುತ್ತೋಲೆಗಳಲ್ಲಿನ ನಿರ್ದೇಶನಗಳಂತೆ ಕ್ರಮವಹಿಸಬೇಕು.

ಸರ್ಕಾರಿ ಕಛೇರಿ ಹಾಗೂ ಸರ್ಕಾರಿ ಕಟ್ಟಡಗಳನ್ನು ಹೊರತುಪಡಿಸಿ ಇತರ ಎಲ್ಲಾ ಕಟ್ಟಡಗಳಿಗೂ ತೆರಿಗೆ ವಿಧಿಸಬೇಕು ಹಾಗೂ ಇವುಗಳನ್ನು ಬೇಡಿಕೆ ಪಟ್ಟಿಯಲ್ಲಿ ಸೇರಿಸಬೇಕು. ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿರುವ ಸಂಸ್ಥೆಗಳ ಕಟ್ಟಡಗಳು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳ ಕಟ್ಟಡಗಳು, ಬ್ಯಾಂಕ್‌ಗಳು, ಸಹಕಾರಿ ಸಂಘಗಳ ಕಟ್ಟಡ ಸರ್ಕಾರೇತರ ಶಾಲಾ ಹಾಗೂ ಕಾಲೇಜುಗಳ ಕಟ್ಟಡ ಇತ್ಯಾದಿ ಎಲ್ಲಾ ಕಟ್ಟಡಗಳ್ನು ಬೇಡಿಕೆಯ ಪಟ್ಟಿಯಲ್ಲಿ ಸೇರಿಸತಕ್ಕದ್ದು ಹಾಗೂ ತೆರಿಗೆಯನ್ನು ವಿಧಿಸತಕ್ಕದ್ದು.

ತೆರಿಗೆಯ ಮೇಲೆ ಈ ಕೆಳಕಂಡ ಉಪಕರಗಳನ್ನು ಸೇರಿಸಿ ಒಟ್ಟಾರೆ ಮೊತ್ತವನ್ನು ತಪ್ಪದೆ ವಸೂಲಿ ಮಾಡಿ, ಉಪಕರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಬೇಕು.

ಆರೋಗ್ಯ ಕರ – 15%, ಶಿಕ್ಷಣ ಕರ – 10%, ಗ್ರಂಥಾಲಯ ಕರ – 6%, ಭಿಕ್ಷುಕರ ಕರ – 3%.

**ಪ್ರತಿ ಮನೆಗೆ ಸರಬರಾಜು ಮಾಡಲಾಗುವ ವಿಧಿಸುವ ನೀರಿನ ದರ ಪ್ರತಿ ಮಾಹೆಗೆ.**

1) ಮನೆಗಳಿಗೆ ನೇರ ಸಂಪರ್ಕ – ಕನಿಷ್ಟ 25 ರೂ.

2) ಕಿರು ನೀರು ಸರಬರಾಜು ಯೋಜನೆ/ ಸಾರ್ವಜನಿಕ ನಳದ ನೀರು – ಕನಿಷ್ಟ 10 ರೂ.

ಯಾವುದೇ ತೆರಿಗೆ, ದರ ಅಥವಾ ಫೀಜು ಬಾಕಿ ಇರುವಾಗ ಗ್ರಾಮ ಪಂಚಾಯತಿಯು ಕಾರ್ಯ ಸಾಧ್ಯವಾದಷ್ಟು ಕಡಿಮೆ ವಿಳಂಬದೊಂದಿಗೆ ಅದರ ಸಂದಾಯಕ್ಕೆ ಹೊಣೆಗಾರನಾಗಿರುವ ವ್ಯಕ್ತಿಗೆ ಯಾವ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಹಣ ಸಂದಾಯ ಮಾಡಬೇಕೆಂದು ನಿರ್ದಿಷ್ಟಪಡಿಸಿ ಬಾಕಿ ಇರುವ ಮೊಬಲಗಿಗೆ ತಗಾದೆ ಬಿಲ್ಲನ್ನು ಕಳುಹಿಸಿ ಪ್ರಕರಣ 200 ರನ್ವಯ ಬಾಕಿ ವಸೂಲಾತಿಗಾಗಿ ಕ್ರಮ ಜರುಗಿಸತಕ್ಕದ್ದು.

**(ಎಂ.ಕೆ. ಕೆಂಪೇಗೌಡ)**
ನಿರ್ದೇಶಕರು(ಪಂ.ರಾಜ್-1), ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ



ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಂಡ ಕಾಮಗಾರಿಯ ವಿಹಂಗಮ ನೋಟ





ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಮಹಿಳಾ ಕಾರ್ಮಿಕರು ಕೆಲಸ ಮಾಡಲು ಸನ್ನದ್ಧರಾಗಿರುವುದು



ಕೂಲಿಕಾರರು ಕೆರೆಯ ಹೂಳೆತ್ತುತ್ತಿರುವ ನೋಟ

# KARNATAKA VIKAS : APRIL 2017

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru on 9th, 10th, 11th of every month.
This issue is permitted to be posted on 22nd April 2017


## ಸ್ವಸಹಾಯ ಗುಂಪುಗಳು ಅನುಸರಿಸಬೇಕಾದ

# ಪಂಚಸೂತ್ರಗಳು

ಪ್ರತಿವಾರ ಸಭೆ ಸೇರುವುದು





ಪ್ರತಿವಾರ ಉಳಿತಾಯ ಮಾಡುವುದು

ಆಂತರಿಕ ಸಾಲ ಪಡೆಯುವುದು





ಸಾಲ ಮರುಪಾವತಿ ಮಾಡುವುದು

ಲೆಕ್ಕಪತ್ರಗಳ ನಿರ್ವಹಣೆ ಮಾಡುವುದು




Name of the Editor
**Mubarak Ahmed**

Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00